ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 49
ಡಿಸೆಂಬರ್ 08, 2013 ಪುಟ 16 ರೂ. 10/-



ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯಕ್ಕೆ ಬಲಿಯಾದ ರೈತ ವಿಠಲ ಅರಬಾವಿ





ಅಂಗವಿಕಲರಿಗೆ ನೇಮಕಾತಿಯಲ್ಲಿ ಮೀಸಲಾತಿ ಸಮ್ಮೇಳನದ ಆಗ್ರಹ





ಕಾಲುಬಾಯಿ ರೋಗ: ಸಹಸ್ರಾರು ರಾಸುಗಳ ಸಾವು

ಧರ್ಮಸ್ಥಳ ಅಸಹಜ ಸಾವುಗಳ ಸಿಬಿಐ ತನಿಖೆಗೆ ಒತ್ತಾಯಿಸಿ ಕಾಲ್ನಡಿಗೆ ಜಾಥಾ

ಜಾಗತೀಕರಣ ಯುಗದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎಂಬ ಮೀಸಲಾತಿ

ಜೋಳಮನ ದುಡಿ

ಜಿ. ಎನ್. ನಾಗರಾಜ್ ಭಾಗ –4

ಇದು ನವೆಂಬರ್ ತಿಂಗಳು. ರಾಜ್ಯೋತ್ಸವದ ಹೆಸರಿನಲ್ಲಿ ಎಲ್ಲೆಲ್ಲೂ ಕನ್ನಡದ ಬಗೆಗಿನ ಪ್ರೇಮ ಚಿಮ್ಮುವ ದಿನಗಳು. ಮೀಸಲಾತಿಯ ಬಗ್ಗೆ ಚರ್ಚೆ ಮಾಡಲೆಂದು ಈ ಲೇಖನ ಮಾಲೆಯನ್ನು ಬರೆಯಲಾರಂಭಿಸಿದ ನಾನು ಈ ನವೆಂಬರ್ ಪ್ರಭಾವಕ್ಕೊಳಗಾಗಿ ಎನುವಂತೆ ಪರಂಪರಾಗತ ಜಾತಿ ವ್ಯವಸ್ಥೆಯ ಬದ್ಧ ಮೀಸಲಾತಿಯ ಒಂದು ಪ್ರಧಾನ ಸಾಧನವಾಗಿ ಭಾಷೆಯ ದುರ್ಬಳಕೆಯ ಚರ್ಚೆಗೆ ಹೊರಳಿದ್ದೇನೆ.

ಇಂಗ್ಲಿಷಿನ ಚಪ್ಪಡಿಯಡಿಯ ಹಸುಳೆ ಚೀತ್ಕಾರ
ಕೇಳಿಸದೆ ಕಿವುಡರಿರಾ, ನಿಮಗೇಕೆ ಅಧಿಕಾರ ?
ಕೇಳಿಯೂ ಸುಮ್ಮನಿರೆ, ಕೋಟಿ ಧಿಕ್ಕಾರ

ಇದು ಕರ್ನಾಟಕ ರಾಜ್ಯ ಏಕೀಕರಣವಾದ ಮೇಲೆ ರಾಷ್ಟ್ರ ಕವಿ ಕುವೆಂಪುರವರ ಗುಡುಗು. ಹಲವು ವೇದಿಕೆಗಳಲ್ಲಿ ತಮ್ಮ ಭಾಷಣದ ಮೂಲಕ ಹಾಗೂ ಕವಿತೆಗಳಲ್ಲಿ ಈ ಅಭಿಪ್ರಾಯವನ್ನು ಮತ್ತೆ, ಮತ್ತೆ ವ್ಯಕ್ತಪಡಿಸಿದ್ದಾರೆ ಅವರು. ಜನಪದರು ಮಾತನಾಡುವ ಕನ್ನಡಕ್ಕೂ ಸಂಸ್ಕರಿಸಿದ ಕನ್ನಡಕ್ಕೂ ಇರುವ ವ್ಯತ್ಯಾಸವೇ ಕೆಳಜಾತಿಗಳನ್ನು, ಮುಸ್ಲಿಮ್ ಅಲ್ಪ ಸಂಖ್ಯಾತರನ್ನು ಶಿಕ್ಷಣದಲ್ಲಿ ಅಪಮಾನಿತರಾಗುವಂತೆ ಮಾಡುತ್ತದೆ ಎಂಬುದನ್ನು ಕಂಡಿದ್ದೇವೆ. ಇನ್ನು ಇಂಗ್ಲಿಷ್ ಎಂಬ ನಮ್ಮ ದೇಶೀ ಭಾಷೆಗಳಿಂದ ಬಹುದೂರವಾದ ಭಾಷೆಯ ಕಲಿಕೆ ಭಾರತದ ಎಲ್ಲರನ್ನೂ ಅನುಕೂಲವಲ್ಲದ ಸ್ಥಿತಿಗೆ ತಳ್ಳುತ್ತದೆ. ಆದರೆ ಭಾರತದಲ್ಲಿ ಮೊದಲ ಬಾರಿಗೆ ಇಂಗ್ಲಿಷ್ ಭಾಷೆಯ ಶಿಕ್ಷಣ ಆರಂಭವಾದಾಗ ಶಿಕ್ಷಣವೇ ಉದ್ಯೋಗವಾದ, ಆಡಳಿತ ನೌಕರಿಗಳೇ ಜೀವನಾಧಾರವಾಗಿದ್ದ ಬ್ರಾಹ್ಮಣರಿಗೆ ಮತ್ತು ಈ ಶಾಲೆಗಳು ಆರಂಭವಾದ ನಗರ ಪ್ರದೇಶಗಳ ಇತರ ಮೇಲ್ಜಾತಿಗಳಿಗೆ ಈ ಶಿಕ್ಷಣದ ಪ್ರಯೋಜನ ದಕ್ಕಿತು. ಭಾರತ ಆಧುನಿಕ ಯುಗಕ್ಕೆ ಪ್ರವೇಶ ಮಾಡುವಾಗ ಇದು ಅವರಿಗೆ ಸಿಕ್ಕ ಅತಿ ದೊಡ್ಡ ಮೀಸಲಾತಿ. ಇದರಲ್ಲಿ ಮೆರಿಟ್ ಎಂಬ ಮಾತಿಗೆ ಅವಕಾಶವೆಲ್ಲಿಂದ ಬರುತ್ತದೆ. ಆಗ ಪಡೆದ ಈ ಮೀಸಲಾತಿಯ ಪ್ರಯೋಜನ ತಲೆಮಾರಿನಿಂದ ತಲೆಮಾರಿಗೆ ಪ್ರವಹಿಸಿ ಇಂದಿಗೂ ಅವರಿಗೆ ಸಿಕ್ಕುತ್ತಿದೆ. ಇಂಗ್ಲಿಷ್ ಶಿಕ್ಷಣ ಈಗಾಗಲೇ ಪಡೆದ ಮನೆಗಳಲ್ಲಿ ಹಿರಿಯರು ಇಂಗ್ಲಿಷಿನಲ್ಲಿ ಮಾತನಾಡುವುದನ್ನು ಅನುಕರಿಸಿ, ಅವರು ಪತ್ರಿಕೆ, ಪುಸ್ತಕಗಳನ್ನು ಓದುವುದನ್ನು ನೋಡಿ ಎಳೆಯ ವಯಸ್ಸಿನಲ್ಲಿಯೇ ಇಂಗ್ಲಿಷನ್ನು ಉಸಿರಾಡುತ್ತಿರುತ್ತಾರೆ. ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸುವಷ್ಟರ ಹೊತ್ತಿಗೆ ಅದ-ಕ್ಕೆ ಹೊಂದಿಕೊಳ್ಳುವ ಸ್ಥಿತಿ ಮಾತ್ರವಲ್ಲ ಅದನ್ನು ಕಲಿಯಬೇಕೆನ್ನುವ ಬಯಕೆಯನ್ನು ಹೊಂದಿರುತ್ತಾರೆ. ಶಿಕ್ಷಣದಲ್ಲಿ ಈ ಅಂಶ ಬಹಳ ಪ್ರಭಾವವನ್ನು ಬೀರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಇನ್ನು ಅವರಿಗೆ ಮನೆಗಳಲ್ಲಿ ಪಾಠಗಳನ್ನು ಓದಲು ಸಿಗುವ ಸಮಯ, ತಂದೆ, ತಾಯಿ ಅಥವಾ ಹಿರಿಯ-ರಿಂದ ಮನೆಪಾಠ ಹಾಗೂ ಕಲಿಕೆಗೆ ನಿರಂತರ ಗಮನ ಇವೆಲ್ಲವೂ ಮೇಲ್ಜಾತಿಯ, ನಗರ ಪ್ರದೇಶದ ಮೇಲ್ಜಾತಿ, ಮೇಲ್ವರ್ಗದ ಜನರಿಗೆ ಸಿಕ್ಕ ಮೀಸಲಾತಿಯ ವಿವಿಧ ಆಯಾಮಗಳು.

ಬೈಗುಳ, ಅವಮಾನ, ಶಿಕ್ಷೆ– ದುಡಿಮೆಗೆ ಇದೇ ಬಹುಮಾನ

ಇದಕ್ಕೆ ವಿರುದ್ಧವಾಗಿ ಕೆಳಜಾತಿಗಳ ಅದರಲ್ಲಿಯೂ ಹಳ್ಳಿಗಳ ಜನರ ಪರಿಸ್ಥಿತಿ. ಈ ಮನೆಗಳ ಬಾಲಕ–ಬಾಲಕಿಯರು ತಮ್ಮ ತಮ್ಮ ಮನಗೆಲಸಗಳನ್ನು ಮಾಡುತ್ತಲೇ ಶಾಲೆಗೆ ಓಡಿಬರಬೇಕು. ತಡವಾಗಿ ಬಂದು ಮೇಷ್ಟರುಗಳಿಂದ ಬೈಯಿಸಿಕೊಳ್ಳಬೇಕು. ಮನೆಯ ಅಥವಾ ತಮ್ಮ ಕಸುಬಿನ ಕೆಲಸಗಳು ಹೆಚ್ಚಾಗಿರುವ ಸಮಯದಲ್ಲಿ ಶಾಲೆಗೆ ಗೈರುಹಾಜರಿ– ಅದ-ರಿಂದ ಕಳೆದುಕೊಳ್ಳುವ ಪಾಠಗಳು. ಮುಂದಿನ ಪಾಠಗಳನ್ನು ಅರ್ಥಮಾಡಿಕೊಳ್ಳಲಾಗದ ಕಷ್ಟ. ಈ ಯಾವ ಸಾಮಾಜಿಕ ಪರಿಸ್ಥಿತಿಯನ್ನೂ ಗಮನಕ್ಕೆ ತೆಗೆದುಕೊಳ್ಳದ ಮೇಷ್ಟರುಗಳಿಂದ ಶಾಲೆಯಲ್ಲಿ ಬೈಗುಳಗಳ ಸುರಿಮಳೆ, ಅಪಮಾನಗಳು,



ಹೊಡೆತಗಳು, ಇತರ ಶಿಕ್ಷೆಗಳು. ಮನೆಯಲ್ಲಿ ಓದಲು ಸಮಯವಿಲ್ಲ, ಕಲಿಸಿಕೊಡುವವರೂ ಇಲ್ಲ. ಇವೆಲ್ಲಾ ಯಾತಕ್ಕಾಗಿ ? ಯಾವ ವಿದ್ಯಾರ್ಥಿಗಳು ಚೆನ್ನಾಗಿ ಓದುವವರೆಂದು ಹೆಸರು ಪಡೆಯುತ್ತಾರೋ ಅಂತಹ ಕುಳಿತು ಉಣ್ಣುವವರಿಗೆ ಆಹಾರ, ಇನ್ನಿತರ ವಸ್ತುಗಳನ್ನು ಒದಗಿಸುವುದಕ್ಕಾಗಿ. ಈ ಮೊದಲೇ ವಿವರಿಸಿದಂತೆ ಈ ಕೆಲಸಗಳಲ್ಲಿ ಅವರು ಗಳಿಸಿದ ಜ್ಞಾನ ಮತ್ತು ಅನುಭವಕ್ಕೆ ಬೆಲೆಯೇ ಇಲ್ಲ.

2000–01 ರಲ್ಲಿ ಒಂದನೆಯ ತರಗತಿಗೆ ಸೇರಿದ 100 ಮಕ್ಕಳಲ್ಲಿ ಐದನೇ ತರಗತಿಯವರೆಗೂ ಶಾಲೆ ಬಿಟ್ಟವರು 15 ಜನರು. ಇದರಲ್ಲಿ ಪ್ರೌಢಶಾಲೆಗೆ ಸೇರುವ ವೇಳೆಗೆ ಶಾಲೆ ಬಿಟ್ಟವರು 57 ಎಸ್ಸೆಸ್ಸೆಲ್ಸಿ ಪಾಸಾದವರು ಕೇವಲ 25. ಈ ರೀತಿ ಶಾಲೆ ಬಿಟ್ಟವರಲ್ಲಿ ದೊಡ್ಡ ಭಾಗ ದಲಿತರು, ಹಿಂದುಳಿದ ಜಾತಿಯವರು ಅದರಲ್ಲಿಯೂ ಹುಡುಗಿಯರು. ಇವರೆಲ್ಲರಿಗಿಂತ ಹೆಚ್ಚಾಗಿ ಮುಸ್ಲಿಮರು ಎಂದು ಇತ್ತೀಚಿನ ಒಂದು ಅಧ್ಯಯನ ಹೇಳುತ್ತದೆ. ಇಂದು ಸ್ವಲ್ಪ ಉತ್ತಮವಾಗಿದೆಯೆಂದು ಹೇಳುವರಾದರೂ ಬಹಳ ಉತ್ತಮ ಗೊಂಡಿಲ್ಲ. ಇದರಲ್ಲಿ ಇಂಗ್ಲಿಷಿನ ಪಾಲೆಷ್ಟು ? ಇಂಗ್ಲಿಷ್ ಎಂಬ ಭಾಷಾ ಕಲಿಕೆ ಈ ಶೇ. 75 ಭಾಗದ ವಿರುದ್ಧ ಮೀಸಲಾತಿಯಾಗಿ ಕೆಲಸ ಮಾಡಿಲ್ಲವೇ ?


ಇಂತಹ ಪರಿಸ್ಥಿತಿಯನ್ನೇ ಕುವೆಂಪುರವರು

ಇಂಗಿ ಹೋಗುತಿದೆ ಇಂಗ್ಲಿಷಿನ–
ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ–ಬುದ್ಧೀ–ಪ್ರತಿಭಾ
ಕಲ್ಲ ಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ
ಕಿಮುಳ್ಚಿ ಗುಜ್ಜಾಗುತಿದೆ ಮೊಳೆವ ಚೈತನ್ಯ :
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯ ದೈನ್ಯ.

ಎಂದು ಬಣ್ಣಿಸಿದರು.

ಭೂಮಿಯಲ್ಲಿ ಬಲವಾದ ಬೇರನ್ನಿಳಿಸಿ ಆಕಾಶದೆತ್ತರಕ್ಕೆ ಬೆಳೆವ ಸಾಮರ್ಥ್ಯವುಳ್ಳವರಿಗೆ ಈ ಶಿಕ್ಷಣದ ವಿಷಮಯ ಸ್ಥಿತಿಯಿಂದ ಕಡಿಮೆ ಅಂಕ ಪಡೆಯುವ, ಫೇಲಾಗುವ, ವಿ ಂ ೀ ಸ ' ಲಾ ತಿ ಗ ಾ ಗಿ ಗೋಗರೆಯುವ ದಾಸ್ಯ ದೈನ್ಯ ಸ್ಥಿತಿ. ಶಿಕ್ಷಣ ವ್ಯವಸ್ಥೆ ಅಘೋಷಿತವಾದ ಇಂತಹ ಮೀಸಲಾತಿಗಳನ್ನು ತೆ-ೂಡೆದು ನಿಜವಾದ ಪ್ರತಿಭೆಯನ್ನು, ಜ್ಞಾನವನ್ನು, ಮೆರಿಟ್ ಅನ್ನು ಮನ್ನಿಸುವಂತೆ ರೂಪುಗೊಂಡರೆ ಈ ವಿದ್ಯಾರ್ಥಿಗಳು ಬಾನೆಡೆಗೆ ತಲೆಯೆತ್ತಿ ಮೆರೆಯುತ್ತಾರೆ. ಆಗ ಇಂದು ಮೆರಿಟ್‌ನ ವಾರಸುದಾರರೇ ನಾವು ಎನ್ನುವವರಿಗೆ ಮೀಸಲಾತಿ ನೀಡಬೇಕಾದ ಪರಿಸ್ಥಿತಿ ಒದಗುತ್ತದೆ.

ಆದರೆ ಕರ್ನಾಟಕದ ಮಾತ್ರವಲ್ಲ ಭಾರತ ದೇಶದ ಸರ್ಕಾರಗಳೂ ಇಂತಹ ಜನಪರ, ದೇಶ ಭಾಷೆಗಳ ಪರವಾದ ನೀತಿಯನ್ನು ಅನುಸರಿಸಲಿಲ್ಲ. ಇಂಗ್ಲಿಷ್ ಭಾಷೆಯನ್ನೇ ಪ್ರಧಾನವಾಗಿ ಮಂದುವರೆಸುವ ಈ ಆಳುವ ಪಕ್ಷಗಳ ಕುತಂತ್ರ ಮೇಲ್ಜಾತಿಗಳ, ಮೇಲ್ವರ್ಗಗಳ ಪರವಾದ ಅಘೋಷಿತವಾದ ಮಿಸಲಾತಿಯಾಗಿ ಪರಿಣಮಿಸಿತು. ಕೇವಲ ಉದ್ಯೋಗಗಳನ್ನು ಮಾತ್ರವಲ್ಲದೆ ಜನರ ಬದುಕನ್ನೇ ಅವರ ಒತ್ತೆಯಾಳಾಗಿಸುವ ಅಪರಾಧ ಅವ್ಯಕ್ತವಾಗಿ ನಡೆಯುತ್ತಿದೆ. ಈ ಬಗ್ಗೆ ರಾಜ್ಯದಲ್ಲಿ



ಸರಿಯಾದ ಎಚ್ಚರ ಮೂಡಲಿಲ್ಲ. ಏಕೀಕರಣ-ಕ್ಕಾಗಿ ನಡೆದ ಚಳುವಳಿಯ ಮುಂದುವರಿಕೆಯಾಗಿ ಆಡಳಿತದ ಕನ್ನಡೀಕರಣ, ಶಿಕ್ಷಣದ ಕನ್ನಡೀಕರಣ ನಡೆಯಲಿಲ್ಲ.

ಅದರಿಂದ ಆದ ವಿವಿಧ ರೀತಿಯ ಅಪಾರ ನಷ್ಟವನ್ನು ಲೆಕ್ಕ ಹಾಕಲು ಸಾಧ್ಯವೇ ?

ಇಂಗ್ಲಿಷ್ ಪ್ರಾಧಾನ್ಯದಿಂದ ಜನ ಕೋಟಿಗೆ ಆದ ನಷ್ಟ

ನ್ಯಾಯಾಲಯದ ಭಾಷೆ ಇಂಗ್ಲಿಷ್ ಭಾಷೆಯಾಗಿರುವುದರಿಂದ ಅನಕ್ಷರಸ್ಥ ಜನ ಸಮುದಾಯಕ್ಕೆ, ಕನ್ನಡ ಬರೆಯಬಲ್ಲವರಿಗೂ ಯಾವುದೆಲ್ಲ ರೀತಿಯಲ್ಲಿ ಕಷ್ಟಗಳುಂಟಾಗಿರಬಹುದು ? ಆಗುತ್ತಿರಬಹು ಇಂಗ್ಲಿಷ್ ಕಲಿತ ಮೇಲ್ಜಾತಿಗಳಿಗೆ ವಕೀಲಿ ಹಾ ನ್ಯಾಯಾಲಯದ ಹುದ್ದೆಗಳು ಬಹಳ ಮೀಸಲಾದಂತಾಗಿರಲಿಲ್ಲವೇ ? ಈಗಲೂ ಅ ಪರಿಣಾಮ ದೇಶದ ಉಚ್ಚ ನ್ಯಾಯಾಲಯಗ ಪ್ರಖರವಾಗಿಯೇ ಇದೆ. ಈ ಮೀಸಲಾತಿ ಕೆಳಜಾತಿಗಳಿಗೆ ಗಣನೀಯ ನಷ್ಟವುಂಟು ಮಾ ಆದರೆ ಅದಕ್ಕಿಂತ ಮಿಗಿಲಾದ ನಷ್ಟಗಳು !

ನ್ಯಾಯಾಲಯದಲ್ಲಿ ಏನು ನಡೆಯು ಎಂಬುದೇ ಗೊತ್ತಾ ಪರಿಸ್ಥಿತಿಗೆ ದೂಡಲ್ಪಟ್ಟ ಇಂಗ್ಲಿ ಅರಿಯದ ಕಕ್ಷಿದಾ ಅನುಭವಿಸಿದ ಕಷ್ಟಗಳು ಎಷ ಎಷ್ಟು ಜನ ಆಸ್ತಿ ಪಾಸ್ತಿಯ ಕಳೆದುಕೊಂಡಿಲ್ಲ. ನ್ಯಾಯಾಲಯದಲ್ಲಿ ತ ಪರವಾಗಿಯೇ ಆದ ತೀರ್ಪು ಕೂಡ ಗೊತ್ತಾ ಆಸ್ತಿ ಕಸಿಯುವವರ ಕುತಂತ್ರಗಳಿಗೆ ತುತ್ತಾದವ ಬಹುತೇಕ ಗ್ರಾಮೀಣ ಜನರ; ಅದರಲ್ಲಿಯೂ ಜಾತಿಗಳವರ ಅಸಂಖ್ಯ ಉದಾಹರಣೆಗಳು ಭಾಷಾ ನೀತಿಯ ಪರಿಣಾಮವಲ್ಲವೇ ? ಜೊ ಈ ಕಾರಣದಿಂದಾಗಿಯೇ ದುಬಾರಿ ಫೀಸುಗಳ ಈ ಅನಕ್ಷರಸ್ಥ ಜಾತಿಗಳ ಬಡವರು ತೆರಬೇ ಬಂದಿಲ್ಲವೇ ? ಈ ಫೀಸುಗಳನ್ನು ತೆರಲೆಂ ತಮ್ಮ ಮನೆ ಮಾರುಗಳನ್ನು, ತಮ್ಮ ಮನೆ ಮಹಿಳೆಯರ ಆಭರಣಗಳನ್ನು ಮಾರಬೇಕ ಬಂದಿಲ್ಲವೇ ? ಹೀಗೆ ಎಷ್ಟು ಆಸ್ತಿ ಕೆಳಜಾತಿ ಬಡವರ ಕೈ ಬಿಟ್ಟಿದೆ ಎಂಬ ಲೆಕ್ಕ ಹಾಕಲು ಸಾಧ್ಯ ? ಅದೇ ರೀತಿ ಮೇಲ್ಜಾತಿ ಮೇಲ್ವರ್ಗಗಳಿಗೆ ಅಘೋಷಿತ ಮೀಸಲಾತಿಯಿಂದ ಆದ ದಿಢೀ ಆಸ್ತಿ ವೃದ್ಧಿಯೆಷ್ಟು ?

ವಿಜ್ಞಾನ–ತಂತ್ರಜ್ಞಾನಗಳ ವಿಷಯದ ಇಂಗ್ಲಿಷ್ ಭಾಷೆಯ ಅನಿವಾರ್ಯತೆ ಎಂ ವಾದಕ್ಕಾಗಿ ಒಪ್ಪಿಕೊಂಡರೂ ಜನರ ದಿನದಿನ ಜೀವನಕ್ಕೆ ಸಂಬಂಧಿಸಿದ ವಿಷಯಗಳ ವ್ಯವಹರಿಸುವ ನ್ಯಾಯಾಲಯದಲ್ಲಿ ದೇ ಭಾಷೆಗಳನ್ನು ಬಳಸುವುದಕ್ಕೆ ಅಡ್ಡಿಯಾಗಿ ಏನು ? ಸ್ವಾತಂತ್ರ್ಯ ಬಂದ ನಂತರವೂ ಬ್ರಿಟಿಷ ಕಾಲದ ಕಾನೂನುಗಳನ್ನೇ, ಅ ನ್ಯಾಯಾಲಯ ಪದ್ಧತಿಯನ್ ಮುಂದುವರೆಸಿದ್ದೇ ಕಾರಣವಲ್ಲ ? ಇಂದಿಗೂ ನಮ್ಮ ಅನೇ ಕಾನೂನುಗಳು 1850 ರಿಂದ 19 ನಡುವೆ ಜಾರಿಗೆ ಬಂದವು. ದೇಶದಲ್ಲಿ ಪ್ರಜಾಪ್ರಭುತ್ವವಿಲ್ಲದಿರುವಾ ಲೋಕಸಭೆ, ರಾಜ್ಯ ಸಭೆ, ವಿಧಾ ಸಭೆಗಳೆಂಬ ಕಾನೂನು ರಚಿಸು ಚರ್ಚಿಸುವ ವಿಧಾನವಿಲ್ಲದಿರುವಾ ಯಾರೋ ಕೆಲವು ಬ್ರಿಟಿಷ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದ ರೂಪಿಸಿದ, ಭಾರತೀಯರನ ಹತ್ತಿಕ್ಕಲು, ಅಜ್ಞಾನದಲ್ಲಿಡಲ ತಮ್ಮ ಮೇಲ್ಮೆಯನ್ನು ಮೆರೆಸಲ ರೂಪಿಸಿದ ಕಾನೂನುಗಳನ ಹಾಗೆಯೇ ಮುಂದುವರೆಸಲು ಕಾರಣವೇನ ? ಸ್ವಾತಂತ್ರ್ಯಾನಂತರವೂ ತಮ್ಮ ಮೇಲ್ಮೆಯನ ಮೆರೆಸುವ ಕೆಳಜಾತಿ, ವರ್ಗಗಳನ್ನು ಹತ್ತಿಕ್ಕು ಅಗತ್ಯ ಮೇಲ್ಜಾತಿ, ಮೇಲ್ವರ್ಗಗಳಿಗೆ ಇತ್ತ ಎಂಬುದು ಇದರಿಂದ ಸಾಬೀತಾಗುತ್ತದೆ.

ಇನ್ನು ಈ ಕಾನೂನುಗಳ ಅನುವಾದ ಬಳಸಿದ ಭಾಷೆಯೋ ? ಅದರಲ್ಲಿ ಕನ್ನಡ ಹುಡುಕಬೇಕಾಗುತ್ತದೆ. ಈಗ ಕನ್ನಡದಲ್ಲಿಯೆ ಕಾನೂನುಗಳನ್ನು ರಚಿಸುತ್ತೇವೆ ಎಂಬ ಮಾ

ಪುಟ 15

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯಕ್ಕೆ ರೈತ ವಿಠಲ ಅರಬಾವಿ ಬಲಿ

ಕಳೆದ ಮೂರು ತಿಂಗಳಿಂದ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟಕ್ಕೆ ಸ್ಪಂದಿಸದ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯ ಧೋರಣೆಗೆ ಬೇಸತ್ತು ರಾಯಬಾಗ ತಾಲೂಕು ಕಂಕಣವಾಡಿ ಗ್ರಾಮದ ರೈತ ವಿಠಲ ಭೀಮಪ್ಪ ಅರಬಾವಿ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ಆರಂಭವಾದ ದಿನದಿಂದಲೇ ಕಬ್ಬು ಬೆಳೆಗಾರರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿಠಲ ಅರಭಾವಿ ನವೆಂಬರ್ 27ರಂದು ವೇದಿಕೆಯಲ್ಲಿ ಭಾಷಣ ಮಾಡಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಅನಂತರ ಹತ್ತಿ ಬೆಳೆಗೆ ಸಿಂಪಡಿಸುವ ಕ್ರಿಮಿನಾಶಕವನ್ನು ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡಿದ್ದರು. ಕೆ.ಎಲ್.ಇ. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಆತ್ಮಹತ್ಯೆ ಮಾಡಿಕೊಂಡ ರೈತ ವಿಠಲ ಅರಭಾವಿ ಚಿಕ್ಕ ಹಿಡುವಳಿದಾರರಾಗಿದ್ದು ಬೇರೊಬ್ಬ ರೈತನ 8 ಎಕರೆ ಭೂಮಿಯನ್ನು ಗೇಣಿಗೆ ಪಡೆದು ಬೆಳೆದಿದ್ದ 120 ಟನ್ ಕಬ್ಬನ್ನು ಮುಧೋಳದ ನಿರಾಣಿ ಶುಗರ್ಸ್‌ಗೆ ಮಾರಾಟ ಮಾಡಿದ್ದರು. ಆದರೆ ಹಣ ಪಾವತಿಯಾಗಿರಲಿಲ್ಲ. ಬ್ಯಾಂಕಿನಿಂದ ಪಡೆದ ಲಕ್ಷಾಂತರ ರೂ. ಸಾಲ ತೀರಿಸಲಾಗದೇ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ಎನ್ನಲಾಗಿದೆ.

ರೈತರ ಆತ್ಮಾಹುತಿಯಿಂದ ಕಂಗೆಟ್ಟ ಸರ್ಕಾರ ವಿಠಲ ಅರಭಾವಿ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಘೋಷಿಸಿದೆ. ವಿರೋಧ ಪಕ್ಷಗಳು ಸಹ ಪರಿಹಾರ ನೀಡುವುದಾಗಿ ಘೋಷಣೆ ಮಾಡಿವೆ ಮಾತ್ರವಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸುತ್ತಿವೆ. ಕಬ್ಬು ಬೆಳೆಗಾರರ ಪ್ರಶ್ನೆಯ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಮುಂತಾದ ಪಕ್ಷಗಳು ಹಿಂದಿನಿಂದಲೂ ರಾಜಕೀಯ ಮಾಡುತಲೇ ಬಂದಿವೆ. ಬಿಜೆಪಿ ಸರ್ಕಾರ ಇದ್ದಾಗ ಕಾಂಗ್ರೆಸ್ ರಾಜಕೀಯ ಮಾಡುತಿತ್ತು. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಬಿಜೆಪಿ, ಕೆಜೆಪಿಗಳು ರಾಜಕೀಯ ಮಾಡುತ್ತಿವೆ. ಆದಾಗ್ಯೂ ಕಬ್ಬು ಬೆಳೆಗಾರರ ಬೇಡಿಕೆಗಳು ನ್ಯಾಯಸಮ್ಮತವಾಗಿಯೇ ಇವೆ. ಕಳೆದ ಮೂರು ತಿಂಗಳಿಂದ ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ರೈತರ ಹೋರಾಟವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು ಅಕ್ಷಮ್ಯವಾಗಿದೆ.

ನವೆಂಬರ್ ಮೊದಲ ವಾರದಲ್ಲಿ ರಾಜ್ಯ ಸರ್ಕಾರ ಟನ್ ಕಬ್ಬಿಗೆ ರೂ. 2500 ದರ ನಿಗದಿಮಾಡಿದೆ. ಆದರೆ ಖಾಸಗಿ ಕಾರ್ಖಾನೆಗಳು ಸರ್ಕಾರ ನಿಗದಿಪಡಿಸಿದ ದರವನ್ನು ಕೊಡಲು ನಿರಾಕರಿಸುತ್ತಿವೆ. ರೈತರ ಅಸಹಾಯಕತೆಯ ಲಾಭ ಪಡೆದು, ಟನ್‌ಗೆ 2,000ರೂ. ಸಾಕು ಎಂದು ರೈತರಿಂದ ಮುಚ್ಚಳಿಕೆ ಬರೆಯಿಸಿಕೊಂಡು ಕಬ್ಬು ಖರೀದಿ ಮಾಡುತ್ತಿವೆ. ಕೇಂದ್ರ ಸರ್ಕಾರ ಕಬ್ಬು ಉತ್ಪಾದನಾ ವೆಚ್ಚ ಎಕರೆಗೆ ರೂ. 2100 ಎಂದು ನಿಗದಿಪಡಿಸಿದೆ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸು ಪ್ರಕಾರ ಉತ್ಪಾದನಾ ವೆಚ್ಚಕ್ಕೆ 50% ರಷ್ಟನ್ನು ಸೇರಿಸಿ ದರ ನಿಗದಿಯಾಗಬೇಕು. ಆ ಪ್ರಕಾರ ಟನ್ ಕಬ್ಬಿಗೆ ಕನಿಷ್ಠ ರೂ. 3150 ನಿಗದಿಯಾಗಬೇಕಾಗಿದೆ. ಟನ್ ಕಬ್ಬಿಗೆ ರೂ. 150 ರಂತೆ ಹೆಚ್ಚುವರಿಯಾಗಿ ಪ್ರೋತ್ಸಾಹಧನ ನೀಡುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದಾರೆ. ಆದರೆ ರೈತರು ರೂ. 3500 ಕೇಳುತ್ತಿದ್ದಾರೆ. ಅದರಲ್ಲಿ ನ್ಯಾಯವಿಲ್ಲ ಎನ್ನಲಾಗದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿರುವ ಐವರು ಸಚಿವರು ಸೇರಿದಂತೆ, ಕಾಂಗ್ರೆಸ್, ಬಿಜೆಪಿ ಪಕ್ಷಗಳ ಶಾಸಕರು ಹಾಗೂ ಅವರ ಕುಟುಮಬಗಳ ಸದಸ್ಯರ ಮಾಲೀಕತ್ವದಲ್ಲಿ ಹೆಚ್ಚಿನ ಸಕ್ಕರೆ ಕಾರ್ಖಾನೆಗಳಿದ್ದು ಬಲಿಷ್ಠವಾಗಿರುವ ಈ 'ಶುಗರ್ ಲಾಬಿ' ಸರ್ಕಾರದ ಆದೇಶಗಳಿಗೆ ಸೊಪ್ಪು ಹಾಕುವುದಿಲ್ಲ. ಸಕ್ಕರೆ ಕಾರ್ಖಾನೆಗಳು ನಷ್ಟವನ್ನು ಅನುಭವಿಸುತ್ತವೆ ಎಂದು ನೆಪಮಾಡಿಕೊಂಡು ಪ್ರತಿವರ್ಷ, ಯಾವುದೇ ಸರ್ಕಾರ ಇದ್ದರೂ, ಕೋಟಿ ಗಟ್ಟಲೆ ರೂ. ತೆರಿಗೆ ವಿನಾಯ್ತಿಯನ್ನು ಪಡೆಯುತ್ತವೆ. ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಖಾನೆಗಳು ಒಟ್ಟು 86 ಕೋಟಿ ರೂ. ಗಳಷ್ಟು ತೆರಿಗೆ ವಿನಾಯ್ತಿಯನ್ನು ಪಡೆದಿವೆ. ಕಬ್ಬು ಅರೆಯುವುದರ ಜತೆಗೆ ಈ ಖಾಸಗಿ ಕಾರ್ಖಾನೆಗಳು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿರುವುದರಿಂದ ಹಾಗೂ ಸಕ್ಕರೆ ಜತೆಗೆ ಉತ್ಪತ್ತಿಯಾಗುವ ಇತರ ಉಪಉತ್ಪನ್ನಗಳಿಂದ ಲಾಭದಾಯಕವಾಗಿ ನಡೆಯುತ್ತವೆ.

ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕುಸಿದಿರುವುದರಿಂದ ಸರ್ಕಾರ ನಿಗದಿಪಡಿಸಿರುವ ದರ ನೀಡಲು ಸಾಧ್ಯವಿಲ್ಲ ಎಂದು 'ಶುಗರ್ ಲಾಬಿ' ಪಟ್ಟು ಹಿಡಿದಿದೆ. ಸಕ್ಕರೆ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ಆಮದು ನೀತಿ ಒಂದು ಪ್ರಮುಖ ಕಾರಣವಾಗಿದೆ. ಸಕ್ಕರೆ ಕಾರ್ಖಾನೆಗಳ ಉಗ್ರಾಣಗಳಲ್ಲಿ ಸಕ್ಕರೆ ದಾಸ್ತಾನು ಹೇರಳವಾಗಿ ಇರುವಾಗಲೂ ಕೇಂದ್ರ ಸರ್ಕಾರ ತನ್ನ ಉದಾರೀಕರಣ ಧೋರಣೆಯ ಅಂಗವಾಗಿ ಸಕ್ಕರೆ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ. ಹಿಂದೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಇದೇ ರೀತಿಯಲ್ಲಿ ಅನಗತ್ಯವಾಗಿ ಸಕ್ಕರೆ ಆಮದು ಮಾಡುತಿತ್ತು.

ಎಲ್ಲಿಯವರೆಗೆ ಕೇಂದ್ರದಲ್ಲಿ ಈ ಉದಾರೀಕರಣ ಧೋರಣೆಗಳನ್ನು ತಿರಸ್ಕರಿಸಲು ಸಮರ್ಥವಾದ ಪರ್ಯಾಯ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ರೈತರ ಫಸಲಿಗೆ ಯೋಗ್ಯ ಬೆಲೆ ಸಿಗುವುದಿಲ್ಲ, ಅವರಿಗೆ ಅಗ್ಗದ ಬಡ್ಡಿ ದರಗಳ ಸಾಲ ಸಿಗುವುದಿಲ್ಲ, ಅವರು ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುವುದಾಗಲಿ, ವಿಧಿ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಲಿ ತಪ್ಪುವುದಿಲ್ಲ.

ಸದನ: ಈ ಸದ್ದು-ಗದ್ದಲಗಳು ಪರಿಹಾರ ತಂದಾವೆಯೇ?

2013 ನವೆಂಬರ್ 25ರಂದು ಬೆಳಗಾವಿಯಲ್ಲಿ ಆರಂಭಗೊಂಡ ವಿಧಾನಸಭೆಯ ಚಳಿಗಾಲದ ಅಧಿವೇಶನ ಮೊದಲ ದಿನವೇ ಕಾವೇರಿದ್ದು ಇಂದಿಗೂ ಅದು ತಗ್ಗಿಲ್ಲ, ತಗ್ಗುವ ಲಕ್ಷಣವೂ ಇಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೇರಿದ ಬಳಿಕ ಇದು ಎರಡನೆಯ ಅಧಿವೇಶನ. ಅಗಲಿದವರಿಗೆ ಸಂತಾಪ ಸಲ್ಲಿಕೆ, ಭಾರತ ರತ್ನ ವಿಜೇತರಿಗೆ ಅಭಿನಂದನೆಗಳನ್ನು ಬಿಟ್ಟರೆ ಉಳಿದ ಯಾವ ಕಲಾಪಗಳೂ ಸಹಜ, ಸಾಮಾನ್ಯವಾಗಿ ನಡೆಯಲೇ ಇಲ್ಲ. ಪ್ರತಿಯೊಂದಕ್ಕೂ ಕೋಲಾಹಲ! ಕಲಾಪಗಳು ನಡೆಯದಂತೆ ಮಾಡಿ ಇಂತಹ ಕೋಲಾಹಲವೆಬ್ಬಿಸುವುದರಲ್ಲೇ ವಿರೋ ಧ ಪಕ್ಷಗಳ ಶಕ್ತಿ ವ್ಯಯವಾಗುತ್ತಿದೆ. ಇಷ್ಟಕ್ಕೇ ಅವು ಸೀಮಿತವಾದುದು ದುರಂತ.


ಇಂತಹವುಗಳ ಬಗ್ಗೆ ಆಳುವ ಕಾಂಗ್ರೆಸ್ ಪಕ್ಷಕ್ಕೆ ಸುಳಿವು ಇದ್ದುದರಿಂದಲೇ ಮುಂದೊಂದು ದಿನ ಆಗಲೇ ಬೇಕಿದ್ದುದನ್ನು ಮುಂಜಾಗರೂಕತೆಯಿಂದ ಮಾಡಿ ಮುಖ ಉಳಿಸಿಕೊಳ್ಳಲು ಪ್ರಯತ್ನಿಸಿದ್ದು ನಿರಾಕರಿಸಲಾಗದ ಸತ್ಯ. ಲೋಕಾಯುಕ್ತರ ವರದಿಯಲ್ಲಿ ಅಕ್ರಮ ಗಣಿಗಾರಿಕೆಯ ಆರೋಪದಲ್ಲಿರುವ ವಾರ್ತಾ ಹಾಗೂ ಮೂಲ ಸೌಕರ್ಯಗಳ ಸಚಿವ ಸಂತೋಷ್ ಲಾಡ್‌ರವರಿಂದ ಅಧಿವೇಶನಕ್ಕೆ ಒಂದೆರಡು ದಿನಗಳ ಮೊದಲೇ ರಾಜಿನಾಮೆ ಕೊಡಿಸಿ ಬಿಜೆಪಿ- ಕೆಜೆಪಿಯಂತಹ ವಿರೋಧ ಪಕ್ಷಗಳ ಬಾಯಿ ಮುಚ್ಚಿಸುವ ತಂತ್ರವನ್ನೇನೋ ಕಾಂಗ್ರೆಸ್‌ನವರು ಅನುಸರಿಸಿದರು. ಜೊತೆಗೆ ಇತ್ತೀಚೆಗೆ ದೆಹಲಿಯಲ್ಲಿ ನಡೆದ ಮೊದಲ ಸಮನ್ವಯ ಸಮಿತಿ ಸಭೆ ಬಳಿಕ ಸಿದ್ಧರಾಮಯ್ಯನವರ ವಿರೋಧಿಗಳಾಗಿರುವ ಡಿ.ಕೆ.ಶಿವಕುಮಾರ್, ರೋಷನ್‌ಬೇಗ್ ರಂತಹವರನ್ನು ಮಂತ್ರಿಗಳಾಗಿಸಲು ಬರುವ ಒತ್ತಡಕ್ಕೂ ಕೊಟ್ಟ ಹಿಂದೇಟು ಅದಾಗಿತ್ತು. ಆದರೆ ಏನಾದರೊಂದು ಆಗಲೇ ಬೇಕೆಂಬ ಆತುರದಲ್ಲಿದ್ದ ಬಿಜೆಪಿಯಂತೂ ಕನಿಷ್ಠ ಬಿದಾಯಿ ಯೋಜನೆಯನ್ನು ವಿರೋಧಿಸಿ ಸತತ ಬೀದಿ ಬದಿ ಧರಣಿ ನಡೆಸುತ್ತಿದ್ದ ಯಡಿಯೂರಪ್ಪನವರ ಹೆಗಲ ಮೇಲೆ ಕೋವಿ ಇರಿಸಿ ವಿಧಾನ ಸಭೆಯ ಕಲಾಪದಲ್ಲಿ ಗುಂಡು ಹೊಡೆಯುವ ತಂತ್ರವನ್ನು ನೆಚ್ಚಿತ್ತು. ಇಲ್ಲಯೂ ಯಡಿಯೂರಪ್ಪ ಧರಣಿ ನಡೆಸಿದರಾದರೂ ಬಹು ದಿನಗಳು ಆ ಶೋ ವನ್ನು ಮುಂದುವರಿಸಲಾಗಲಿಲ್ಲ. ಹಾಗೆ ಹಿಂಪಡೆದುದಕ್ಕೆ ಸಮರ್ಪಕ ಕಾರಣವನ್ನೂ ನೀಡಲಾಗದೇ ಅಪಹಾಸ್ಯಕ್ಕೀಡಾದುದು ಮತ್ತೊಂದು ಪ್ರಸಂಗ.

ಇಲ್ಲಿ ಎಂದಿನಂತೆ ಒಂದು ಅಂಶವನ್ನು ಗಮನಿಸಬೇಕಾದ್ದೆಂದರೆ: ವಿಧಾನ ಸಭೆಯ ಕಲಾಪಗಳನ್ನು ಹೆಚ್ಚು ಜನಮುಖಿಯಾಗಿ, ಅರ್ಥಪೂರ್ಣವಾಗಿ ಕೊಂಡೊಯ್ದು ಚರ್ಚೆ ನಡೆಸಿ ಸದನದ ವೇದಿಕೆಯನ್ನು ನಾಡನ್ನು ಕಾಡುವ ಜ್ವಲಂತ ಪ್ರಶ್ನೆಗಳ ಪರಿಹಾರಕ್ಕೆ ಸದುಪಯೋಗ ಪಡಿಸಿಕೊಂಡು ಪ್ರಜಾಪ್ರಭುತ್ವವನ್ನು ಬಲಗೊಳಿಸುವ ಗಂಭೀರ ಪ್ರಯತ್ನಕ್ಕೆ ಇವರಾರೂ ಇಳಿಯದೇ ಇರುವುದನ್ನು ಅತ್ಯಂತ ವಿಷಾದದಿಂದಲೇ ಗುರುತಿಸಬೇಕಾಗುತ್ತದೆ. ಹೋಗಲಿ ಮಾತೆತ್ತಿದರೆ ಈ ಕಲಾಪ ಉತ್ತರ ಕರ್ನಾಟಕದ ಜನರ ಪ್ರಶ್ನೆಗಳಿಗೆ ಮೀಸಲು ಎನ್ನುವ ಇವರು ಆ ಬಗ್ಗೆ ಏನಾದರೂ ಮಾತನಾಡಿದರೇ?

ಇದು ಮಾತ್ರವಲ್ಲ, ಆಳುವ ಪಕ್ಷವೂ ಸದನದ ಸಮಯ ಪ್ರಯೋಜನವಗುವಂತೆ ಅಂತಹ ಕನಿಷ್ಠ ಕಾಳಜಿ, ಗಂಭೀರ ಚಿಂತನೆ ಮತ್ತು ಕ್ರಮವನ್ನೂ ಕೈಗೊಳ್ಳಲಿಲ್ಲ. ಆಡಳಿತ ಪಕ್ಷವು ವಿರೋಧಿಗಳ ತಂತ್ರಕ್ಕೆ ಮಾತ್ರ ಪ್ರತಿ ತಂತ್ರ ರೂಪಿಸಿದರಷ್ಟೇ ಸಾಕು ಎಂಬುದು ಸರಿಯಲ್ಲ. ಹೀಗಾಗಿ ಕಲಾಪವನ್ನು ಗದ್ದಲ, ಚೀರಾಟಗಳ ವೀರಾವೇಶಕ್ಕೆ ರಂಗ ವೇದಿಕೆಯನ್ನಾಗಿ ಮಾಡಿ ಜನರಿಗೆ ಮಂಕುಬೂದಿ ಎರಚುವಲ್ಲಿ, ಕಲಾಪಗಳು ಹಾಳಾಗಿಸಿ ಅನರ್ಥಗೊಳಿಸುವಲ್ಲಿ ಆಳುವ ಮತ್ತು ವಿರೋಧ ಪಕ್ಷಗಳು ಒಂದಾಗಿವೆ. ಸಮಾನವಾಗಿ ರಾಜಕೀಯ ದಿವಾಳಿತನವನ್ನು ಅನುಭವಿಸುತ್ತಿವೆ.

ಇಲ್ಲವಾದಲ್ಲಿ ಸಿದ್ಧರಾಮಯ್ಯನವರು ನೆರೆ-ಬರ, ಬೆಲೆ ಏರಿಕೆ, ಮುಖ್ಯವಾಗಿ ಕೃಷಿ-ಕೈಗಾರಿಕೆ, ನೀರಾವರಿ ಮುಂತಾದ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕಿತ್ತು. ಆದರೆ ಈ ಸರಕಾರ ಕೇವಲ ಅಗ್ಗದ ಜನಪ್ರಿಯ/ ಜನಮರುಳು ಯೋಜನೆಗಳಿಗಷ್ಟೇ ಒತ್ತು ನೀಡುತ್ತಾ ಬರುತ್ತಿದೆ. ಅಂತಹ ಮೂಲಭೂತ ಪ್ರಶ್ನೆಗಳನ್ನು ಎತ್ತಿಕೊಂಡು ಪರಿಹಾರ ನೀಡುವ ಇರಾದೆಯೇ ಇಲ್ಲವಾಗಿದೆ.

ಸದ್ದು-ಗದ್ದಲ, ಆರೋಪ-ಪ್ರತ್ಯಾರೋಪಗಳು, ಕೂಗಾಟ-ಚೀರಾಟಗಳಲ್ಲೇ ನಿತ್ಯವೂ ಸದನದ ಸಮಯ ಹಾಳಾಗುತ್ತಿರುವಾಗಲೇ ಹೊರಗೆ ತಮ್ಮ ಕಬ್ಬಿಗೆ ಬೆಂಬಲಿತ ಬೆಲೆ ನೀಡಬೇಕೆಂದು ನಡೆಯುತ್ತಿದ್ದ ಹೋರಾಟದಲ್ಲಿದ್ದ ರೈತ ಆತ್ಮಹತ್ಯೆ ಮಾಡಿಕೊಂಡದ್ದು ಒಂದು ಅನಿರೀಕ್ಷಿತ ಧಾರುಣ ಘಟನೆಯಾಗಿದೆ. ಇದಾಗುತ್ತಿದ್ದಂತೆ ಎಲ್ಲರ ಗಮನ ಅತ್ತ ಹೊರಳಿದೆ. ಎಲ್ಲರೂ ಈಗಲೂ ಆರೋಪ -ಪ್ರತ್ಯಾರೋಪದಲ್ಲಿ ನಿರತರಾಗಿ ಮುಂದಿನ ಚುನಾವಣೆಯಲ್ಲಿ ಓಟಾಗಿಸಿಕೊಳ್ಳುವ ರಾಜಕೀಯದಲ್ಲಿ ಮಗ್ನರಾಗಿದ್ದಾರೆ ಎನಿಸುತ್ತದೆ. ಯಾಕೆಂದರೆ ಕಬ್ಬಿಗೆ ಬೆಲೆ ನಿಗದಿ ಮಾಡಿರುವುದು ಅಸಮರ್ಪಕ, ಅವೈಜ್ಞಾನಿಕ. ಹೀಗಾಗಿ ಸರಕಾರ ಅವರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಕ್ರಮ ವಹಿಸಬೇಕಿತ್ತು. ಬೆಳಗಾವಿಯಂತಹ ಕಬ್ಬು ಹೆಚ್ಚಾಗಿ ಬೆಳೆಯುವ ಪ್ರದೇಶದಲ್ಲೇ ಅಧಿವೇಶನ ನಡೆಸುವಾಗ ರೈತರ ಸಂಕಷ್ಟ ಮತ್ತು ಸಮಸ್ಯೆಯ ಸೂಕ್ಷ್ಮ ಸ್ವರೂಪವನ್ನು ಗಂಭೀರವಾಗಿ ಅರಿತು ಏನಾದರೂ ಪರಿಹಾರದ ಪ್ರಯತ್ನಕ್ಕೆ ಮುಂದಾಗಬೇಕಿತ್ತು. ಹಾಗೆ ಮಾಡಲಿಲ್ಲ. ಈಗಲಾದರೂ ಸರಿಯಾದ ಪರಿಹಾರ ಒದಗಿಸಬೇಕು. ಇದರಲ್ಲಿ ಮುಂಜಾಗರೂಕತೆ ವಹಿಸದೇ ಸಿದ್ಧರಾಮಯ್ಯನವರು ಎಡವಿದ್ದಾರೆ ಎನಿಸುತ್ತದೆ. ಹಾಗೇ ರೈತರ ಆತ್ಮಹತ್ಯೆಗಳ ಬಗ್ಗೆ ಮೀಮಾಂಸೆ ನಡೆಸಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ತಾವು ಇದಕ್ಕೆ ಎಷ್ಟು ಹೊಣೆ ಎಂಬುದರ ಬಗ್ಗೆ ಜಾಣ ಕುರುಡು ನಟನೆಯಲ್ಲಿ ತೊಡಗಿವೆ. ಆಡಳಿತ ಮತ್ತು ವಿರೋಧ ಪಕ್ಷಗಳೆಂಬ ಎಲ್ಲಾ ಸದನ ಶೂರರು ಸಕ್ಕರೆ ಕೈಗಾರಿಕೆಗಳ ಲಾಭಿಗೆ ಮಣಿದಿಲ್ಲವೆಂದು ಭಾವಿಸಲು ಜನರೇನು ಮೂರ್ಖರಲ್ಲ!



ಇನ್ನಾದರೂ, ಈಗಲಾದರೂ ಉಳಿದ ಅವಧಿಯನ್ನು ಜನರ ಹಿತಗಳಿಗೆ ಬಳಸಲು ಮೀಸಲಿಡಲಿ. ಇಲ್ಲವಾದಲ್ಲಿ ಇದೇ ಗೊಂದಲ, ಗದ್ದಲ ಮುಂದುವರೆದರೆ ರಾಜ್ಯ ಸರಕಾರ ಮಂಡಿಸಲಿರುವ ಮಸೂದೆಗಳು ಯಾವುದೇ ಚರ್ಚೆಯಿಲ್ಲದೇ ಅಂಗೀಕಾರ ಆಗಬಹುದು. ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಮತ್ತಂಥವರ ಪ್ರಚೋದನೆಯಿಂದ ಗಮನ, ಕಲಾಪದ ಹಾದಿ ತಪ್ಪಬಹುದು. ಜನ ಇಲ್ಲಿಯವರೆಗೂ ಹೊಸ ಸರಕಾರಕ್ಕೆ ಕಾಲಾವಕಾಶ ಕೊಟ್ಟು ನೋಡಿದ್ದಾರೆ. ಇನ್ನು ಮುಂದೆ ಹೇಗೆ ನೋಡಿಯಾರು ಎಂಬ ಬಗ್ಗೆ ಕನಿಷ್ಠ ಸಂವೇದನೆ ಇರಲಿ.





ಧರ್ಮಸ್ಥಳ ಅಸಹಜ ಸಾವುಗಳ ಸಿಬಿಐ ತನಿಖೆಗೆ ಒತ್ತಾಯಿಸಿ ಕಾಲ್ನಡಿಗೆ ಜಾಥಾ

ಜನತೆಯ ಬದುಕುವ ಹಕ್ಕನ್ನು ಎತ್ತಿ ಹಿಡಿಯಲು ಸಿಪಿಐ(ಎಂ) ಬದ್ಧವಾಗಿದೆ: ಬಸುದೇವ ಆಚಾರ್ಯ

ಧರ್ಮಸ್ಥಳದಲ್ಲಿ ನಡೆದಿರುವ 450 ಕ್ಕೂ ಮೀರಿದ ಅಸಹಜ ಸಾವುಗಳಲ್ಲಿ ಹೆಚ್ಚಿನವು ಮಹಿಳೆಯರದ್ದು. ಈ ಪ್ರತಿಯೊಂದರ ಬಗ್ಗೆ ಸರಕಾರ ಏನು ಕ್ರಮ ಕೈಗೊಳ್ಳಲಿದೆಯೆಂಬುದು ನಮಗೆ ತಿಳಿಯಬೇಕಾಗಿದೆ. ಸದ್ಯದ -ಸೌಜನ್ಯ ಅತ್ಯಾಚಾರ ಕೊಲೆ ಪ್ರಕರಣದಲ್ಲಿ ಒಬ್ಬ ಮಾನಸಿಕ ರೋಗಿಯೊಬ್ಬನನ್ನು ಬಂಧಿಸಿದ್ದು ಬಿಟ್ಟರೆ, ಪೋಲೀಸ್ ಹಾಗೂ ಸರ್ಕಾರ ಏನೂ ಮಾಡಿಲ್ಲ. ಕರ್ನಾಟಕದಲ್ಲಿ ಸರ್ಕಾರವೇ ಇಲ್ಲ. ಇರುವುದು ಶ್ರೀಮಂತರ ಸರಕಾರ ಮಾತ್ರ; ಹಾಗಾಗಿ ಬಡವರ, ರೈತರ ಕಷ್ಟಗಳನ್ನು ಕರ್ನಾಟಕ ಸರ್ಕಾರ ಗಣಿಸುತ್ತಲೇ ಇಲ್ಲ. ನಾವು 16ನೇ ಶತಮಾನದಲ್ಲಿದ್ದೇವೆಯೋ 21ನೇ ಶತಮಾನದಲ್ಲಿದ್ದೆವೆಯೋ? ಇನ್ನೂ ಈ ದೇಶದಲ್ಲಿ ಪಾಳೆಗಾರಿ ವ್ಯವಸ್ಥೆ ಇದೆಯೋ? ಸ್ವಾತಂತ್ರ್ಯ ಸಿಕ್ಕಿ 66 ವರ್ಷಗಳ ಬಳಿಕವೂ ಸಂವಿಧಾನದಲ್ಲಿ ನೀಡಲಾದ ಮೂಲಭೂತ ಹಕ್ಕಾದ 'ಬದುಕುವ ಹಕ್ಕು' ಧರ್ಮಸ್ಥಳದಲ್ಲಿ ಅಸಹಜ ಸಾವಿಗೀಡಾದ ನಾಲ್ಕುನೂರ ಐವತ್ತು ಮಂದಿಗೆ ಇರಲಿಲ್ಲ. ಆದುದರಿಂದ ಇದು ಒಂದು ಪ್ರದೇಶದ ಪ್ರಶ್ನೆ ಅಲ್ಲ; ನಮ್ಮ ಸಂವಿಧಾನದ



ಅಸ್ತಿತ್ವದ ಪ್ರಶ್ನೆ. ಪಶ್ಚಿಮ ಬಂಗಾಳದ ಇಂದಿನ ಆಡಳಿತದಲ್ಲಿ ಅಲ್ಲಿನ ಜನಗಳಿಗೂ 'ಬದುಕುವ ಹಕ್ಕು' ಇಲ್ಲವಾಗುವ ವಾತಾವರಣವಿದೆ. ಅಂಥದ್ದು ಕರ್ನಾಟಕದ ಈ ಪ್ರದೇಶದಲ್ಲಿ ಇದೆ. ಇದಕ್ಕೆ ಸಿಪಿಐ(ಎಂ) ವಿರುದ್ಧವಾಗಿದೆ. ಕರ್ನಾಟಕದಲ್ಲಿ ಸಾಕಷ್ಟು ದೊಡ್ಡ ಬುದ್ಧಿ ಜೀವಿ ವಿಭಾಗ ಇದನ್ನು ವಿರೋಧಿಸುತ್ತಿದ್ದಾರೆ. ಸಾಮಾನ್ಯ ಜನರೂ ವಿರೋಧಿಸಲು ಆರಂಭಿಸಿದ್ದಾರೆ. ಜನತೆಯ ಬದುಕುವ ಹಕ್ಕನ್ನು ಹಾಗೂ ಮಾನವ ಘನತೆಯನ್ನು ಎತ್ತಿ ಹಿಡಿಯಲು ಸಿಪಿಐ(ಎಂ) ಬದ್ಧವಾಗಿದೆ- ಎಂಬುದಾಗಿ ಲೋಕಸಭೆಯಲ್ಲಿ ಸಿಪಿಐ(ಎಂ) ಪಕ್ಷದ ನಾಯಕರಾಗಿರುವ ಬಸುದೇವ ಆಚಾರ್ಯ ಹೇಳಿದರು.

ಸೌಜನ್ಯ ಕೊಲೆಯಲ್ಲದೆ ಧರ್ಮಸ್ಥಳದಲ್ಲಿ ನಡೆದಿರುವ ವೇದವಲ್ಲಿ, ಪದ್ಮಲತಾ ಕೊಲೆ ಪ್ರಕರಣಗಳನ್ನು ಒಳಗೊಂಡು ಎಲ್ಲ ಅಸಹಜ ಸಾವುಗಳನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಪಾಳೆಗಾರಿಕೆ, ಅನ್ಯಾಯ, ದೌರ್ಜನ್ಯ, ಅತ್ಯಾಚಾರ, ಕೊಲೆಗಳ ವಿರುದ್ಧ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ 6 ದಿನಗಳ 2 ಜಾಥಾಗಳು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ನವಂಬರ್ 20 ರಂದು ಸಮಾರೋಪಗೊಂಡು ನಡೆದ ಬೃಹತ್ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಧರ್ಮಸ್ಥಳದಲ್ಲಿ ಅತ್ಯಾಚಾರ, ಕೊಲೆಗಳ ಜೊತೆಗೆ ಭೂಕಬಳಿಕೆಯೂ ನಡೆದಿದೆ. ರಾಜ್ಯದಲ್ಲೇ ದೊಡ್ಡ ಮಟ್ಟದ ಭೂಕಬಳಿಕೆ ನಡೆ-ಯುತ್ತಿದೆ. ಇಂಥ ಅನ್ಯಾಯಗಳ ಬಗ್ಗೆ ಕಾಂಗ್ರೆಸ್ ಬಿಜೆಪಿಗಳಿಗೆ ಸೇರಿದ ಕರ್ನಾಟಕದ ಪಕ್ಷ ಸದಸ್ಯರು ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದನ್ನು ನಾನು ಕಂಡಿಲ್ಲ. ಕರ್ನಾಟಕದ ಶಾಸಕರು ವಿಧಾನಸಭೆಗಳಲ್ಲಿ ಏನು ಮಾಡುತ್ತಿದ್ದಾರೆ? ಮಾಜಿ ಮುಖ್ಯ ಮಂತ್ರಿಯೊಬ್ಬರು ಬೇರೆ ಕಾರಣವೊಂದಕ್ಕಾಗಿ ವಿಧಾನ ಸಭೆಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದರಾದರೂ, ಸೌಜನ್ಯ ಪ್ರಕರಣದ ಬಗ್ಗೆ ಮಾತನಾಡುತ್ತಿಲ್ಲ. ಕರ್ನಾಟಕದ ಈ ದೌರ್ಜನ್ಯಗಳ ಬಗ್ಗೆ ಸಿಪಿಐ(ಎಂ)ನ ನಾವು ಪಾರ್ಲಿಮೆಂಟಿನಲ್ಲೂ ದನಿ ಎತ್ತಲಿದ್ದೇವೆ ಎಂದರು

ಧರ್ಮಸ್ಥಳದಲ್ಲಿ ಧರ್ಮವಿಲ್ಲ : ವಾಸುಕಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಮುಖಂಡರಲ್ಲೊಬ್ಬರಾದ ವಾಸುಕಿ ಅವರು ಮಾತನಾಡುತ್ತಾ, ಊರಿನ ಹೆಸರು ಧರ್ಮಸ್ಥಳ; ಆದರೆ ಅಲ್ಲಿ ಧರ್ಮವಿಲ್ಲ ಎಂದರು.

ಮಂಜುನಾಥ ಸ್ವಾಮಿ ದೇವಸ್ಥಾನ ಧರ್ಮದೈವಗಳನ್ನು ಒಳಗೊಂಡಿದೆ ಹಾಗೂ ಅದು ನ್ಯಾಯದೇವತೆಯ ಸ್ಥಾನ ಎಂದು ಜನರು ನಂಬಿದ್ದಾರೆ. ಸೌಜನ್ಯಳಿಗೆ ನಿಮ್ಮ ನ್ಯಾಯ ಏನು ಎಂದು ನಾವು ಧರ್ಮಾಧಿಕಾರಿಗಳಲ್ಲಿ ಕೇಳುತ್ತೇವೆ. ನಾಲ್ಕುನೂರೈವತ್ತಕ್ಕೂ ಮೀರಿ ಸತ್ತ ಅಮಾಯಕರಿಗೆ ನಿಮ್ಮ ನ್ಯಾಯ ಏನು ಎಂದು ಪ್ರಶ್ನಿಸಿದರು.

ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹಿಂಸೆಯ ಒಂದು ಮುಖ ಮಾತ್ರ, ರಾಜಕೀಯ ಹಿಂಸೆ ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಆಳ್ವಿಕೆಯಲ್ಲಿ ಮಹಿಳೆಯರ ಮೇಲೂ ತೀವ್ರವಾಗಿದೆ. ಮಹಿಳೆಯರ ಮೇಲಿನ ಹಿಂಸೆಗೆ ಕೋಮುವಾದಿ ಮುಖವೂ ಇದೆ. ಮೋದಿ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಪ್ರಕಟವಾದ ಬಳಿಕ, ಮಹಿಳೆಯರ ವಿರುದ್ಧ ದಾಳಿ ಹೆಚ್ಚಾಗುತ್ತಿದೆ. ಆರೆಸ್ಸೆಸ್ಸಿನ ಸೂತ್ರದ ಆಟದಲ್ಲಿ ಈ ದಾಳಿಗಳು ನಡೆಯುತ್ತಿವೆ. ಮುಜಾಫರ್ ನಗರದಲ್ಲಿ ನೂರಾರು ಮಹಿಳೆಯರು – ಮುಖ್ಯವಾಗಿ ಮುಸ್ಲಿಂ ಮಹಿಳೆಯರು ಲೈಂಗಿಕ ದಾಳಿಗೊಳಗಾದರು. ಇದೆಲ್ಲದರ ಹಿಂದೆ ಸಂಘ ಪರಿವಾರ ಇದೆ. ಇದು ಆರಂಭ ಮಾತ್ರ, ಬರಲಿರುವ ಲೋಕಸಭಾ ಚುನಾವಣೆಗಾಗಿ ಸಿದ್ಧತೆ ಮಾತ್ರ, ಬಿಜೆಪಿ ಅಧಿಕಾರ ಬಂದರೆ ಮಹಿಳೆಯ[illegible] ಮೇಲಿನ ದೌರ್ಜನ್ಯ ಇನ್[illegible] ಹೆಚ್ಚಲಿದೆ.

ಕಡಲತೀರ
ವಾ . ಉ.

ಸುಬ್ರಹ್ಮಣ್ಯದ ಮಡೆಸ್ನಾನ[illegible] ಉಡುಪಿಯ ಪಂಕ್ತಿಭೇದಗ[illegible] ಹಿಂದೆ ಜಾತಿ ಆದ-[illegible]ರಿತ ತಾರತಮ್ಯವಿದೆ 'ಮನು' ಇನ್ನೂ ಸತ್ತಿಲ್ಲ. ಶ್ರೀರಾಮಸೇನೆಯ ಮೂಲಕ 'ಮನು' ಮಾತನಾಡುತ್ತಿದ್ದಾನೆ. ಈ[illegible] ಜಾತಿ ತಾರತಮ್ಯಗಳ ವಿರುದ್ಧವೂ ಸಿಪಿಐ(ಎಂ[illegible] ಹೋರಾಡುತ್ತಿದೆ. ಬಸವಣ್ಣನವರ ಈ ನಾಡಿನಲ್ಲಿ 'ಮನು'ವಿಗಾಗಲೀ ಸಂಘಪರಿವಾರಕ್ಕಾಗಲೀ ಸ್ಥಾನವಿಲ್ಲ. ಸಿಪಿಐ(ಎಂ)ನವರ[illegible] ದೇವರು ಹಾಗೂ ನಂಬಿಕೆಗಳನ್ನು ಹಾಳು ಮಾಡಲು ಬರುತ್ತಿದ್ದಾರೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಾರೆ. ನಾವು ಜನರ ಶ್ರದ್ಧೆಯನ್ನು ವಿರೋಧಿಸುವುದಿಲ್ಲ. ಆದರೆ ಶ್ರದ್ಧೆಯ ಹೆಸರಿನಲ್ಲಿ ಜನರಿಗೆ ಮೋಸ ಮಾಡುವುದನ್ನು ನಾವು ವಿರೋಧಿಸುತ್ತೇವೆ. ರಾಜಕೀಯ ಉದ್ದೇಶಗಳಿಗಾಗಿ ಧರ್ಮ, ನಂಬಿಕೆಗಳನ್ನು ಬಳಸುತ್ತಿರುವ ಬಗ್ಗೆ ನಾವು ಜಾಗೃತರಾಗಿರಬೇಕು – ಎಂದು ವಾಸುಕಿ ಎಚ್ಚರಿಕೆ ನೀಡಿದರು.


ಕುಕೃತ್ಯ ಮುಚ್ಚಿ ಹಾಕುವವರ ವಿರುದ್ಧ ಭಾಷಣಕಾರರ ಆಕ್ರೋಶ

ಧರ್ಮಸ್ಥಳದ ಆಸುಪಾಸಿನಲ್ಲಿ ರೈತರ ಭೂಮಿ ಹೋರಾಟಗಳಿಗೂ ಅಲ್ಲಿನ ಭೂಮಾಲಿಕರು ವಿರೋಧಿಗಳಾಗಿದ್ದರು. 1970ರ ದಶಕದಲ್ಲಿ ಅಂದಿನ ಕಮ್ಯುನಿಸ್ಟ್ ನಾಯಕರಾಗಿದ್ದ ಎಳಚಿತ್ತಾಯರ ಅಂಗಡಿ ಸುಡುವ ಪ್ರಯತ್ನ ನಡೆಯಿತು., ರೈತ ಸಂಘದ ಕಾರ್ಯಕರ್ತನಾಗಿ ಗೇಣಿ ರೈತರನ್ನು ಸಂಘಟಿಸಿದ್ದ ದೇವಾನಂದ ಅವರ ಪುತ್ರಿ ಕಾಲೇಜು ವಿದ್ಯಾರ್ಥಿನಿ ಪದ್ಮಲತಾ ಕೊಲೆ

ಪದ್ಮಲತಾ ಆಹುತಿ!!

ಪದ್ಮಲತಾ ಎಂಬ ಕಾಲೇಜು ಯುವತಿಯ ಹೆಣ ಧರ್ಮಸ್ಥಳದ ನದಿಯಲ್ಲಿ ಫೆಬ್ರವರಿ 17, 1987ರಲ್ಲಿ ಸಿಕ್ಕಾಗ ದೊಡ್ಡ ಅಲ್ಲೋಲಕಲ್ಲೋಲ್ಲವೇ ಆಗಿತ್ತು. ಆ ಪಾಪದ ಹುಡುಗಿ ಬರೋಬ್ಬರಿ ನಾಲ್ವತ್ತು ದಿನ ಕಾಣೆಯಾಗಿ ಬಳಿಕ ಕೈ-ಕಾಲು ಕಟ್ಟಿದ ಸ್ಥಿತಿಯಲ್ಲಿ ಹೆಣವಾಗಿ ಸಿಕ್ಕದ್ದಳು. ಅಂದರೆ ಆಕೆಯನ್ನು ಅಪಹರಿಸಿ 39 ದಿನ ಒತ್ತೆಯಾಳಾಗಿಟ್ಟುಕೊಂಡು ಲೈಂಗಿಕವಾಗಿ ಇಂಚಿಂಚು ಕಿರುಕುಳ ಕೊಡಲಾಗಿತ್ತು. ಆಕೆಯ ಮೇಲೆ ನಿರಂತರ ಅತ್ಯಾಚಾರವೂ ನಡೆದಿತ್ತು. ಬಳಸಿಕೊಂಡು ಬೇಜಾರು ಬಂದಾಗ ಕೊಲೆ ಮಾಡಿ ನದಿಗೆಸೆಯಲಾಗಿತ್ತು. ಹಾಗೆಂಬುದು 'ಪದ್ಮಲತಾ ಪ್ರಕರಣ' ಹೈಲೈಟ್ಸ್.

ದೇವಾನಂದ ಎಂಬ ಕಮ್ಯುನಿಸ್ಟ್ ಮುಂದಾಳಿನ ಮಗಳಾಗಿದ್ದಳು ಪದ್ಮಲತಾ. ಈತನ ಜಾಗದ ಮೇಲೆ ದೇವರ ಮೇಲೆ ದೇವರ ರಿಪಬ್ಲಿಕ್‌ನ ದೇವಧೂತರ ಕಣ್ಣುಬಿದ್ದಿತ್ತು. ಇಡೀ ಧರ್ಮಸ್ಥಳ – ಉಜಿರೆ ತಮ್ಮ ವಸಾಹತಾಗಿರಬೇಕೆಂಬ ಧ್ಯೇಯ-ಧೋರಣೇ ಸಂಸ್ಥಾನದ "ಇಡಿ" ಸಾಹೇಬರದು. ದೇವಾನಂದ ಯಾವ ಬೆದರಿಕೆಗೂ ಸೆಡ್ಡು ಹೊಡೆದು ನಿಂತುಬಿಟ್ಟಿದ್ದರು. ಬಗ್ಗದೆ ದೇವಧೂತರ ರೌಡಿಗಳಿಗೆ ಆತನಿಗೆ ಪಾಠ ಕಲಿಸಲು ದೇವರ ಕಬ್ಜಾ ಮಾಡಿಕೊಂಡಿದ್ದ ಸ್ವಯಂಘೋಷಿತ ಸಂಭಾವಿತರು ಸಮಯ ಸಾಧಿಸುತ್ತಲೇ ಇದ್ದರು.



ಈ ಭೂ ಭಾನ್ಗಡಿ ನಡೆಯುತ್ತಿದ್ದಾಗಲೇ ಗ್ರಾಮ ಪಂಚಾಯತ್ ಚುನಾವಣೆ ಬಂದಿತ್ತು. ದೇವಾನಂದ ನಾಮಿನೇಷನ್ ಕೊಟ್ಟಿದ್ದರು. ದೇವರಿಗೂ ಕಮ್ಯುನಿಸ್ಟರಿಗೂ ಹೊಂದಾಣಿಕೆ ಸಾಧ್ಯವಾ? ದೇವರನ್ನೇ ಬಂಡವಾಳ ಮಾಡಿಕೊಂಡವರಿಗೆ ದೇವಾನಂದನ ನಾಮಪತ್ರ ನೋಡಿ ಪಿತ್ಥ ನೆತ್ತಿಗೇರಿ ಹೋಯ್ತು. ನಾಮಪತ್ರ ವಾಪಸ್ ಪಡೆಯುವಂತೆ "ದೇವರ" ಕಡೆಯಿಂದ ದೇವಾನಂದರಿಗೆ "ಎಚ್ಚರಿಕೆ" ಸಂದೇಶ ಬಂತು. ಈ ಕಮ್ಯುನಿಸ್ಟ್ ಧರ್ಮಸ್ಥಳ ಗ್ರಾಮ ಪಂಚಾಯತ್ ಸದಸ್ಯನಾದರೆ ತಮಗೆ ತೊಂದರೆ ಆಗುವ ಭೀತಿ ಧರ್ಮರಾಜ್ಯದ ಮಾಂಡಲೀಕರಿಗೆ ಕಾಡುತ್ತಿತ್ತು. ಆದರೆ ಆತ ನಾಮಪತ್ರ ವಾಪಸ್ ಪಡೆಯಲೇ ಇಲ್ಲ.

ದೇವಾನಂದನ ಮೇಲಿನ "ಸೇಡು" ಆತನ ಮಗಳು ಪದ್ಮಲತಾಳ ಬಾಳನ್ನೇ ಕೊನೆಗೊಳೊಸಿಬಿಟ್ಟಿತು. ದೇವಾನಂದನ ಬೆದರಿಸಲು ಆತನ ಮಗಳು ಪದ್ಮಲತಾಳನ್ನು ದೇವರ ಕಡೆಯವರು ಅಪಹರಿಸಿ 39 ದಿನ ಅತ್ಯಾಚಾರ-ಹಿಂಸೆ ನಡೆಸಿದರು. ಪದ್ಮಲತಾ ಎಲ್ಲಿ ಹುಡಿಕಿದರೂ ಸಿಗಲಿಲ್ಲ. "ದೇವ ಬಂಧನ"ದಲ್ಲಿದ್ದ ಹುಡುಗಿಯನ್ನು ಹುಲುಮಾನವರು, ದೇವರ ಭಯದ ಪೊಲೀಸರು, ಆಡಳಿತಗಾರರು ಹುಡುಕಲು ಸಾಧ್ಯವಾ.

ಪದ್ಮಲತಾ ಹೆಣವಾಗಿ ಕಂಡುಬಂದಳು. ಇದು ಧರ್ಮಸಂಸ್ಥಾನದ ಕೊಲೆ-ಅತ್ಯಾಚಾರ-ಅವತಾರ-ಅವ್ಯವಹಾರಕ್ಕೆ ಸರ್ವಕಾಲಿಕ ಸಂಕೇತದಂತಿದೆ!!

ಕೃಪೆ : ಗೌರಿ ಲಂಕೇಶ್

ಜನಶಕ್ತಿ
ಕನ್ನಡ ವಾರಪತ್ರಿಕೆ

"ರೈತರು- ಕೂಲಿಕಾರ್ಮಿಕರು 'ಅತಿಕ್ರಮಣದಾರರಲ್ಲ'-ಅನ್ನದಾತರು"



ನೂರಾರು ವರ್ಷಗಳಿಂದ ಬದುಕುವುದಕ್ಕಾಗಿ ಇಂದಿಷ್ಟು ಜಾಗ ಸ್ವಚ್ಛ ಮಾಡಿಕೊಂಡು ಕೃಷಿ ಮಾಡುತ್ತಾ ಬಂದಿರುವ ಜಿಲ್ಲೆಯ ರೈತರು, ಕೂಲಿಕಾರ್ಮಿಕರು ಅತಿಕ್ರಮಣದಾರರಲ್ಲ. ಅನ್ನದಾತರು. ಅವರು ಉಳುವ ಜಮೀನನ್ನು ಅಮಾನವೀಯವಾಗಿ ವಶಪಡಿಸಿಕೊಳ್ಳಲು ಮುಂದಾಗಿರುವ ಸರಕಾರಿ ಕ್ರಮ ಅತಿಕ್ರಮಣದ್ದಾಗಿದೆ. ರೈತರ ಅನುಮತಿಯಿಲ್ಲದೆ ತಲಾತಲಾಂತರದಿಂದ ಅವರ ಬದುಕಾಗಿರುವ ಭೂಮಿಗೆ ಪ್ರವೇಶಿಸುತ್ತಿರುವ ಸರಕಾರಿ ಅಧಿಕಾರಿಗಳು ಅತಿಕ್ರಮಣದಾರರು ಎಂದು ಅಖಿಲ ಭಾರತ ಕಿಸಾನ ಸಭಾ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಆಕ್ರೋಶ ವ್ಯಕ್ತಪಡಿಸಿದರು.

'ಕರ್ನಾಟಕ ಪ್ರಾಂತ ರೈತ ಸಂಘ'ದ ಆಶ್ರಯದಲ್ಲಿ ಕಾರವಾರ ನಗರದ ಉತ್ತರ ಕನ್ನಡ ಜಿಲ್ಲಾಧಿಕಾರಿ ಕಛೇರಿ ಮುಂದೆ ಅರಣ್ಯ ಅತಿಕ್ರಮಣದಾರರಿಗೆ ಒತ್ತುವರಿ ಭೂಮಿಯ ಪಟ್ಟಾ ನೀಡಲು ಆಗ್ರಹಿಸಿ ಆಯೋಜಿಸಲಾಗಿದ್ದ 48 ಗಂಟೆಗಳ ಮಹಾಧರಣಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅಭದ್ರತೆಯಲ್ಲಿ ಬದುಕುತ್ತಿರುವ ಬಡ ಅತಿಕ್ರಮಣದಾರರಿಗೆ ಸರಕಾರ ಕೂಡಲೆ ಅವರ ಜಮೀನಿನ ಹಕ್ಕುಪತ್ರ ನೀಡಿ ಅವರನ್ನು ನಿರಾಳಗೊಳಿಸಬೇಕು ಎಂದು ಅವರು ವಿಜು ಕೃಷ್ಣನ್ ಅಗ್ರಹಿಸಿದರು.

ಈಗಾಗಲೇ ಕಾಳಿ ನದಿ, ಕೈಗಾ, ಕದ್ರಾ, ಸೀಬರ್ಡ್ ಹಾಗೂ ಶರಾವತಿ ಯೋಜನೆಗಳ ಸಲುವಾಗಿ ನೆಲೆಗೊಂಡಿದ್ದ ಭೂಮಿಯನ್ನೇ ದೇಶದ ಅಭಿವೃದ್ಧಿಗೋಸ್ಕರ ಹಲವಾರು ಕುಟುಂಬಗಳು ತ್ಯಾಗ ಮಾಡಿದ್ದಾರೆ. ಆದರೆ, ದೇಶದ ಹಿತಕ್ಕೊಸ್ಕರ ಜಾಗವನ್ನು ತ್ಯಾಗ ಮಾಡಿದವರಿಗೆ ಪರ್ಯಾಯವಾಗಿ ಉತ್ತಮ ಜಾಗವನ್ನು ನೀಡಬೇಕೆಂದು ಸರಕಾರ ಮರೆತಿದೆ ಎಂದು ಖಂಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರಕಿ 66

ಪುಟ 6 ಕ್ಕೆ

1987 ರಲ್ಲಿ ನಡೆಯಿತು: ಅದೇ ಸ್ಥಾಪಿತ ಹಿತಾಸಕ್ತಿಗಳು ಈಗ ಸೌಜನ್ಯಳನ್ನು ಬಲಿ ತೆಗೆದು ಕೊಂಡಿವೆ. ಧರ್ಮಸ್ಥಳದಲ್ಲಿ ನಿಜವಾದ ಧರ್ಮವಿಲ್ಲ. ಧರ್ಮವನ್ನು ಧರ್ಮದ ಹೆಸರಿನಲ್ಲಿ ಅಲ್ಲಿ ನಾಶ ಮಾಡಲಾಗಿದೆ. ನಾವು ಹೋರಾಟ ಮಾಡುವುದು ಧರ್ಮದ ಪರವಾಗಿ. ಎಂಬುದಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ತಿಳಿಸಿದರು.

ಅಖಿಲ ಭಾರತ ವಕೀಲರ ಸಂಘದ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ಎಸ್.ಶಂಕರಪ್ಪ ಅವರು ಸೌಜನ್ಯ ಪ್ರಕರಣದಲ್ಲಿ ಕಾನೂನುರೀತ್ಯಾ ಯಾವ್ಯಾಯ ರೀತಿಯಲ್ಲಿ ಅಪರಾಧಿ ಸಂಬಂಧಿಯಾದ ಸಾಕ್ಷ್ಯಗಳನ್ನು ನಾಶಮಾಡಲಾಗಿದೆ ಎಂಬುದನ್ನು ವಿವರಿಸಿ ಹೇಳಿ, ಸಿಬಿಐ ತನಿಖೆಯೊಂದೇ ಸದ್ಯಕ್ಕೆ ನಮಗಿರುವ ಭರವಸೆ ಎಂದು ತಿಳಿಸಿದರು.

ಲೇಖಕಿ ಹೋರಾಟಗಾರ್ತಿ ಅತ್ರಾಡಿ ಅಮೃತಾ ಶೆಟ್ಟಿ ಮಾತನಾಡಿ. ಸೌಜನ್ಯಳಿಗೆ ನ್ಯಾಯ ಕೊಡಿಸಲು ಸಾಧ್ಯವಾಗದಿದ್ದರೆ ಸಮಾಜವಾದಿ ಎಂದು ಹೇಳಿ ಕೊಳ್ಳಲು ಮುಖ್ಯ ಮಂತ್ರಿ ಸಿದ್ಧರಾಮಯ್ಯ ಅನರ್ಹರು ಎಂದು ಟೀಕಿಸಿದರು.

ಬೆಳ್ತಂಗಡಿ ಗೌಂಡರ ವಂಶ ಖ್ಯೋಪಾಧ್ಯಾಯಿಂತಾಗಲು ಅರ್ಹಳಾಗಿದ್ದ ತನ್ನ ಪತ್ನಿ ವೇದವಲ್ಲಿಯನ್ನು ಧರ್ಮಾಧಿಕಾರಿಗಳ ಮತಸ್ಥರೊಬ್ಬರನ್ನು ಆ ಹುದ್ದೆಗೆ ತರುವ ಸಲುವಾಗಿ ತನ್ನ ಮನೆಯ ಬಚ್ಚಲು ಮನೆಯಲ್ಲಿ ಪೆಟ್ರೋಲ್ ಹಾಕಿ ಸುಡಲಾಯಿತು; ಆರೋಪ ಪತಿಯಾದ ತನ್ನ ಮೇಲೆ ಬರುವಂತೆ ನೋಡಿಕೊಳ್ಳಲಾಯಿತು. ಎಂಬುದಾಗಿ 1979 ರಲ್ಲಿ ಕೊಲೆಗೀಡಾದ ವೇದವಲ್ಲಿ ಅವರ ಪತಿ ಡಾ। ಬಿ.ಆರ್.ಹರಳೆ ಆಕ್ರೋಶ ವ್ಯಕ್ತಪಡಿಸಿದರು.

ನವಂಬರ್ 21 ರಂದು ಒಂದು ಜಾಥಾ ಸುಳ್ಯದಿಂದಲೂ, ಇನ್ನೊಂದು ಜಾಥಾ ಧರ್ಮಸ್ಥಳದಿಂದಲೂ ಹೊರಟು 6 ದಿನ ಸಂಚರಿಸಿ ಮಂಗಳೂರಿಗೆ ತಲುಪಿತ್ತು. ಧರ್ಮಸ್ಥಳ ಜಾಥಾ ತಂಡದ ನಾಯಕರಾದ ಬಿ.ಎಂ.ಭಟ್, ಸುಳ್ಯ ತಂಡದ ನಾಯಕರಾದ ವಸಂತ ಆಚಾರಿ ಪ್ರಾರಂಭದಲ್ಲಿ ತಮ್ಮ ಜಾಥಾಕ್ಕೆ ಜನರಿಂದ ದೊರೆತ ಅಭೂತಪೂರ್ವ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಯಾದವ ಶೆಟ್ಟಿ ವಂದಿಸಿದರು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಪ್ರತಿಭಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್, ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು, ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಮತ್ತು ಜಿಲ್ಲಾ ಸಮಿತಿ ಸದಸ್ಯರು, ಸೌಜನ್ಯಳ ತಂದೆ ತಾಯಿಗಳಾದ ಚಂದಪ್ಪ ಗೌಡ, ಕುಸುಮಾವತಿ, ನ್ಯಾಯವಾದಿ ಯಶವಂತ ಮರೋಳಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಲ್ನಡಿಗೆ ಜಾಥಾಗಳಿಗೆ ದ.ಕ.ಜಿಲ್ಲಾದ್ಯಂತ ಸ್ವಾಗತ:

ಗುಲ್ಬರ್ಗದ ಸಿದ್ಧ ಬಸವ ಕಬೀರ ಸ್ವಾಮೀಜಿಗಳಿಂದ ಉದ್ಘಾಟನೆಗೊಂಡಿತು.



ಜಾಥಾ ಉದ್ಘಾಟನೆ:

ಸೌಜನ್ಯ ಕೊಲೆ ತನಿಖೆಗೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಗಳಿಂದ ಜನ ಜಾಗೃತರಾಗಿದ್ದಾರೆ. ಎಂದು ಗುಲ್ಬರ್ಗದ ಮರುಳ ಶಂಕರ ದೇವರ ಪೀಠದ ಸಿದ್ಧ ಬಸವ ಕಬೀರ ಸ್ವಾಮೀಜಿ ನವಂಬರ್ 21 ರಂದು ಸುಳ್ಯದಲ್ಲಿ ಕಾಲ್ನಡಿಗೆ ಜಾಥಾವನ್ನು ಉದ್ಘಾಟಿಸಿ ಹೇಳಿದರು. ಧರ್ಮಸ್ಥಳ ಉಜಿರೆ ಎರಡೂ ಗ್ರಾಮಗಳಲ್ಲಿ ನಾಲ್ಕುನೂರಕ್ಕೂ ಹೆಚ್ಚು ಅಸಹಜ ಸಾವುಗಳು ನಡೆದಿದ್ದರೆ ಅದರ ಹಿಂದೆ ಪಟ್ಟಭದ್ರರು ಇರುವುದು ಸ್ಪಷ್ಟ. ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಜನರ ಪ್ರತಿಭಟನೆಗಳ ಬಳಿಕ ಅವುಗಳ ಪ್ರಮಾಣ ಕಡಿಮೆಯಾಗಿರುವುದನ್ನು ಗಮನಿಸಬೇಕು ಎಂದೂ ಅವರು ಹೇಳಿದರು.

ಜಾಥಾ ತಂಡದ ನಾಯಕ ವಸಂತ ಆಚಾರಿ ಅವರಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್ ಪಕ್ಷದ ಧ್ವಜವನ್ನು ನೀಡಿ ಜಾಥಾಕ್ಕೆ ಚಾಲನೆ ನೀಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುನಿಲ್ ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು. ಸುಳ್ಯದ ಸಿಪಿಐ(ಎಂ) ನಾಯಕ ರೋಬರ್ಟ್ ಡಿಸೋಜ ಸ್ವಾಗತಿಸಿದರು. ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ ವಂದಿಸಿದರು.

ಧರ್ಮಸ್ಥಳದಿಂದ ಹೊರಟ ಜಾಥಾವು ಧರ್ಮಸ್ಥಳದಲ್ಲಿ ಸೌಜನ್ಯಳ ಪಾಂಗಳ ಮನೆಯಿಂದ ಉದ್ಘಾಟನೆಗೊಂಡಿತು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಿ.ಲೋಕಯ್ಯ ಅವರು ಜಾಥಾ ತಂಡ ನಾಯಕ ಬಿ.ಎಂ.ಭಟ್ ಅವರಿಗೆ ಪಕ್ಷದ ಬಾವುಟವನ್ನು ನೀಡುವುದರ ಮೂಲಕ ಜಾಥಾಕ್ಕೆ ಚಾಲನೆ ನೀಡಲಾಯಿತು. ಸಿಪಿಐ(ಎಂ) ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯಾದವ ಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯರಾದ ಶಿವ ಕುಮಾರ್ ಎಸ್.ಎಂ., ರಮಣಿ ಮೂಡಬಿದ್ರೆ, ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಭರತ್‌ರಾಜ್, ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಜೆ.ಎಂ.ಎಸ್. ಜಿಲ್ಲಾ ಕಾರ್ಯದರ್ಶಿ ಕಿರಣ ಪ್ರಭಾ, ಸುಕನ್ಯಾ, ಲೇಖಕಿ ಅತ್ರಾಡಿ ಅಮೃತಾ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಜನತೆಯ ಸ್ವಾಗತ ಪಟ್ಟಭದ್ರ ಶಕ್ತಿಗಳಿಗೆ ಅಳುಕು:

ಧರ್ಮಸ್ಥಳ ಪಾಂಗಳದಿಂದ ಹೊರಟ ಜಾಥಾ ಉಜಿರೆಯಾಗಿ ಬೆಳ್ತಂಗಡಿ, ವೇಣೂರು, ಮೂಡಬಿದ್ರಿ, ಕೈಕಂಭ (ಗುರುಪುರ)ದಿಂದಲಾಗಿ ಮಂಗಳೂರು ದಾರಿಯಲ್ಲಿ ನವಂಬರ್ 25 ರಂದು ಮಂಗಳೂರಿನ ಬಿಕರ್ನಕಟ್ಟೆಗೆ ತಲುಪಿತು. ಸುಳ್ಯದ ಜಾಥಾ ಪುತ್ತೂರು, ಮಾಣಿ, ಬಿಸಿರೋಡ್‌ನಿಂದಲಾಗಿ ಮಂಗಳೂರು ದಾರಿಯಲ್ಲಿ ಕಣ್ಣೂರು ತಲುಪಿತು. ನವಂಬರ್ 26 ರಂದು ಬೆಳಗ್ಗೆ ಹೊರಟ ಎರಡೂ ಜಾಥಾಗಳು 11 ಗಂಟೆ ಸುಮಾರಿಗೆ ಮಂಗಳೂರಿನ ಪಂಪ್‌ವೆಲ್ ವೃತ್ತ ತಲುಪಿದಾಗ ಪಕ್ಷದ ಅಭಿಮಾನಿಗಳು ಹೂಪಕಳೆ ಚೆಲ್ಲಿ ಜಾಥಾಗಳನ್ನು ಸ್ವಾಗತಿಸಿದರು. ಸಾವಿರಾರು ಜನರ ರ್‍ಯಾಲಿಯಾಗಿ ಪರಿವರ್ತನೆಗೊಂಡ ಜಾಥಾಗಳು ಪಂಪ್‌ವೆಲ್‌ನಿಂದ ಒಂದು ಗಂಟೆ ನಡೆದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಸಭೆಯಾಗಿ ಪರಿವರ್ತನೆಯಾಯಿತು.

ಎರಡೂ ಜಾಥಾಗಳು ಸಾಗಿ ಬಂದ ಊರುಗಳಲ್ಲಿ ಜನಗಳು, ವಸತಿ ಆಹಾರದ ವ್ಯವಸ್ಥೆ ಮಾಡಿದ್ದಲ್ಲದೆ, ಹುಂಡಿಗೆ ದುಡ್ಡಿಕ್ಕುವ ಮೂಲಕ ಉತ್ತಮ ಪ್ರೋತ್ಸಾಹ ನೀಡಿದ್ದಾರೆ.

ಧರ್ಮಸ್ಥಳದ ಪಾಳೇಗಾರಿ ಶಕ್ತಿಗಳ ವಶವರ್ತಿಯಾದ ಕೆಲವು ಸಂಘಟನೆಗಳು ಹಾಗೂ ವ್ಯಕ್ತಿಗಳು ಜನರ ಆಕ್ರೋಶವನ್ನು ಅರ್ಥಮಾಡಿಕೊಳ್ಳಲಾರದೆ ಸಿಪಿಐ(ಎಂ) ಹಾಗೂ ಪ್ರಗತಿಪರ ಸಂಘಟನೆಗಳ ಕುರಿತು ಅಪಪ್ರಚಾರ ಮಾಡುತ್ತಿವೆ. ಕೆಲವು ದಿನಗಳ ಹಿಂದೆ ಸುಮಾರು 50 ಮಂದಿ ಧರ್ಮಸ್ಥಳ ಕ್ಷೇತ್ರಕ್ಕೆ ಅಪಮಾನವಾಗುತ್ತಿದೆಯೆಂದು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಭಾಷಣಗಳಲ್ಲಿ ಪತ್ರಿಕಾ ಹೇಳಿಕೆಗಳಲ್ಲಿ ಮಾನಹಾನಿಕರ ಅಂಶಗಳನ್ನು ಪತ್ತೆ ಮಾಡಲು ನ್ಯಾಯವಾದಿಗಳ ಬಳಗವನ್ನು ಸಿದ್ಧಪಡಿಸಲಾಗಿದೆ. ಸಂಘಪರಿವಾರದ ಕೆಲವು ಪ್ರಮುಖರು ನವಂಬರ್ 26 ರಂದೇ ಧರ್ಮಸ್ಥಳ ಗ್ರಾಮಸ್ಥರಲ್ಲಿ ಕೆಲವರನ್ನು ಒಟ್ಟುಗೂಡಿಸಿ ಬೆಳ್ತಂಗಡಿ ತಾಲೂಕು ಕಚೇರಿ ಎದುರು ಸಭೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ. ಇದೇ ದಿನ ಮಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ರಾಜ್ಯ ಘಟಕದ ಕಾರ್ಯದರ್ಶಿ ಕಮ್ಯೂನಿಸ್ಟ್ ಪಕ್ಷಗಳು ಧರ್ಮಸ್ಥಳ ಸಂಬಂಧಿಸಿ ಹೋರಾಟ ಮಾಡುವುದನ್ನು ನಿಲ್ಲಿಸದಿದ್ದಲ್ಲಿ ಅವುಗಳ ವಿರುದ್ಧ ಎಬಿವಿಪಿ ಹೋರಾಟ ಮಾಡಲಿದೆ ಎಂಬುದಾಗಿ ಕೂಗಾಡಿದ್ದಾರೆ. ಜನತೆಯ ಹೋರಾಟ ಸ್ಥಾಪಿತ ಹಿತಾಸಕ್ತಿಗಳ ನಿದ್ದೆಗೆಡಿಸಿದೆ ಎಂಬುದಕ್ಕೆ ಈ ಪ್ರಕ್ರಿಯೆಗಳೇ ಸಾಕ್ಷಿಯಾಗಿವೆ.

"ಪುರುಷ ಪ್ರಧಾನ ಮೌಲ್ಯಗಳ ವಿರುದ್ಧ ಹೋರಾಡಬೇಕು"

– ಪ್ರೊ. ಶಾಂತಾ ಅಷ್ಟಗಿ

"ಮಹಿಳೆಯರನ್ನು ಕೀಳಾಗಿ ಕಾಣುವ ಎಲ್ಲ ಪುರುಷ ಪ್ರಧಾನ ಮೌಲ್ಯಗಳ ವಿರುದ್ಧ ಹೋರಾಡಬೇಕು" ಎಂದು ಕಮಲಾಪೂರ





ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕಿಯರಾದ ಪ್ರೊ. ಶಾಂತಾ ಅಷ್ಟಗಿ ಹೇಳಿದರು. ಅವರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಇದೇ ನವೆಂಬರ್ 25 ರಂದು ಮಹಾಗಾಂವದಲ್ಲಿ ಏರ್ಪಡಿಸಿದ್ದ ಗುಲ್ಬರ್ಗಾ ತಾಲೂಕ್ ಮಹಿಳಾ ಕೃಷಿ ಕೂಲಿಕಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ಮಹಿಳೆ ಪುರುಷನಿಗಿಂತ ಹೆಚ್ಚು ಕೆಲಸ ಮಾಡುತ್ತಾಳೆ. ಅವಳು ಮನೆಯೊಳಗಿನ ಕೆಲಸವನ್ನೆಲ್ಲಾ ಮಾಡುತ್ತಾಳೆ. ಮನೆಯ ಹೊರಗೆ ಹೋಗಿ ಆದಾಯ ತರುವ ಕೆಲಸವನ್ನೂ ಮಾಡುತ್ತಾಳೆ. ಎಲ್ಲಕ್ಕೂ ಹೆಚ್ಚಾಗಿ ಪ್ರಜೋತ್ಪತ್ತಿಯ ಜವಾಬ್ದಾರಿಯನ್ನು ಅವಳು ನಿರ್ವಹಿಸುತ್ತಾಳೆ. ಆದರೂ ಅವಳ ಕೆಲಸಕ್ಕೆ ಈ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಮನ್ನಣೆ ಇಲ್ಲ. ಹೆಣ್ಣು ಹುಟ್ಟಿದರೆ ಅಸಹ್ಯಪಡುತ್ತಾರೆ. ಹೆಣ್ಣನ್ನು ಭ್ರೂಣದಲ್ಲೇ ಹತ್ಯೆ ಮಾಡಲು ಮುಂದಾಗುತ್ತಾರೆ. ಹೆಣ್ಣು ಮಗುವನ್ನು ತಾತ್ಸಾರದಿಂದ ಬೆಳೆಸುತ್ತಾರೆ. ಶಿಕ್ಷಣ, ಆಹಾರ, ಆರೋಗ್ಯದಂತಹ ವಿಷಯಗಳಲ್ಲಿ ಹೆಣ್ಣು ಮಗುವಿಗೆ ತಾರತಮ್ಯ ಮಾಡುತ್ತಾರೆ. ಮಹಿಳೆಯ ನಂಬಿಕೆಗೆ ದ್ರೋಹ ಮಾಡುತ್ತಾರೆ. ಮಹಿಳೆಯ ಸಹನೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಅವಳ ಮೇಲೆ ಅತ್ಯಾಚಾರ ಮಾಡುತ್ತಾರೆ ಮಾತ್ರವಲ್ಲ ನಂತರ ಅವಳನ್ನು ಕೊಂದುಹಾಕಲೂ ಹಿಂಜರಿಯುವುದಿಲ್ಲ. ಮಹಿಳೆಯರು ಎಲ್ಲ ವಿಧದ ಮೌಢ್ಯವನ್ನು ತೊರೆದು, ಪ್ರಗತಿಪರ ಸಂಘಟನೆಗಳಲ್ಲಿ ಸಂಘಟಿತರಾಗಿ, ಎಲ್ಲ ದಮನ ದೌರ್ಜನ್ಯಗಳ ವಿರುದ್ಧ ಧೈರ್ಯದಿಂದ ಹೋರಾಡಬೇಕು" ಎಂದು ಹೇಳಿದರು.

ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತಾ "ಕೃಷಿಕೂಲಿಕಾರ ಸ್ತ್ರೀ ಪುರುಷರಿಗೆ ಕೆಲಸ, ನ್ಯಾಯವಾದ ಕೂಲಿ, ಸಮರ್ಪಕ ರೇಷನ್ ವ್ಯವಸ್ಥೆ, ವಾಸಕ್ಕೆ ಮನೆ, ಉಚಿತ ವಿದ್ಯುತ್ ಸರಬರಾಜು, ವ್ಯವಸಾಯ ಮಾಡಲು ಭೂಮಿಯನ್ನು ದೊರಕಿಸಲು ಕೃಷಿ ಕೂಲಿಕಾರರ ಸಂಘ ಶ್ರಮಿಸುತ್ತದೆ" ಎಂದು ಹೇಳಿದರಲ್ಲದೆ, "ಮಹಿಳಾ ಕೃಷಿ ಕೂಲಿಕಾರರು ಮಹಿಳೆಯರಾಗಿ ಎದುರಿಸುತ್ತಿರುವ ಪ್ರತ್ಯೇಕ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಕ್ಕೂ ವಿಶೇಷ ಗಮನ ನೀಡುತ್ತದೆ" ಎಂದರು.

ಶ್ರದ್ಧಾಂಜಲಿ :

ಸಮಾವೇಶದ ಹಿಂದಿನ ದಿನ ನಿಧನರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಶಾಸಕಿಯರೂ, ಮಹಾಗಾಂವ ಗ್ರಾಮದವರೇ ಆಗಿದ್ದ ಶ್ರೀಮತಿ ಲಲಿತಾಬಾಯಿ ಚಂದ್ರಶೇಖರ ಪಾಟೀಲ್ ಮಹಾಗಾಂವ ಅವರಿಗೆ ಎರಡು ನಿಮಿಷಗಳ ಮೌನ ಆಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಆರಂಭದಲ್ಲಿ ಕೃಷಿ ಕೂಲಿಕಾರರ ಸಂಘದ ಮೋಹನ್ ಕಟ್ಟಿಮನಿ ಅವರು ಎಲ್ಲರನ್ನು ಸ್ವಾಗತಿಸಿದರು. ರಾಜ್ಯ ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿಯ ಸಂಚಾಲಕಿ ಮಲ್ಲಮ್ಮ ಕೋಡ್ಲಿ, ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ಭೀಮಾಶೆಟ್ಟಿ ಯಂಪಳ್ಳಿ, ರೈತರ ಮುಖಂಡರಾದ ಮೇಘರಾಜ ಕಠಾರೆ ಅವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಸಮಿತಿ ಆಯ್ಕೆ :

ಸಮಾವೇಶದ ಕೊನೆಯಲ್ಲಿ 18 ಜನ ಸದಸ್ಯರುಳ್ಳ ಗುಲ್ಬರ್ಗಾ ತಾಲೂಕಾ ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿಯನ್ನು ಆಯ್ಕೆ ಮಾಡಲಾಯಿತು. ಜಯಶ್ರೀ ಕಟ್ಟಿಮನಿ ಸಮಿತಿಯ ಸಂಚಾಲಕಿಯಾಗಿಯೂ, ಶೋಭಾ ಹಸನಪೇಟೆ ರಾಜಶ್ರೀ ಅವರಾದ, ರೇಣುಕಾ ಮಹಾಗಾಂವ ಮತ್ತು ಇಂದಿರಾ ಡೋಂಗರ್‌ಗಾಂವ ಸಹ ಸಂಚಾಲಕಿಯರಾಗಿ ಆಯ್ಕೆಯಾದರು. ಅಧ್ಯಕ್ಷತೆವಹಿಸಿದ್ದ ಜಯಶ್ರೀ ಕಟ್ಟಿಮನಿ ಅವರ ಅಧ್ಯಕ್ಷೀಯ ಭಾಷಣದೊಂದಿಗೆ ಸಮಾವೇಶ ಮುಕ್ತಾಯವಾಯಿತು. ಮಹಾಗಾಂವ, ಮಹಾಗಾಂವ್ ಕ್ರಾಸ್, ಬಬಲಾದ, ಭೂಸಣಗಿ, ಅವರಾದ, ಬನ್ನೂರ್, ಅಂಕಲಗಿ, ನಾಗೂರ್, ವಾಡಿ, ಧಮ್ಮೂರ್ ಮೊದಲಾದ ಗ್ರಾಮಗಳಿಂದ ಇನ್ನೂರಕ್ಕೂ ಹೆಚ್ಚು ಮಹಿಳಾ ಕೃಷಿ ಕೂಲಿಕಾರರು ಸಮಾವೇಶದಲ್ಲಿ ಭಾಗವಹಿಸಿದ್ದರು. ಪಕ್ಕದ ಆಳಂದ ತಾಲೂಕಿನ ಹಾಗೂ ಬೀದರ್‌ಜಿಲ್ಲೆ ಬಸವಕಲ್ಯಾಣ ತಾಲೂಕಿನ ಕೆಲವು ಜನ ಮಹಿಳಾ ಕೃಷಿ ಕೂಲಿಕಾರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

– ಜಯಶ್ರೀ ಕಟ್ಟಿ

ರೈತರು....

ಪುಟ 5 ರಿಂದ

ವರ್ಷಗಳಾಗಿವೆ. ಆದರೆ, ಸರಕಾರವು ನಮಗೆ 75 ವರ್ಷಗಳಿಂದ ಒಂದೇ ಜಾಗದಲ್ಲಿ ವಾಸಿಸುತ್ತಿರುವ ಬಗ್ಗೆ ದಾಖಲೆಗಳನ್ನು ನೀಡಿ ಎಂದು ಕೇಳುವುದು ವಿಪರ್ಯಾಸ. ಈಗಾಗಲೇ ಹಲವಾರು ಬಾರಿ ಜಾಗ ಮಂಜೂರಿ ಮಾಡಿಕೊಡುವ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದೇವೆ. ಆದರೆ, ಒಂದು ಬಾರಿ ಅರ್ಜಿ ಸಲ್ಲಿಸಿದವರನ್ನೂ ಕೂಡ ಪದೇ ಪದೇ ಅರ್ಜಿ ಸಲ್ಲಿಸಿ ಎಂದು ಸರಕಾರ ತೊಂದರೆ ನೀಡುತ್ತಿದೆ ಎಂದು ಖಂಡಿಸಿದರು.

ನಾವು ಸಲ್ಲಿಸಿದ ಅರ್ಜಿಗಳನ್ನು 5 ವರ್ಷಗಳೇ ಕಳೆದರೂ ಸರಕಾರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಕಳೆದ ಬಿಜೆಪಿ ಸರಕಾರದ ಸಮಯದಲ್ಲಿ ಹಲವಾರು ಕುಟುಂಬಗಳು ಅರ್ಜಿಗಳನ್ನು ನೀಡಿವೆ. ಅವರ ಆಡಳಿತಾವಧಿ ಮುಗಿದರೂ ಕೂಡ ನಮ್ಮ ಸಮಸ್ಯೆಗಳನ್ನು ಪರಿಹರಿಸಲಿಲ್ಲ. ಈಗ ಕಾಂಗ್ರೆಸ್ ಸರಕಾರ ಪುನಃ ಅರ್ಜಿಗಳನ್ನು ಸಲ್ಲಿಸಲು ಹೇಳಿದೆ. ಇದು ಸರಿಯೇ ಎಂದು ಪ್ರಶ್ನಿಸಿದರು. ಕಳೆದ ಬಿಜೆಪಿ ಸರಕಾರದ ಅವಧಿಯಲ್ಲಿ ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ನಮ್ಮ ಸಮಸ್ಯೆಗಳನ್ನು ವಿವರಿಸಿದರೆ ಅವರು ಇದು ಕೇಂದ್ರ ಸರಕಾರವೇ ಬಗೆಹರಿಸಬೇಕಾದ ಸಮಸ್ಯೆ ಎಂದು ಹಾರಿಕೆಯ ಉತ್ತರ ನೀಡಿದ್ದರು. ಈಗಿರುವ ಕಾಂಗ್ರೆಸ್ ಸರಕಾರವೂ ಇದಕ್ಕೆ ಭಿನ್ನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ ಹೋರಾಟ ಬೆಂಬಲಿಸಿ ಮಾತನಾಡಿದರು. ಸಂಘದ ಪದಾಧಿಕಾರಿಗಳಾದ ವಿಷ್ಣು ನಾಯ್ಕ, ಶಾಮನಾಥ ನಾಯ್ಕ, ಪ್ರೇಮಾನಂದ ವೇಳಿಪ, ಗೌರೀಶ್ ನಾಯ್ಕ, ಗಿರೀಶ್ ಗೌಡ, ಬಂಗಾರೇಶ್ವರ ಗೌಡ, ಆರ್. ಎಂ.ಮುಲ್ಲಾ, ರಾಜೇಶ್ ಗೌಡಾ, ತಿಲಕಗೌಡ, ಸುಭಾಷ್ ಕೊಪ್ಪಿಕರ,, ಎಚ್.ಬಿ. ನಾಯ್ಕ ಮತ್ತಿತರರು ಸೇರಿದಂತೆ ಒಂದು ಸಾವಿರಕ್ಕೂ ಹೆಚ್ಚು ಅತಿಕ್ರಮಣದಾರರು ಮಹಾಧರಣಿಯಲ್ಲಿ ಭಾಗವಹಿಸಿದ್ದರು.

ಬೃಹತ್ ಮೆರವಣಿಗೆ: ಒಂದೂವರೆ ಸಾವಿರಕ್ಕು ಹೆಚ್ಚು ಅತಿಕ್ರಮಣದಾರ ರೈತರು ಕಾರವಾರದ ವಿವಿಧ ಬೀದಿಗಳಲ್ಲಿ ನಡೆದ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮೆರವಣಿಗೆಯೂ ಮಾಲಾದೇವಿ ಮೈದಾನದಿಂದ ಪ್ರಾರಂಭವಾಗಿ ಸವಿತಾ ಹೋಟೆಲ್ ವೃತ್ತ, ಸುಭಾಷ್ ಚಂದ್ರಭೋಷ್ ಮೂಲಕ ಸಂಚರಿಸಿ ಜಿಲ್ಲಾಧಿಕಾರಿ ಕಚೇರಿಗೆ ತಲುಪಿತು.

ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ–ದೊರೆತ ಭರವಸೆ

ಅತಿಕ್ರಮಣದಾರರಿಂದ ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಇಂಕೊಂಗ್ಲಾ ಜಮೀರ್, ಈಗಾಗಲೇ ಜಮೀನಿನ ಹಕ್ಕುಪತ್ರ ವಿತರಣೆಗಾಗಿ ಅರ್ಜಿ ಸಲ್ಲಿಸಿದವರು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಅರ್ಜಿಯ ಜೊತೆಗೆ ಕೋರ್ಟ್ ಅಫಿಡವಿಟ್ ಸಲ್ಲಿಸುವ ಅಗತ್ಯವಿಲ್ಲ. ಕೋರ್ಟ್ ಅಪೀಡವಿಟ್ ಸಲ್ಲಿಸಿ ಎಂದು ಸರಕಾರ ಎಲ್ಲೂ ಹೇಳಿಲ್ಲ. ನಿಮ್ಮ ಮನವಿಯನ್ನು ಸರಕಾರಕ್ಕೆ ಮುಟ್ಟಿಸುವ ವ್ಯವಸ್ಥೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಫೋಟೋ

ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಮಹಾಧರಣಿಯಲ್ಲಿ ದೆಹಲಿಯ ಅಖಿಲ ಭಾರತ ಕಿಸಾನ ಸಭಾ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಮಾತನಾಡಿದರು.

ಬಿಜಾಪುರದಲ್ಲಿ ಅಹೋರಾತ್ರಿ ಧರಣ

ಸರ್ಕಾರಿ ಭೂಮಿ ಸಾಗುವಳಿದಾರರಿಗೆ ಭೂಮಿ ಹಕ್ಕುಪತ್ರ, ಕಬ್ಬಿಗೆ ಟನ್‌ಗೆ ಮೂರು ಸಾವಿರ ಬೆಲೆ ನೀಡಿಕೆ ಸೇರಿದಂತೆ ನಾನಾ ಬೇಡಿಕೆಗಳಿಗಾಗಿ ನವೆಂಬರ್ 7 ರಂದು ಬಿಜಾಪುರ ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಅಹೋರಾತ್ರಿ ಧರಣವು ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆಯಿತು. ನವೆಂಬರ್ 8 ರಂದು ಜಿಲ್ಲಾಧಿಕಾರಿಗಳು ಬೇಟಿ ನೀಡಿ ಮನವಿ ಸ್ವೀಕರಿಸಿ ಕ್ರಮದ ಭರವಸೆ ನೀಡಿದರು. ಭೀಮಸಿ ಕಲ್ಲಾ, ಅಣ್ಣಾರಾಯ ಈಳಗೇರ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಇರಾನಿನ ಪರಮಾಣು ಕಾರ್ಯಕ್ರಮದ ಬಗ್ಗೆ ಪಾಶ್ಚಿಮಾತ್ಯ ದೇಶಗಳು ಎಬ್ಬಿಸಿದ ವಿವಾದದ ಇತ್ಯರ್ಥದತ್ತ ಕೊನೆಗೂ ಒಂದು ಮಹತ್ವದ ಹೆಜ್ಜೆ ಇಡಲಾಗಿದೆ. ಅಧ್ಯಕ್ಷ ಒಬಾಮ ಸಿರಿಯಾದ ಮೇಲೆ ಮಿಲಿಟರಿ ದಾಳಿಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದ ರಾಜತಾಂತ್ರಿಕ ಪ್ರಯತ್ನದ ನಂತರ ಇರಾನಿನ ವಿಷಯದಲ್ಲಿ ಈ ರಾಜತಾಂತ್ರಿಕ ಯಶಸ್ಸು ಬಂದಿದೆ. ನಿಜ, ಅಂತಿಮ ಇತ್ಯರ್ಥ ಹಲವು ಅಡ್ಡಿ–ಆತಂಕಗಳನ್ನು ದಾಟಿ ಹೋಗಬೇಕಾಗಿದೆ. ಏಕೆಂದರೆ ಈ ಬೆಳವಣಿಗೆಗಳಿಂದ ಇಸ್ರೇಲ್, ಸೌದಿ ಅರೇಬಿಯಾ ಎರಡೂ ಕುಪಿತಗೊಂಡಿವೆ. ಅಮೆರಿಕಾದೊಳಗೂ ವಿರೋಧಗಳಿವೆ. ಇತ್ತ ಭಾರತಕ್ಕೆ ಇದರಿಂದ ಪ್ರಯೋಜನವಾದರೂ, ಯುಪಿಎ ಸರಕಾರ ತನ್ನ ದೂರದೃಷ್ಟಿಹೀನ ಮತ್ತು ಅಮೆರಿಕಾದೊಂದಿಗೆ ತಗ್ಗಿ–ಬಗ್ಗಿ ನಡೆಯುವ ತನ್ನ ನಿಲುವಿನ ಬಗ್ಗೆ ವಿಷಾದ ಪಡಬೇಕಾಗಿದೆ.

ಜಿನೇವಾ ಒಪ್ಪಂದ –ಒಂದು ಮಹತ್ವದ ಮುನ್ನಡೆ

ಸೀತಾರಾಮ್ ಯೆಚೂರಿ

ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಐದು ಶಾಶ್ವತ ಸದಸ್ಯ ದೇಶಗಳು ಮತ್ತು ಜರ್ಮನಿ (ಪಿ5+1)ಪರಮಾಣು ಪ್ರಶ್ನೆಯ ಮೇಲೆ ಇರಾನ್ ಬಗ್ಗೆ ಒಂದು ಒಪ್ಪಂದಕ್ಕೆ ಬಂದಿರುವುದು ಒಂದು ರಾಜತಾಂತ್ರಿಕ ಗೆಲುವು ಎಂದೆನ್ನಬಹುದು. ಆರು ತಿಂಗಳ ಈ ಮಧ್ಯಂತರ ಒಪ್ಪಂದ ಒಂದು ಸಮಗ್ರವಾದ ಇತ್ಯರ್ಥವನ್ನು ರೂಪಿಸುವ ಸಾಧ್ಯತೆಗಳನ್ನು ಹೊಂದಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯ, ಚೀನಾ, ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿಯ ಹಾಗೂ ಇನ್ನೊಂದೆಡೆ ಇರಾನ್ ನಡುವೆ ಮಾತುಕತೆಗಳ ಹಲವಾರು ಸುತ್ತುಗಳ ನಂತರ ಈ ಒಪ್ಪಂದ ಬಂದಿದೆ.

ಈ ಒಪ್ಪಂದದ ಪ್ರಕಾರ ಇರಾನ್ ಯುರೇನಿಯಂನ್ನು 5ಶೇ. ಬಲಕ್ಕಿಂತ ಹೆಚ್ಚು ಸಮೃದ್ಧಗೊಳಿಸುವುದಿಲ್ಲ ಎಂದು ಒಪ್ಪಿದೆ. ಈಗಿರುವ '20ಶೇ. ಬಲದ ಸಮೃದ್ಧಗೊಳಿಸಿದ ಯುರೇನಿಯಂನ್ನು ತೆಳುಗೊಳಿಸುತ್ತದೆ. ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆಂಸಿ(ಐಎಇಎ)ಯ ಉಸ್ತುವಾರಿ ಮತ್ತು ತನಿಖೆಯನ್ನು ಹೆಚ್ಚಿಸಲು ಇರಾನ್ ಕೂಡ ಒಪ್ಪಿದೆ.

ಇದಕ್ಕೆ ಪ್ರತಿಯಾಗಿ ಪಾಶ್ಚಿಮಾತ್ಯ ಶಕ್ತಿಗಳು ತಾವು ಹಾಕಿದ್ದ ಕೆಲವು ನಿರ್ಬಂಧಗಳನ್ನು ತೆಗೆಯಲು ಹಾಗೂ ತಡೆಹಿಡಿದಿದ್ದ ಇರಾನೀ ತೈಲ ನಿಧಿಯ ಸ್ವಲ್ಪ ಭಾಗದ ಮೇಲಿನ ನಿರ್ಬಂಧವನ್ನೂ ತೆಗೆಯಲು ಒಪ್ಪಿವೆ. ಇದು ಸುಮಾರು 700ಕೋಟಿ ಡಾಲರುಗಳಷ್ಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇರಾನ್, ತಾನು ಪರಮಾಣು ಪ್ರಸರಣ ನಿಷೇಧ ಸಂಧಿಗೆ ಸಹಿ ಹಾಕಿರುವುದರಿಂದಾಗಿ ತನಗೆ ಯುರೇನಿಯಂನ್ನು ಸಮೃದ್ಧಗೊಳಿಸುವ ಹಕ್ಕು ಇದೆ ಎಂದು ಸತತವಾಗಿ ಹೇಳುತ್ತ ಬಂದಿದೆ. ಮಧ್ಯಂತರ ಒಪ್ಪಂದ ಇರಾನ್ ಕೆಳಮಟ್ಟದದ ಯುರೇನಿಯಂ ಸಮೃದ್ಧೀಕರಣಕ್ಕೆ ಅವಕಾಶ ಒದಗಿಸಿದೆ.ಇರಾನಿಗೆ ಯುರೇನಿಯಂ ಸಮೃದ್ಧೀಕರಣದ ಹಕ್ಕು ಇಲ್ಲ ಎಂದು ಹೇಳುತ್ತಲೇ ಇದ್ದು, ಇದನ್ನು ಒಪ್ಪಂದದಲ್ಲಿ ಒಪ್ಪಿಲ್ಲ. ಇದನ್ನು ಸ್ವೀಕರಿಸಲು ನಿರಾಕರಿಸಿದೆ, 5 ಶೇ.ದ ವರೆಗೆ ಸಮೃದ್ಧೀಕರಣದ ಹಕ್ಕು ನೀಡಲಾಗಿರುವುದರತ್ತ ಬೊಟ್ಟು ಮಾಡಿದೆ.

ರಷ್ಯಾದ ವಿದೇಶಾಂಗ ಮಂತ್ರಿ ಸರ್ಜೈ ಲಾವ್ರೊವ್ ಒಪ್ಪಂದದ ಸರಿಯಾದ ವ್ಯಾಖ್ಯೆ ನೀಡಿದ್ದಾರೆ. "ಇರಾನಿಗೆ ಸಮೃದ್ಧೀಕರಣವೂ ಸೇರಿದಂತೆ ಶಾಂತಿಯುತ ಅಣುವಿನ ಹಕ್ಕು ಇದೆ ಎಂಬುದನ್ನು ಮಾನ್ಯ ಮಾಡುವ ಅಗತ್ಯ ಇದೆ ಎಂದು ನಾವು ಒಪ್ಪುತ್ತೇವೆ. ಜತೆಗೆ ಈ ಕಾರ್ಯಕ್ರಮದ ಬಗ್ಗೆ ಪ್ರಸ್ತುತ ಇರುವ ಎಲ್ಲ ಪ್ರಶ್ನೆಗಳನ್ನು ಬಗೆಹರಿಸಲಾಗುವುದು ಮತ್ತು ಇಡೀ ಕಾರ್ಯಕ್ರಮವನ್ನು ಐಎಇಎ ಯ ಕಟ್ಟು ನಿಟ್ಟಾದ ಹತೋಟಿಯಲ್ಲಿ ಇಡಲಾಗುವುದು ಎಂಬ ತಿಳುವಳಿಕೆಗೂ ಬರಲಾಗಿದೆ" ಎಮದು ಅವರು ಹೇಳಿದ್ದಾರೆ.

ಈ ಭಿನ್ನ–ಭಿನ್ನ ವ್ಯಾಖ್ಯೆಗಳು ಒಂದು ಸಮಗ್ರವಾದ ಒಪ್ಪಂದಕ್ಕೆ ಬರುವಲ್ಲಿ ಇನ್ನೂ ಮುಂದೆ ಬರಬಹುದಾದ ತೊಂದರೆಗಳ ಒಂದು ಸಂಕೇತ. ಆದರೆ ಎರಡೂ ಕಡೆಯವರು ಕೆಲವು ರಾಜಿಗೆ ಬಂದಿದ್ದಾರೆ ಎಂಬುದಂತೂ ಸ್ಪಷ್ಟ. ಜಿನೇವಾ ಒಪ್ಪಂದದ ಯಶಸ್ಸಿನ ಹಿಂದೆ ಇರುವುದು ಮೌನ ರಾಜತಾಂತ್ರಿಕತೆ. ಕಳೆದ ಕೆಲವು ತಿಂಗಳಿಂದ ಅಮೆರಿಕಾ ಮತ್ತು ಇರಾನ್ ನಡುವೆ ಇದು ನಡೆಯುತ್ತಿತ್ತು.



ಇರಾನಿನ ಪರಮಾಣು ಪ್ರಶ್ನೆಯನ್ನು ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ಶಕ್ತಿಗಳು ಇರಾನನ್ನು ಏಕಾಂಗಿಯಾಗಿಸಿ ಅದರ ಮೇಲೆ ನಿರ್ಬಂಧಗಳನ್ನು ಹೇರಲು ಒಂದು ಸಾಧನವಾಗಿ ಬಳಸುತ್ತಿದ್ದರು ಎಂಬ ಸಂಗತಿಈ ಜಿನೇವಾ ಒಪ್ಪಂದವನ್ನು ಮಹತ್ತದ್ದಾಗಿಸಿದೆ. ನವ–ಸಂಪ್ರದಾಯಶರಣ ಬುಶ್ ಆಡಳಿತದ ವೇಳೆಯಲ್ಲಂತೂ ಇರಾನಿನಲ್ಲಿ "ಆಳ್ವಿಕೆ ಬದಲಾವಣೆ"ಯೇ ಇದರ ಗುರಿಯಾಗಿತ್ತು.

ಪ್ರಸಕ್ತ ಪರಮಾಣು ವಿವಾದದ ಹಿಂದೆ ಇರುವುದು ಇರಾನಿನ ಬಗ್ಗೆ ಅಮೆರಿಕಾದ ದ್ವೇಷ. 1979ರ ಕ್ರಾಂತಿಯಿಂದ ಪಾಶ್ಚಿಮಾತ್ಯ–ಪರ ಶಹಾ ಆಳ್ವಿಕೆಯನ್ನು ಕಿತ್ತೆಸೆದು ಒಂದು ಇಸ್ಲಾಮಿಕ್ ಗಣತಂತ್ರದ ಉದಯವಾದಂದಿನಿಂದ ಇದು ಅವಿರತವಾಗಿ ನಡೆದುಕೊಂಡು ಬಂದಿದೆ. ಅಧ್ಯಕ್ಷ ಬುಷ್ ಅಮೆರಿಕಾದ ಮೇಲೆ 2001ರ ಭಯೋತ್ಪಾದಕ ದಾಳಿಯ ನಂತರ ಮತ್ತಷ್ಟು ಮುಂದೊಯ್ದರು, ಇರಾನ್ ದೇಶ ಇರಾಕ್ ಮತ್ತು ಉತ್ತರ ಕೊರಿಯಾದ ಜತೆಗೆ 'ದುಷ್ಟ ಅಕ್ಷ'ದ ಭಾಗ ಎಂದು ಸಾರಿದರು.

ಪರಮಾಣು ಪ್ರಶ್ನೆ 2006ರಲ್ಲಿ ರಂಗದ ಮಧ್ಯಕ್ಕೆ ಬಂತು. ಪರಮಾಣು ಪ್ರಸರಣ ನಿಷೇಧ ಸಂಧಿಗೆ ಸಹಿ ಹಾಕಿದ ದೇಶಗಳಲ್ಲಿ ಇಥಾನ್ ಕೂಡ ಇದೆ. ಇದರಿಂದಾಗಿ ಶಾಂತಿಯುತ ಉದ್ದೇಶಗಳಿಗೆ ಪರಮಾಣು ತಂತ್ರಜ್ಞಾನವನ್ನು ಬೆಳೆಸುವ ಹಕ್ಕು ಅದಕ್ಕಿದೆ. ಇದರಲ್ಲಿ ಇಂಧನದ ಸಮೃದ್ಧೀಕರಣವೂ ಸೇರಿದಂತೆ ಪೂರ್ಣ ಪರಮಾಣು ಇಂಧನ ವೃತ್ತವನ್ನು ಹೊಂದುವ ಹಕ್ಕು ಕೂಡ ಸೇರಿದೆ. ಈ ಸಮೃದ್ಧೀಕರಣದ ಹಕ್ಕನ್ನೇ ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳು ಪ್ರಶ್ನಿಸಿರುವುದು. ಇರಾನ್ ಪರಮಾಣು ಅಸ್ತ್ರಗಳನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂಬುದು ಅವುಗಳ ಆಪಾದನೆ.

ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆಂಸಿಯು ಸಪ್ಟಂಬರ್ 2005ರ ಸಭೆಯಲ್ಲಿ ನಡೆದ ಮತದಾನದಲ್ಲಿ ಈ ವಿಷಯವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಒಪ್ಪಿಸಲಾಯಿತು. ಪರಮಾಣು ಶಸ್ತ್ರಾಸ್ತ್ರ ತಂತ್ರಜ್ಞಾನವನ್ನು ಬೆಳೆಸಲು ನೆರವಾಗುವ ಸಾಧನೋಪಕರಣಗಳನ್ನು ಹೊಂದಲು ಆಗಬಾರದೆಂದು ಇರಾನಿನ ಮೇಲೆ ನಿರ್ಬಂಧಗಳನ್ನು ಹೇರಲಾಯಿತು. ನಂತರ ವಿಶ್ವಸಂಸ್ಥೆ ರಕ್ಷಣೆಗೆ ಸಂಬಂಧಪಟ್ಟ ತಂತ್ರಜ್ಞಾನ ಪಡೆಯುವುದರ ಮೇಲೂ ನಿರ್ಬಂಧ ಹಾಕಲಾಯಿತು. ಅಮೆರಿಕಾ ಏಕಪಕ್ಷೀಯವಾಗಿ ಇರಾನಿನ ತೈಲ ಉದ್ದಿಮೆಯನ್ನು ಮತ್ತು ಹಣಕಾಸು ವಲಯವನ್ನು ಹಿಸುಕಿ ಹಾಕಲೆಂದು ಕಠಿಣ ನಿರ್ಬಂಧಗಳನ್ನು ಹೇರಿತು. ಜುಲೈ 2012ರಲ್ಲಿ ಯುರೋಪಿಯನ್ ಒಕ್ಕೂಟ ಇರಾನ್ ಮೇಲೆ ತೈಲ ನಿರ್ಬಂಧ ಹೇರಿತು.

ಅಮೆರಿಕಾ ಸಂಯುಕ್ತ ಸಂಸ್ಥಾನ ಈ ಮೂಲಕ ಇಸ್ರೇಲ್ ಜತೆಗೂಡಿ ಕಾರ್ಯಾಚರಣೆ ನಡೆಸುತ್ತಿತ್ತು. ಇಸ್ರೇಲ್ ಈ ಪ್ರದೇಶದಲ್ಲಿ ಇರಾನ್ ತನಗಿರುವ ಪ್ರಧಾನ ಬೆದರಿಕೆ ಎಂದು ಪರಿಗಣಿಸಿದೆ. ಅಮೆರಿಕಾ ಕೊಲ್ಲಿ ಪ್ರದೇಶದಲ್ಲಿ ತನ್ನ ಪಾರಂಪರಿಕ ಮಿತ್ರರಾದ ಸೌದಿ ಅರೇಬಿಯ ಮತ್ತು ಇತರ ಕೊಲ್ಲಿ ಪ್ರಭುತ್ವಗಳನ್ನು ಕೂಡ ಇರಾನನ್ನು ಏಕಾಂಗಿಯಾಗಿಸಲು ಬಳಸಿಕೊಂಡಿತು. ಸದ್ದಾಂ ಹುಸೇನರನ್ನು ಉರುಳಿಸಿ ಇರಾಕಿನ ಮೇಲೆ ಅತಿಕ್ರಮಣ ನಡೆಸಿದ ನಂತರ ಅಮೆರಿಕಾ ಮತ್ತು ಅದರ ಅರಬ್ ಮಿತ್ರರು ಇರಾನಿನೊಂದಿಗೆ ನಿಕಟ ಮೈತ್ರಿ ಹೊಂದಿರುವ ಸಿರಿಯಾವನ್ನು ಅಸ್ಥಿರಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸಿದವು. ಇದರ ಪರಿಣಾಮವೆಂದರೆ ಈಗ ಅಲ್ಲಿ ಒಂದು ಅಂತರ್ಯುದ್ಧ ಸಾಗಿದೆ. ಬಶೀರ್ ಅಸ್ಸಾದ್ ಸರಕಾರದ ವಿರುದ್ಧ ಸಮರದ ಮುಖಂಡತ್ವ ಈಗ ಉಗ್ರಗಾಮಿ ಇಸ್ಲಾಮೀ ಮೂಲಭೂತವಾದಿ ಶಕ್ತಿಗಳ ಕೈಗೆ ಹೋಗಿದೆ.

ಪಶ್ಚಿಮ ಏಶ್ಯಾದಲ್ಲಿ ಅಮೆರಿಕಾದ ರಣ–ತಂತ್ರ ಸಂಕುಚಿತವಾದಿ ಘರ್ಷಣೆಗಳಿಗೆ, ಮೂಲಭೂತವಾದಿ ಶಕ್ತಿಗಳಿಗೆ ಕುಮ್ಮಕ್ಕು ನೀಡಿದೆಯಷ್ಟೇ. ಇರಾಕ್, ಲಿಬ್ಯಾ, ಯೆಮೆನ್ ಮತ್ತು ಸಿರಿಯಾದಲ್ಲಿ ಇದು ಕಾಣ ಬಂದಿದೆ. ಸಿರಿಯನ್ ಘರ್ಷಣೆ ನೆರೆದೇಶಗಳಿಗೆ ಹರಡುವ ಬೆದರಿಕೆಯಿದೆ.

ರಷ್ಯಾದ ರಾಜತಾಂತ್ರಿಕ ಪ್ರಯತ್ನಗಳ ನಂತರ ಅಧ್ಯಕ್ಷ ಒಬಾಮ ಸಿರಿಯಾದ ಮೇಲೆ ಮಿಲಿಟರಿ ದಾಳಿಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು. ಸಿರಿಯಾದಲ್ಲಿನ ಈ ರಾಜತಾಂತ್ರಿಕ ಪ್ರಯತ್ನದ ನಂತರ ಇರಾನಿನ ವಿಷಯದಲ್ಲಿ ಈ ರಾಜತಾಂತ್ರಿಕ ಯಶಸ್ಸು ಬಂದಿದೆ. ಈ ಬೆಳವಣಿಗೆಗಳಿಂದ ಇಸ್ರೇಲ್, ಸೌದಿ ಅರೇಬಿಯಾ ಎರಡೂ ಕುಪಿತಗೊಂಡಿವೆ. ಇಸ್ರೇಲಿ ಪ್ರಧಾನ ಮಂತ್ರಿ ನೆತನ್ಯಾಹು ಜಿನೇವಾ ಒಪ್ಪಂದ ಒಂದು 'ಚಾರಿತ್ರಿಕ ಪ್ರಮಾದ' ಎಂದಿದ್ದಾರೆ. ಇಸ್ರೇಲ್ ಈಗಲೂ ಇರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆಯ ಬೆದರಿಕೆ ಹಾಕುತ್ತಲೇ ಇದೆ. ಸಿರಿಯಾ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸದಿರುವ ಬಗ್ಗೆ ಅಮೆರಿಕಾದ ಮೇಲೆ ಕ್ರೋಧ ವ್ಯಕ್ತಪಡಿಸಿದ ಸೌದಿ ಅರೇಬಿಯಾಕ್ಕೆ ಕೂಡ ಜಿನೇವಾ ಒಪ್ಪಂದದಿಂದ ನಿರಾಶೆಯಾಗಿದೆ.

ಅಮೆರಿಕಾದೊಳಗೆ, ಅಧ್ಯಕ್ಷ ಒಬಾಮ ಯಾವುದೇ ರೀತಿಯಲ್ಲಿ ಇರಾನಿನೊಂದಿಗೆ ರಾಜಿ ಮಾಡಿಕೊಳ್ಳುವುದಕ್ಕೆ ವಿರೋಧವನ್ನು ಎದುರಿಸುತ್ತಾರೆ. ಅಮೆರಿಕಾದ ಸಂಸತ್ತಿನೊಳಗೆ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಇವರೆಡೂ ಪಕ್ಷಗಳ ಪ್ರತಿನಿಧಿಗಳು ಇರಾನ್ ತನ್ನ ಪರಮಾಣು ಹಕ್ಕುಗಳನ್ನು ಬಿಟ್ಟುಕೊಡದಿದ್ದರೆ ಇನ್ನಷ್ಟು ನಿರ್ಬಂಧಗಳನ್ನು ಹೇರುವ ಬೆದರಿಕೆ ಹಾಕಿದ್ದಾರೆ.

ಇವೆಲ್ಲ ಅಡ್ಡಿ–ಆತಂಕಗಳು ಇದ್ದರೂ ಜಿನೇವಾ ಒಪ್ಪಂದ ಒಂದು ಪ್ರಮುಖ ಮುನ್ನಡೆ. ಈ ಅಡ್ಡಿ–ಆತಂಕಗಳನ್ನು ಮೀರಿ ನಿಲ್ಲಬೇಕಾಗಿದೆ. ಇರಾನಿನಲ್ಲಿ ಹಸನ್ ರೌಹಾನಿ ಅಧ್ಯಕ್ಷರಾಗಿ ಚುನಾಯಿತರಾದ ನಂತರ ಬದಲಾದ ಸನ್ನಿವೇಶದಲ್ಲಿ ಇದು ಸಾಧ್ಯವಾಗಿದೆ. ಅಮೆರಿಕಾ ಕೂಡ ಸಿರಿಯಾದ ಸಂಘರ್ಷದ ಹಿನ್ನೆಲೆಯಲ್ಲಿ ಆ ಇಡೀ ಪ್ರದೇಶ ಅಸ್ಥಿರಗೊಳ್ಳುವುದರ ಅಪಾಯಕಾರಿ ಪರಿಣಾಮಗಳನ್ನು ಗುರುತಿಸಲೇಬೇಕಾಗಿ ಬಂದಿದೆ. ಅಫಘಾನಿಸ್ತಾನದಿಂದ ಅಮೆರಿಕನ್ ಪಡೆಗಳನ್ನು ಹಿಂತೆಗೆದುಕೊಳ್ಳ ಬೇಕಾಗಿರುವಾಗ ಅಲ್ಲಿ ಸನ್ನಿವೇಶವನ್ನು ಸ್ಥಿರಗೊಳಿಸುವಲ್ಲಿ ಇರಾನ್ ವಹಿಸಬಹುದಾದ ಪಾತ್ರವನ್ನು ಅಮೆರಿಕಾ ಕಡೆಗಣಿಸುವಂತಿಲ್ಲ.

ಇರಾನಿನೊಂದಿಗೆ ಪರಮಾಣು ಪ್ರಶ್ನೆಯ ಇತ್ಯರ್ಥ ಭಾರತಕ್ಕೂ ಪ್ರಯೋಜನಕಾರಿ. ಸಪ್ಟಂಬರ್ 2005ರಲ್ಲಿ ಐಎಇಎ ಸಭೆಯಲ್ಲಿ ಅಮೆರಿಕಾದ ಒತ್ತಡಕ್ಕೆ ಶರಣಾದ ಯುಪಿಎ ಸರಕಾರ ಭಾರತದ ಸ್ವಂತ ಹಿತಾಸಕ್ತಿಯ ವಿರುದ್ಧ ಕೆಲಸ ಮಾಡಿತು, ಇರಾನಿನ ವಿರುದ್ಧ ಮತನೀಡಿ ಈ ವಿಷಯ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಹೋಗುವಂತಾಯಿತು. ಯುಪಿಎ ಸರಕಾರ ಇರಾನ್ –ಪಾಕಿಸ್ತಾನ–ಭಾರತ ಅನಿಲ ಪೈಪ್‌ಲೈನ್ ಯೋಜನೆಯಿಂದ ಹಿಂದೆ ಸರಿಯಿತು. ನಂತರ ಅಮೆರಿಕಾದ ನಿರ್ಬಂಧಗಳ ಒತ್ತಡಕ್ಕೆ ಮಣಿದು ಇರಾನಿನಿಂದ ತೈಲ ಆಮದನ್ನು ಅರ್ಧಕ್ಕೆ ಇಳಿಸಿತು. 2011ರ ವರೆಗೆ ಭಾರತಕ್ಕೆ ತೈಲ ಪೂರೈಸುವಲ್ಲಿ ಇರಾನ್ ಎರಡನೇ ಸ್ಥಾನದಲ್ಲಿತ್ತು. ಈಗ ಅಮೆರಿಕಾವೇ ಇರಾನಿನೊಂದಿಗೆ ಗೆಳೆತನದತ್ತ ಸಾಗಿರುವಾಗ ಭಾರತ ತನ್ನ ದೂರದೃಷ್ಟಿಹೀನ ಮತ್ತು ತಗ್ಗಿ–ಬಗ್ಗಿ ನಡೆಯುವ ನಿಲುವಿನ ಬಗ್ಗೆ ಕೊರಗಬೇಕಾಗಿದೆಯಷ್ಟೇ.



ಅಲ್ಲಿ ಒಪ್ಪಂದವಾದರೆ ಇಲ್ಲಿ ಇಸ್ರೇಲಿನ, ಸೌದಿ ಅರೇಬಿಯಾದ ಆಳರಸರಿಗೆ ಮೈನಡುಕ! –ಪಾಶ್ಚಿಮಾತ್ಯ ವ್ಯಂಗ್ಯಚಿತ್ರಕಾರ ಚಪ್ಪಾತ್ ವ್ಯಂಗ್ಯ



ಕಲ್ಲು ಹೃದಯದ ಸರ್ಕಾರ

ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇ.3 ರಷ್ಟು ಮೀಸಲಾತಿ ಜಾರಿ ಮಾಡಲಿ. ಅಂಗವಿಕಲರಿಗೆ ಖಾಸಗಿ ರಂಗದಲ್ಲೂ ಮೀಸಲಾತಿ ದೊರೆಯಲಿ

– ಜಿ.ಎನ್. ನಾಗರಾಜ

ಕೆಪಿಎಸ್‌ಸಿಯೇ ಆಗಲಿ, ಅಥವಾ ಯಾವುದೇ ಇಲಾಖೆಯೇ ಆಗಲಿ ಉದ್ಯೋಗ ನೇಮಕಾತಿಯಲ್ಲಿ ಸಂವಿಧಾನಬದ್ಧವಾಗಿ ಅಂಗವಿಕಲರಿಗೆ ನೀಡಬೇಕಾದ ಶೇ. 3 ಮೀಸಲಾತಿ ನೀತಿ ಜಾರಿ ಮಾಡುತ್ತಿಲ್ಲ. ಕೇಂದ್ರ ಸರ್ಕಾರವೂ ಮೀಸಲಾತಿ ನೀತಿ ಜಾರಿ ಮಾಡುತ್ತಿಲ್ಲ. ಈ ಸಂಬಂಧ ಸರ್ಕಾರಗಳಿಗೆ ದೇಶದ ಸುಪ್ರಿಂ ಕೋರ್ಟ್ ಛೀಮಾರಿ ಹಾಕಿ, ಮೂರು ತಿಂಗಳೊಳಗೆ ಈ ಮೀಸಲಾತಿ ನೀತಿ ಜಾರಿಮಾಡಬೇಕೆಂದು ಆದೇಶ ನೀಡಿ ತಿಂಗಳಾದರೂ ಸರ್ಕಾರಗಳಿಂದ ಆದೇಶ ಜಾರಿ ಮಾಡುವ ಯಾವ ಪ್ರಯತ್ನಗಳೂ ಕಾಣುತ್ತಿಲ್ಲ. ಅಂಗವಿಕಲರ ಘನತೆಯ ಜೀವನಕ್ಕಾಗಿ ಆಳುವ ಸರ್ಕಾರಗಳು ಈ ಧೋರಣೆ ಕೈಬಿಟ್ಟು ಸರ್ಕಾರಿ ನೇಮಕಾತಿಯಲ್ಲಿ ಅಂಗವಿಕಲರ ಶೇ.3 ಮೀಸಲಾತಿ ಜಾರಿ ಮಾಡಬೇಕು. ಖಾಸಗಿ ರಂಗದಲ್ಲೂ ಮೀಸಲಾಗಿ ನೀತಿ ಜಾರಿಗೆ ತರಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ರಾಜ್ಯ ಸಂಚಾಲಕ ಜಿ. ಎನ್. ನಾಗರಾಜ್ ಆಗ್ರಹಿಸಿದರು. ಅವರು 'ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟ'ದ ಮೊದಲ ಸಮ್ಮೇಳನದ ಹಿನ್ನೆಲೆಯಲ್ಲಿ ನವೆಂಬರ್ 28 ರಂದು ಬೆಂಗಳೂರು ನಗರದ ಸ್ವಾತಂತ್ರ್ಯ ಉದ್ಯಾನದ ಸಮೀಪ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಅಂಗವಿಕಲರು ಸಾಮಾನ್ಯರಿಗಿಂತ ನಾಲ್ಕಾರು ಪಟ್ಟು ಹೆಚ್ಚು ಕಷ್ಟಪಟ್ಟು ಓದುತ್ತಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಪಡೆದರೂ ಅವರಿಗೆ ಉದ್ಯೋಗಗಳು ದೊರೆಯುತ್ತಿಲ್ಲ. ಘನತೆಯ ಜೀವನಕ್ಕೆ ಉದ್ಯೋಗವೇ ಆಧಾರ. ಆದರೆ ಸರ್ಕಾರದ ಉದ್ಯೋಗಗಳಲ್ಲಿ ಅಂಗವಿಕಲರಿಗೆ ಶೇ.1 ರಷ್ಟು ಮೀಸಲಾತಿಯು ದೊರೆಯುತ್ತಿಲ್ಲ. ಇಂತಹ ಧೋರಣೆಗಳ ವಿರುದ್ಧ ಚಳುವಳಿ ರೂಪಿಸಲು ಮತ್ತು ಅಂಗವಿಕರು ಮತ್ತು ಪಾಲಕರನ್ನು ಸಂಘಟಿಸಿಲಾಗುತ್ತಿದ್ದು ತಾಲ್ಲೂಕು ಜಿಲ್ಲೆಗಳಿಂದ ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.



ಸಭೆಗೂ ಮೊದಲು ಗಾಂಧಿನಗರದ ಗಾಂಧಿ ಪ್ರತಿಮೆ ಬಳಿಯಿಂದ ಅಂಗವಿಲಕರ ಮತ್ತು ಪಾಲಕರ ಮೆರಣಿವಣಿಗೆ–ರಾಜಭವನದ ಕಡೆಗೆ ಹೊರಟಿತು. ಅಂಗವಿಕಲರ ಮಾಸಿಕ ಪಿಂಚಣಿಯನ್ನು 3,000 ರೂ.ಗೆ ಹೆಚ್ಚಿಸುವುದು ಸೇರಿದಂತೆ, ನಾನಾ ಬೇಡಿಕೆಗಳಿಗಾಗಿ ಅಂಗವಿಲಕರು ಮತ್ತು ಪಾಲಕರು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿ ಬಂದರು.

ಒಕ್ಕೂಟದ ಸಂಘಟನಾ ಸಂಚಾಲಕ ಜಿ.ಎ ಯಶು, ಬಳ್ಳಾರಿ ಜಿಲ್ಲಾ ಮುಖಂಡರಾದ ಎ ಉಸ್ಮಾನ್ ಬಾಷಾ, ಹಾಗೂ ಚಾಂದ್ ಮಂಡ್ಯ ಜಿಲ್ಲೆಯ ಮುಖಂಡರಾದ ಕುಮಾ ಬೆಂಗಳೂರಿನ ರೇಣುಕ, ಬೆಂಗಳೂ ಗ್ರಾಮಾಂತರ ಜಿಲ್ಲೆಯ ಚಂದ್ರಶೇಖ ಕೋಲಾರದ ಗೋಪಾಲ್, ಉತ್ತರ ಕನ್ನಡ ಜಿ ಪ್ರವೀಣ್ ಕುಮಾರ್. ಆರ್.ಶೆಟ್ಟಿ, ಬಿಜಾಪು ಜಿಲ್ಲೆಯ ಅಶೋಕ್ ವಾಲೇಕಾರ್. ಉಡು ಜಿಲ್ಲೆಯ ಮುಂಜುನಾಥ್ ಹೆಬ್ಬಾರ್, ಬಾಗ ಕೋಟೆಯ ಉಮೇಶ್ ಜನ್ನಿ, ಗುಲ್ಬರ್ಗಾ ಸುಭಾಷ್ ಹೊಸಮನಿ, ಧಾರವಾಡದ ರ ಹರ್ಕುಣಿ ಮುಂತಾದವರು ಸಭೆಯನ್ನುದ್ದೇಶಿ ಮಾತನಾಡಿದರು. ಬೆಂಗಳೂರು ವೆಂಕಟೇ ವಂದನಾರ್ಪಣೆ ಮಾಡಿದರು.

ಬಹಿರಂಗ ಸಭೆಯ ನಂತರ ಸಂಘಟನೆಯ ನಿಯೋಗ ರಾಜ್ಯಪಾಲರಿಗೆ ಮನವಿ ಸಲ್ಲಿಸಿತು.

ಒಕ್ಕೂಟದ ರಾಜ್ಯ ಸಂಚಾಲಕ ಜಿ.ಎನ್ ನಾಗರಾಜ್, ಒಕ್ಕೂಟದ ಸಂಘಟನ ಸಂಚಾಲಕರಾದ ಜಿ.ಎನ್. ಯಶು, ಮ ವೆಂಕಟೇಶ್ ರಾಜ್ಯ ಸಂಚಾಲಕ ರಂಗ ದಾಸರ್, ಬಳ್ಳಾರಿ ಜಿಲ್ಲಾ ಮುಖಂಡರಾದ ಎ ಉಸ್ಮಾನ್ ಬಾಷಾ, ಕಛೇರಿ ಕಾರ್ಯದರ್ಶಿ ರಾಜನ್ ಮುಂತಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

'ಎಲ್ಲ ಅಂಗವಿಕಲರಿಗೂ ಘನತೆಯ 'ಜೀವನ' ವಿಚಾರ ಸಂಕಿರಣ

ಸಮ್ಮೇಳನದ ಕಲಾಪಗಳು ಬೆಂಗಳೂ ಗಾಂಧಿನಗರದ 'ಮಹಾರಾಷ್ಟ್ರ ಮಂಡಳ್'ದ ಸಂಜೆ ಆರಂಭವಾದವು. 'ಎಲ್ಲ ಅಂಗವಿಕಲರಿಗ



ಜನಶಕ್ತಿ
ಕನ್ನಡ ವಾರಪತ್ರಿಕೆ

ಅಂಗವಿಕಲರಿಗೂ ಘನತೆಯ ಜೀವನ' ಎಂಬ ವಿಷಯದ ಕುರಿತು ವಿಚಾರ ಸಂಕಿರಣ ನಡೆಯಿತು. ಸಂಕಿರಣವನ್ನು ಹೈಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ಅವರು ನೆರವೇರಿಸಿದರು.

'ಅಂಗವಿಕಲರು ಎಂದರೆ ಅಸಮರ್ಥರು ಎಂದಲ್ಲ, ಭಿನ್ನಚೇತನರು'

–ನ್ಯಾ. ನಾಗಮೋಹನ್ ದಾಸ್

ಅಂಗವಿಕಲರು ಎಂದರೆ ಅಸಮರ್ಥರು ಎಂದಲ್ಲ. ಭಿನ್ನ ಚೇತನರು ಎಂದು. ನಮ್ಮ ಸಮಾಜ ಅಂಗವಿಕಲರಿಗೆ ಸಮಾನ ಅವಕಾಶಗಳನ್ನು ನೀಡಿಲ್ಲ. ಅಂಗವಿಕಲರಲ್ಲಿಯೂ ಸಾಮರ್ಥ್ಯ ಇರುತ್ತದೆ. ಅಂಗವಿಕಲರ ಸಾಮರ್ಥ್ಯವನ್ನು ಸಮಾಜಕ್ಕೆ ಬಳಕೆ ಮಾಡುವಲ್ಲಿ ನಮ್ಮ ಸರ್ಕಾರ ಮತ್ತು ವ್ಯವಸ್ಥೆಗಳು ವಿಫಲವಾಗಿವೆ. ಸರ್ಕಾರ ಮತ್ತು ಸಮಾಜಗಳು ಈ ನಿಟ್ಟಿನಲ್ಲಿ ಕಣ್ತೆರೆಯಬೇಕು ಎಂದು ನಾಗಮೋಹನದಾಸ್ ಅವರು ಈ ಸಂದರ್ಭದಲ್ಲಿ ಕರೆ ನೀಡಿದರು. ಗ್ರಾಮೀಣ ಪ್ರದೇಶ ಅಂಗವಿಕಲರು ಸ್ವಾವಲಂಭಿಗಳಾಗಿ ಸಾಕಷ್ಟು ಪರಿಶ್ರಮದ ಕೆಲಸಗಳನ್ನು ಮಾಡುವ ಉದಾಹರಣೆಗಳನ್ನು ಅವರು ನೀಡಿದರು.

ಕಾರ್ಖಾನೆಯೊಳಗೆ ಕೆಲಸ ಮಾಡುವಾಗ ಅಂಗವಿಕಲರಾದವರಿಗೆ ಅಲ್ಲಿಯೇ ಕಡಿಮೆ ಶ್ರಮದ ಅಥವಾ ಭಿನ್ನ ಸ್ವರೂಪದ ಸಾಮರ್ಥ್ಯದ ಹಗುರ ಕೆಲಸ ನೀಡಬೇಕೆಂಬ ಪ್ರಶ್ನೆಯಲ್ಲಿ ಕಾನೂನು ಅಂತಹ ಸೌಲಭ್ಯವನ್ನು ಕೊಡಬೇಕೆಂಬ ನಿಯಮವು ಸರ್ಕಾರಿ ಕಾರ್ಖಾನೆಗೆ ಅನ್ವಯ ಎಂದಿತ್ತು. ಆದರೆ ಅಂಗವಿಕಲರಾದವರು ಸರ್ಕಾರಿ ಕಾರ್ಖಾನೆಯಾದರೂ ತೊಂದರೆಗೊಳಗಾಗುತ್ತಾರೆ ಖಾಸಗಿ ಕಾರ್ಖಾನೆಯಾದರೂ ತೊಂದರೆಗೊಳಗಾಗುತ್ತಾರೆ. ಖಾಸಗಿ ಕಾರ್ಖಾನೆಯಲ್ಲಿ ಸೌಲಭ್ಯ ನೀಡಬಾರದು



ಎಂದಿಲ್ಲ. ಆದ್ದರಿಂದ ಈ ಪ್ರಕರಣ ನನ್ನ ಮುಂದೆ ಬಂದಾಗ ನಾನು ನಿಯಮ ಖಾಸಗಿ ಕಾರ್ಖಾನೆಗೂ ಅನ್ವಯಿಸುತ್ತದೆ ಎಂದು ವ್ಯಾಖ್ಯಾನಿಸಿ ತೀರ್ಪು ನೀಡಿದೆ. ಕಾನೂನನ್ನು ಈ ರೀತಿಯಲ್ಲಿ ನೊಂದವರ, ಅನ್ಯಾಯಕ್ಕೊಳಗಾದವರ ಪರವಾಗಿ ವ್ಯಾಖ್ಯಾನಿಸಬೇಕು ಎಂದು ಅವರು ಹೇಳಿದರು.

ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರ. ಇದೊಂದು ಕಲ್ಯಾಣ ರಾಷ್ಟ್ರ. ಜನರಿಗೆ ಶಿಕ್ಷಣ, ಆಹಾರ, ವಸತಿ, ಸಾರಿಗೆ ಮುಂತಾದ ಮೂಲಭೂತ ಅಗತ್ಯಗಳನ್ನು ಒದಗಿಸುವುದು ಇಲ್ಲಿನ ಸರ್ಕಾರದ ಕರ್ತವ್ಯ. ಆದರೆ ಇಲ್ಲಿ ಎಲ್ಲವನ್ನೂ ಖಾಸಗೀಕರಿಸಲಾಗುತ್ತಿದೆ. ಎಲ್ಲವನ್ನೂ ಖಾಸಗೀಕರಿಸಿದರೆ 'ಕಲ್ಯಾಣ ರಾಜ್ಯ' ಎನ್ನುವುದಕ್ಕೆ ಅರ್ಥವಿಲ್ಲ ಎಂದು ದಾಸ್ ಅವರು ಹೇಳಿದರು.

124 ಕೋಟಿ ಜನಸಂಖ್ಯೆಯ ಭಾರತ ದೇಶದಲ್ಲಿ ಸು. 10 ಕೋಟಿ ಜನ ಅಂಗವಿಕಲರಿದ್ದಾರೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿಯೂ ಅಂಗವಿಕಲತೆ ಹೆಚ್ಚಿದೆ. ಸರ್ಕಾರವು ಲಾಭ ನಷ್ಟಗಳ ಆಧಾರದಲ್ಲಿ ನಡೆಯುವ 'ಡಿಪಾರ್ಟ್‌ಮೆಂಟಲ್ ಸ್ಟೋರ್ಸ್' ಆಗಬಾರದು ಎಂದು ಅವರು



ಹೇಳಿದರು. ವಿಚಾರ ಸಂಕಿರಣದ ಭಾಗವಾಗಿ ಸ್ವತಃ ಅಂಗವಿಕಲರಾಗಿದ್ದು ಅಂಗವಿಕಲರ ಕಲ್ಯಾಣದಲ್ಲಿ ನಾನಾ ಸಾಧನೆ ಮಾಡಿದ ಮತ್ತು ಅಂಗವಿಕಲರ ಅಭ್ಯುದಯಕ್ಕಾಗಿ ಶ್ರಮಿಸಿದ ಸಾಧಕರು ತಮ್ಮ ಅನುಭವ–ವಿಚಾರ ಹಂಚಿಕೊಂಡರು.

ಆತಂಭದಲ್ಲಿ ರಂಗಪ್ಪ ದಾಸರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಅಂಗವಿಕಲರು ಶೌಚಾಲಯಗಳನ್ನು ಬಳಸುವುದರಲ್ಲಿ ಇರುವ ತೊಂದರೆಗಳಿಂದ ಆರಂಭಿಸಿ ಶಿಕ್ಷಣ, ಉದ್ಯೋಗಗಳಲ್ಲಿನ ನಾನಾ ತೊಂದರೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಎಸ್. ವೆಂಕಟೇಶ್, ಸ್ವಾಗತಿಸಿದರು. ಜಿ.ಎನ್. ಯಶಸ್ವಿ ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು.

ಉಪನ್ಯಾಸಗಳು

'ಅಂದ–'ರ ಮತ್ತು ಉಳಿದವರ ಶಿಕ್ಷಣ ನೀಡುವಲ್ಲಿ ಅನುಭವಗಳು' ಎಂಬ ವಿಷಯವಾಗಿ 'ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣಾ ಆಯೋಗ'ದ ಸದಸ್ಯರೂ, ಬೆಂಗಳೂರಿನ ಮಾತೃ ಅಂಧರ, ಶ್ರವಣ ದೋಷವುಳ್ಳವರ ಶಾಲೆಯ ನಿರ್ದೇಶಕರೂ ಆದ ಜಿ.ಆರ್. ಮುಕ್ತಾ–ಮಾತನಾಡಿ ಬಡಕುಟುಂಬದಲ್ಲಿರುವ ಅಂಗವಿಕಲರ ಕಷ್ಟಗಳು ಸಮಸ್ಯೆಗಳು ಹೆಚ್ಚು. ಶಿಕ್ಷಣಕ್ಕೆ ಆದ್ಯತೆ ನೀಡಿ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸಬೇಕು ಎಂದರು.

'ಅಂಗವಿಕಲರಿಗೆ ಉದ್ಯೋಗ, ಕ್ರೀಡೆ ಮತ್ತು ಘನತೆ' ಎಂಬ ಕುರಿತು ಮಾತನಾಡಿದ 'ಅಂಗವಿಕಲ ವ್ಯಕ್ತಿಗಳ ಅಧಿನಿಯಮ'ದ ರಾಜ್ಯ ಆಯುಕ್ತರಾದ ಶ್ರೀ ಕೆ.ಎಸ್. ರಾಜಣ್ಣ ಅಂಗವೈಕಲ್ಯ ಶಾಪವಲ್ಲ. ಅಂಗವಿಕಲರು ಅವಕಾಶ ಬಳಸಿಕೊಂಡು ಸಾಧನೆ ಮಾಡಬೇಕೆಂದರು.

'ಅಂಗವಿಕಲರಿಗೆ ಸಾಹಸ ಮತ್ತು ಶಿಕ್ಷಣ'– ಎಂಬ ಕುರಿತು 'ದಿ ಅಡ್ವೆಂಚರರ್ಸ್' ಸಂಸ್ಥೆಯ ಶ್ರೀ ಎಸ್.ಎಲ್.ಎನ್.ಸ್ವಾಮಿ ವಿಷಯ ಮಂಡಿಸಿ ಅಂಗವಿಕಲರು ಎನ್ನಲಾಗುವ ಮಕ್ಕಳ ಭಿನ್ನ ಸಾಮರ್ಥ್ಯವನ್ನು ಮತ್ತು ಸಾಹಸಗಳನ್ನು ಸಾಕ್ಷ್ಯಚಿತ್ರಗಳ ಪ್ರದರ್ಶನದೊಂದಿಗೆ ಪರಿಚಯಿಸಿದರು. ಅಂಗವೈಕಲ್ಯ ಎನ್ನುವುದು ಒಂದು ಮನೋಸ್ಥಿತಿ. ಬಹಳಷ್ಟು ಸಂದರ್ಭಗಳಲ್ಲಿ ಅದನ್ನು ಮೀರಿ ವಿಶೇಷ ಸಾಧನೆಗಳನ್ನು ಮಾಡಬಹುದು ಎಂದರು.

ಇದೇ ಸಂದರ್ಭದಲ್ಲಿ ಅಂಗವಿಕಲರ ಅಭ್ಯುದಯದ ನಿಟ್ಟಿನಲ್ಲಿ ದುಡಿದ ಸಾಧಕರಿಗೆ ಅಭಿನಂದನಾ ಕಾರ್ಯಕ್ರಮವನ್ನು ಕೂಡ ಸಂಘಟಿಸಲಾಗಿತ್ತು.

ನ್ಯಾ. ನಾಗಮೋಹನ ದಾಸ್, ಜಿ.ಎನ್. ನಾಗರಾಜ್, ಮುಂತಾದವರು ಸಾಧಕರಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಿದರು. ಜನಶಕ್ತಿ ಬಳಗದ ಎಸ್.ವೈ. ಗುರುಶಾಂತ್ ಅವರು ಸಾಧಕರನ್ನು ಪರಿಚಯಿಸಿದರು.

ಅಭಿನಂದಿಸಲ್ಪಟ್ಟ ಸಾಧಕರ ಪರಿಚಯ

ಶ್ರೀ. ಕೆ.ಎಸ್. ರಾಜಣ್ಣ– ಕಳೆದ 15 ವರುಷಗಳಿಂದಲೂ ಎನ್.ಜಿ.ಎಫ್.ನ ಉಪ ಕೈಗಾರಿಕೆಯನ್ನು ಸ್ಥಾಪಿಸಿ ಸುಮಾರು 200ಕ್ಕೂ ಅಧಿಕ ಅಂಗವಿಕಲರಿಗೆ ಕೆಲಸ ಒದಗಿಸಿದವರು. 2003ರಲ್ಲಿನ ಅಂತರಾಷ್ಟ್ರೀಯ ಪಾರಾ ಒಲಿಂಪಿಕ್ಸ್ ಕ್ರೀಡೆಯಲ್ಲಿ ಸುವರ್ಣ ಪದಕವನ್ನು ಗೆದ್ದದ್ದು ಮತ್ತೊಂದು ಸಾಧನೆ

ಶ್ರೀಮತಿ ಜಿ.ಆರ್.ಮುಕ್ತಾ:

ಸ್ವತಃ ಅಂಗವಿಕಲೆ. ಕಳೆದ 12 ವರುಷಗಳ ಹಿಂದೆ ಮಾತೃ ಅಂಧರ, ಶ್ರವಣ ದೋಷವುಳ್ಳವರ ಶಾಲೆಯನ್ನು ಬೆಂಗಳೂರಿನಲ್ಲಿ ವಿಶೇಷವಾಗಿ ಗ್ರಾಮೀಣ ಮಕ್ಕಳಿಗೆ ವಸತಿ ಶಾಲೆಯನ್ನು ನಡೆಸುತ್ತಿದ್ದಾರೆ. ಬ್ರೈಲ್ ಯಂತ್ರ ಪಡೆದು ಆ ಮೂಲಕ ಗ್ರಂಥ ರಚನೆಗೂ ಮುಂದಾಗಿದ್ದಾರೆ. ಇಲ್ಲಿ ಸಾವಿರಾರು ಅಂಗವಿಕಲರು ತರಬೇತಿ ಪಡೆದಿದ್ದಾರೆ.

ಶ್ರೀಮತಿ ನೊಮಿಟೋ ಕಾಮದಾರ್:

ವಿಕಲಚೇತನರ ಅಭಿವ್ಯಕ್ತಿಯನ್ನು ಕ್ರೋಢೀಕರಿಸಿ ಜೋಡಿಸಿ ಅವರ ಅನಿಸಿಕೆಗಳನ್ನು ಇತರರಿಗೆ ಅರ್ಥಮಾಡಿಸಬಲ್ಲವರು. ಮಾನಸಿಕವಾಗಿ ಜರ್ಜರಿತಗೊಂಡ ಹೆಂಗಳೆಯರ ಪುನರ್‌ಚೇತನಕ್ಕಾಗಿ ಇವರಿಂದ ರೂಪಿಸಲ್ಪಟ್ಟ 'ವಿಮೆನ್ ಆಫ್ ಕರೇಜ್' ಕಾರ್ಯಕ್ರಮ ವಿಶಿಷ್ಟ. ಪ್ರಸಕ್ತವಾಗಿ ಶಿವಮೊಗ್ಗ ಜಿಲ್ಲೆಯ ಹೊನ್ನೆಮರಡು ನಲ್ಲಿದ್ದಾರೆ. ಅಲ್ಲಿ70 ಕ್ಕಿಂತ ಹೆಚ್ಚು ಅಂಗವಿಕಲ ತಂಡಗಳಿಗೆ ಒಟ್ಟಾರೆ ಸು. 5000 ಅಂಗವಿಕಲರಿಗೆ ತರಬೇತಿ ನೀಡಿದ್ದಾರೆ.

ಡಾ. ಎಸ್ ಎಲ್ ಎನ್ ಸ್ವಾಮಿ: ನಿಸರ್ಗ ಮತ್ತು ಸಾಹಸ ಶಿಕ್ಷಣದ ಸಮನ್ವಯದ ಬಗ್ಗೆ ಬೆನ್ ಸೋನ್ಸ್‌ರಿಂದ ಪ್ರಥಮ ಎವರೆಸ್ಟ್ ಆರೋಹಿ ಪರ್ವತಪ್ರಿಯ ತೇನ್‌ಸಿಂಗ್ ನೊರ್ಗೆಯವರ 'ನಿನ್ನ ಹಿತ್ತಲಿನತ್ತ ಮುಖ ಮಾಡು' ಎಂಬ ವಿಚಾರದಿಂದ ಪ್ರೇರಿತರಾಗಿ ಪಶ್ಚಿಮ ಘಟ್ಟದಲ್ಲಿ (ಹೊನ್ನೆಮರಡು ಪರಿಸರದಲ್ಲಿ)ಬಂದು ನೆಲಸಿದರು. 'ದಿ ಅಡ್ವೆಂಚರರ್ಸ್' ಎಂಬ ಜಲಸಾಹಸ ಸಂಸ್ಥೆ ರೂಪಿಸಿದರು. ಕರ್ನಾಟಕದಲ್ಲಿ ಹೊರಾಂಗಣದಲ್ಲಿ ಪ್ರಾಯೋಗಿಕ ಕಲಿಕೆಯ ವಿಧಾನಗಳನ್ನು ರೂಪಿಸುವಲ್ಲಿ ಶ್ರಮಿಸಿದರು.

ಪ್ರತಿನಿಧಿ ಚರ್ಚೆ

ಸಮ್ಮೇಳನದ ಪ್ರತಿನಿಧಿ ಅಧಿವೇಶನವು ನವೆಂಬರ್ 29 ರಂದು ನಡೆಯಿತು. ಅಂಗವಿಕಲರ ಶಿಕ್ಷಣ, ಉದ್ಯೋಗ, ಸರ್ಕಾರಿ ಸೌಲಭ್ಯಗಳು ಮತ್ತು ಸಾರಿಗೆ, ಅಂಗವಿಕಲ ಮಹಿಳೆಯರ ಸಮಸ್ಯೆಗಳು ಹೀಗೆ ನಾಲ್ಕು ಗುಂಪುಗಳಾಗಿ ಚರ್ಚೆಯಲ್ಲಿ ಪಾಲ್ಗೊಂಡ ಪ್ರತಿನಿಧಿಗಳ ಚರ್ಚೆಯನ್ನು ಆಯ್ದ ಪ್ರತಿನಿಧಿಗಳು ಸಮ್ಮೇಳನದ ಮುಂದೆ ಮಂಡಿಸಿದರು, ಸಂಘಟನೆಯ ರಾಜ್ಯ ಸಂಚಾಲಕರಾದ ಜಿ.ಎನ್. ನಾಗರಾಜ್‌ರವರು ಮಂಡಿಸಿದ ಲಿಖಿತ ವರದಿಯ ಮೇಲೆ ಒಟ್ಟು 14 ಪ್ರತಿನಿಧಿಗಳು ಚರ್ಚಿಸಿದರು. ಸಮ್ಮೇಳನದಲ್ಲಿ ಒಟ್ಟು 14 ಜಿಲ್ಲೆಗಳ 175 ಪ್ರತಿನಿಧಿಗಳು ಮತ್ತು ಅಂಗವಿಕಲರಿಗೆ ಶಿಕ್ಷಣ ನೀಡುವ ಶಿಕ್ಷಕರ ಗುಂಪು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ನೂತನ ಸಮಿತಿ

ಸಮ್ಮೇಳನವು ಒಟ್ಟು 36 ಜನರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು.

ರಾಜ್ಯ ಅಧ್ಯಕ್ಷರು	:	ಜಿ.ಎನ್. ನಾಗರಾಜ್
ಪ್ರಧಾನ ಕಾರ್ಯದರ್ಶಿ	:	ಉಸ್ಮಾನ್ ಭಾಷಾ
ವಲಯ ಕಾರ್ಯದರ್ಶಿಗಳು	:	ಅರ್ಜುದ ರಾಜನ್
		ಸೋಮಪ್ಪ ಆಯಟ್ಟಿ
ಉಪಾಧ್ಯಕರು	:	ವೆಂಕಟೇಶ್ ಕೋಣಿ, ಉಡುಪಿ,
		ಸುಭಾಷ್ ಹೊಸಮನಿ, ಗುಲ್ಬರ್ಗಾ
		ರಂಗಪ್ಪ ದಾಸರ್, ಬಳ್ಳಾರಿ,
		ಕುಮಾರ್, ಮಂಡ್ಯ
ಕಾರ್ಯದರ್ಶಿಗಳು	:	ಎಸ್. ವೆಂಕಟೇಶ್, ಬೆಂಗಳೂರು
		ಯಶಸ್ವಿ ಜಿ.ಎನ್. ಬೆಂಗಳೂರು
		ಚಾಂದ್ ಬಿ. ಬಳ್ಳಾರಿ
		ಮುಂಜುನಾಥ್ ಹೆಬ್ಬಾರ್,ಉಡುಪಿ
ಸಲಹೆಗಾರರು	:	ಕುಬೇರಪ್ಪ, ಹಿರಿಯರು.
		ಅಂಗವಿಕಲರ ಪೋಷಕರು.

ಅಖಿಲ ಭಾರತ ಸಮ್ಮೇಳನಕ್ಕೆ ಪ್ರತಿನಿಧಿಗಳು

ಡಿಸೆಂಬರ್ 6–7–8,-2013 ರಂದು ಕೇರಳದ ಕೊಚ್ಚೀನ್‌ನಲ್ಲಿ ನಡೆಯಲಿರುವ 'ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ'ಯ ಅಖಿಲ ಭಾರತ ಸಮ್ಮೇಳನಕ್ಕೆ 20 ಪ್ರತಿನಿಧಿಗಳನ್ನು ಸಮ್ಮೇಳನ ಚುನಾಯಿಸಿದೆ.

ರಾಜ್ಯದಲ್ಲಿ ಸಹಸ್ರಾರು ರಾಸುಗಳ ಸಾವು !! ಕಾಲುಬಾಯಿ ರೋಗವೇ– ಕಾಯಿಲೆ ಏನು ? ಪರಿಹಾರವೇನು ?

–ಜಿ. ಸಿ. ಬಯ್ಯಾರೆಡ್ಡಿ



ಕರ್ನಾಟಕ ರಾಜ್ಯದ ಮಂಡ್ಯ, ರಾಮನಗರ, ಬೆಂಗಳೂರು ನಗರ– ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮುಂತಾದ ಸುಮಾರು ಹತ್ತು ಜಿಲ್ಲೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸಾವಿರಾರು ಹಸುಗಳು ಕಾಯಿಲೆಯಿಂದ ಸಾವನ್ನಪ್ಪುತ್ತಿದ್ದು ಹೈನುಗಾರಿಕೆಯನ್ನು ನಂಬಿದ ರೈತರು ಮತ್ತು ಪಶು ಸಾಕಾಣಿಕೆದಾರರು ತೀವ್ರವಾದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಲುಬಾಯಿ ರೋಗದಿಂದ ಈ ಸಾವುಗಳು ಸಂಭವಿಸುತ್ತಿವೆ ಎಂಬ ವಿಶ್ಲೇಷಣೆ ಆಧಾರದಲ್ಲಿ ಲಸಿಕೆ ಹಾಕುವುದು ಮುಂತಾದ ಕೆಲವು ಸೀಮಿತ ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ ರೋಗ ಪೂರ್ಣ ನಿಯಂತ್ರಣಕ್ಕೆ ಬಂದಿಲ್ಲ ಎಂಬುದು ಎದ್ದು ಕಾಣುತ್ತಿದೆ.

ಜೊತೆಗೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಇತ್ತೀಚೆಗೆ ಆಗಿರುವ ಜಾನುವಾರುಗಳ ಸಾವಿನ ಬಾರಿ ಪ್ರಮಾಣ ಮತ್ತು ಸ್ವರೂಪವನ್ನು ನೋಡಿದಾಗ ಕಾಲುಬಾಯಿ ರೋಗದ ಜೊತೆಗೆ ಬೇರೆಯೂ ಕಾರಣಗಳಿರಬಹುದೇ ಎಂಬ ಪ್ರಶ್ನೆ ಕಾಡುತ್ತಿದೆ.

ಸಮಸ್ಯೆ ಸಂಬಂಧ ತುರ್ತು ಕ್ರಮಗಳು ಹಾಗೂ ಅಗತ್ಯ ಪರಿಹಾರಕ್ಕಾಗಿ ಆಗ್ರಹಿಸಿ ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಪ್ರತಿಭಟನೆಗಳನ್ನು ರೈತ ಸಂಘ ನಡೆಸಿದೆ. ಸಮಸ್ಯೆಯ ತೀವ್ರತೆಯ ಹಿನ್ನೆಲೆಯಲ್ಲಿ 'ಕರ್ನಾಟಕ ಪ್ರಾಂತ ರೈತಸಂಘ'ದ ರಾಜ್ಯ ಸಮಿತಿಯು ಹಸುಗಳು–ದನಕರುಗಳ ಸಾವಿನಿಂದ ಮತ್ತು ರೋಗಬಾಧೆಯಿಂದ ನೊಂದ–ತೊಂದರೆಗೊಳಗಾದ ರೈತರಿಗೆ ಸೂಕ್ತ ಪರಿಹಾರವನ್ನು ನೀಡಬೇಕು ಮತ್ತು ರೋಗ ನಿಯಂತ್ರಣದ ದೃಷ್ಟಿಯಿಂದ ಶಾಶ್ವತವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯಮಟ್ಟದ ಹೋರಾಟವನ್ನು ರೂಪಿಸಿ ಸಿದ್ಧತೆ ನಡೆಸುತ್ತಿದೆ. ಈ ಚಳುವಳಿಗೆ ಪೂರಕವಾಗಿ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿಯು 'ಕಾಲುಬಾಯಿ ರೋಗದ ಸಂಪೂರ್ಣ ನಿಯಂತ್ರಣ ಮತ್ತು ಶಾಶ್ವತ ಪರಿಹಾರದ ಸಾಧ್ಯತೆಗಳು' ಎಂಬ ವಿಷಯದ ಕುರಿತು ನವೆಂಬರ್ 21, 2013 ರಂದು ಕೋಲಾರದಲ್ಲಿ ದುಂಡುಮೇಜಿನ ಸಭೆಯನ್ನು ಸಂಘಟಿಸಿತ್ತು.(ವರದಿ ಪ್ರತ್ಯೇಕ ಇದೆ.)

ರಾಜ್ಯದ ಸಮಸ್ಯೆ–ರಾಷ್ಟ್ರೀಯ ಸಮಸ್ಯೆ

ಕಾಲುಬಾಯಿ ರೋಗ ಮತ್ತು ಹಸು–ಕರುಗಳಿಗೆ ರೋಗುರುಜಿನ, ಸಾವುಗಳು ಕೇವಲ ಕೆಲವು ಜಿಲ್ಲೆಗಳ ಸಮಸ್ಯೆಯಲ್ಲ. ಕೇವಲ ಕರ್ನಾಟಕದ ಸಮಸ್ಯೆಯೂ ಅಲ್ಲ. ಕರ್ನಾಟಕವೂ ಸೇರಿದಂತೆ ಇದು ಇಂದು ಇಡೀ ದೇಶವನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. ಕಾಲುಬಾಯಿ ರೋಗದಿಂದ ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಸುಮಾರು 20 ಸಾವಿರ ಕೋಟಿ ರೂ.ಗಳಷ್ಟು ದೊಡ್ಡ ಹಾನಿ ಸಂಭವಿಸಿದೆ ಎಂದು ಅಂದಾಜು ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಮಾತ್ರವೇ ಸು. 7,500 ಹಸುಗಳು ಸತ್ತಿವೆ ಎಂದು ಸರ್ಕಾರಿ ಅಂಕಿಸಂಖ್ಯೆಗಳು ಹೇಳುತ್ತವೆ. ಆದರೆ ವಾಸ್ತವ ಅದಕ್ಕಿಂತ ಇನ್ನೂ ತುಂಬಾ ಹೆಚ್ಚಿರಬಹುದು. ಏಕೆಂದರೆ ಸರ್ಕಾರದ ಅಂದಾಜಿನಂತೆ ಮಂಡ್ಯ ಜಿಲ್ಲೆಯಲ್ಲಿ ಸತ್ತ ರಾಸುಗಳ ಸಂಖ್ಯೆ ಸು. 650. ಆದರೆ ಇತ್ತೀಚಿಗೆ ಈ ವಿಷಯದ ಕುರಿತು ಮರುಸಮೀಕ್ಷೆ ನಡೆಸಿದ ಅಧಿಕಾರಿಗಳೇ ಹೇಳುವ ಪ್ರಕಾರ ಮಳವಳ್ಳಿ ತಾಲ್ಲೂಕು ಒಂದರಲ್ಲೇ ರಾಸುಗಳ ಸಾವಿನ ಸಂಖ್ಯೆ ಸು. 1500 ರಿಂದ 1600 ರವರೆಗೆ ಇದೆ. ಸಂಖ್ಯೆಯನ್ನು ಇನ್ನಷ್ಟೆ ಅಂತಿಮಗೊಳಿಸಬೇಕಿದೆಯಂತೆ. ಏನೇ ಇರಲಿ ಜಿಲ್ಲೆಯಲ್ಲಿ ರಾಸುಗಳ ಸಾವು 2000 ಕ್ಕಿಂತಲೂ ಹೆಚ್ಚಾಗಿದೆ ಅನ್ನುವುದು ಖಚಿತ. ಅಂ–ದರೆ ಸಮಸ್ಯೆಯ ತೀವ್ರತೆ ಏನು ಎಂದು ಅರಿವಾಗಬಹುದು. ಸೂಕ್ತ ಪರಿಹಾರವನ್ನು ಹುಡುಕದೇ ನಿರ್ಲಕ್ಷ್ಯ ಮಾಡಿದಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸುವ ಎಲ್ಲ ಸಾಧ್ಯತೆಗಳೂ ಇದ್ದು ಇದನ್ನು ಅರಿತು ಎಚ್ಚರ ವಹಿಸಬೇಕಿದೆ.

ಕಾಯಿಲೆಯ ಸ್ವರೂಪ–

ಕಾಲುಬಾಯಿ ರೋಗ ಎಂಬುದು ವೈರಸ್‌ನಿಂದ ಹರಡುವ ಒಂದು ಕಾಯಿಲೆ. ಬ್ಯಾಕ್ಟೀರಿಯಾಗಳಿಂದ ಹರಡುವ ರೋಗಗಳ ನಿಯಂತ್ರಣ–ನಿವಾರಣೆ ಸುಲಭ. ವೈರಸ್‌ಗಳಿಂದ ಹರಡುವ ಕಾಯಿಲೆ ನಿಯಂತ್ರಣ ಕಷ್ಟ. ಆದ–ರೆ ಮುನ್ನೆಚ್ಚರಿಕೆಯ ಕ್ರಮವಾಗಿ ಲಸಿಕೆ ಹಾಕುವುದು ಮುಂತಾದ ಕ್ರಮಗಳಿಂದ ಕೆಲವು ಪ್ರಯೋಜನವಿದೆ.

ಸಾಮಾನ್ಯವಾಗಿ ಈ ಕಾಯಿಲೆ ಚಳಿಗಾಲದಲ್ಲಿ ಹೆಚ್ಚಾಗುತ್ತದೆ. ಕಡಿಮೆ ಉಷ್ಣಾಂಶದಲ್ಲಿ ವೈರಸ್‌ಗಳು ಹೆಚ್ಚಳಗೊಳ್ಳುವುದರಿಂದ ನವೆಂಬರ್–ಡಿಸೆಂಬರ್ ತಿಂಗಳುಗಳಲ್ಲಿ ಕಾಯಿಲೆ ತೀವ್ರವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಈ ಬಾರಿ ಎರಡು ಮೂರು ತಿಂಗಳು ಮೊದಲೇ ಅಂದರೆ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲೆ ಕಾಣಿಸಿಕೊಂಡು ರೈತರನ್ನು ಕಂಗೆಡಿಸಿದೆ.

ಅದಕ್ಕೆ ಏನು ಕಾರಣ ಎಂದೂ ಕೂಡ ಸಂಶೋಧನೆಯಾಗಬೇಕಿದೆ. ಕಳೆದ ಬಿಜೆಪಿ ಸರ್ಕಾರದ ಅವಧಿಯ ಕೊನೆಯಲ್ಲಿ ಪಶುವೈದ್ಯರು ಮುಷ್ಕರ ಮಾಡಿದ್ದರು. ಹಾಗಾಗಿ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಇದರಿಂದ ಹಾನಿಯಾಗಿತ್ತು. ಅದಲ್ಲದೇ ಲಸಿಕೆಯನ್ನು ಶೈತ್ಯಾಗಾರದಲ್ಲಿ, ಫ್ರಿಡ್ಜ್‌ಗಳಲ್ಲಿ ಸೂಕ್ತ ವಾತಾವರಣದಲ್ಲಿ ಸಂಗ್ರಹ ಮಾಡಬೇಕು. ಪ್ರತಿ ಆರು ತಿಂಗಳಿಗೆ ಒಂದು ಹಂತದಂತೆ ನಿರಂತರವಾಗಿ ಲಸಿಕೆಗಳನ್ನು ಹಾಕಬೇಕು. ಈ ಕ್ರಮದಲ್ಲಿ ಲೋಪವಾಗಿದೆಯಾ ? ಅಥವಾ ನಿರಂತರ ವಿದ್ಯುತ್‌ಕಡಿತ ಇತ್ಯಾದಿಗಳ ಕಾರಣದಿಂದ ಈ ಶೈತ್ಯೀಕರಣದ ವ್ಯವಸ್ಥೆಗಳಲ್ಲಿ ಲೋಪವಾಗಿ ಲಸಿಕೆ ತನ್ನ ಸಾಮಾರ್ಥ್ಯ ಕಳೆದುಕೊಂಡು ಸಮಸ್ಯೆ ತೀವ್ರವಾಗಿರಬಹುದಾ ಎಂಬ ಬಗ್ಗೆಯೂ ಅಧ್ಯಯನವಾಗಬೇಕಿದೆ.

ಸಾಮೂಹಿಕ ಆಂದೋಲನವಾಗಲಿ

ಕಾಯಿಲೆ ಬಂದ ಮೇಲೆ ಅದನ್ನು ವಾಸಿ ಮಾಡುವ ಕ್ರಮಗಳಿಗಿಂತ ಕಾಯಿಲೆ ಬರದಂತೆ ನಿವಾರಣೆ ಮಾಡುವುದು ಮುಖ್ಯ. ಹಿಂದೆ 'ದೊಡ್ಡರೋಗ' ಎಂಬ ಕಾಯಿಲೆ ದೇಶದಲ್ಲಿ ಬಾರಿ ಪಿಡುಗಾಗಿ ಕಂಡುಬಂದಾಗ ಅದನ್ನು ಎದುರಿಸಲು ಒಂದು ಆಂದೋಲನದಂತೆ ಕ್ರಮಕೈಗೊಂಡದ್ದರಿಂದಾಗಿ ಅದನ್ನು ನಿಯಂತ್ರಿಸಲು ಸಾಧ್ಯವಾಯಿತು. ಈಗಲೂ ಅಂತಹ ಒಂದು ಬೃಹತ್ ಜನಾಂದೋಲನದ ಮಾದರಿಯ ಸಾಮೂಹಿಕ ಕಾರ್ಯಾಚರಣೆ ಅಗತ್ಯವಾಗಿದೆ. ದೇಶದ ಪಂಜಾಬ್ ಮತ್ತು ಹರ್ಯಾಣ ರಾಜ್ಯಗಳು 'ಕಾಲುಬಾಯಿ ರೋಗಮುಕ್ತ ಪ್ರದೇಶ' ಎನಿಸಿಕೊಂಡಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಿದೆ. ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸರ್ಕಾರಿ ಯಂತ್ರವನ್ನು ದೊಡ್ಡರೀತಿಯಲ್ಲಿ ಬಳಸುವಂತೆ ಮತ್ತು ಜನಪ್ರಿಯ ಕ್ರೀಡಾಪಟುಗಳು, ಕಲಾವಿದರುಗಳು ಮುಂತಾದವರನ್ನು ತೊಡಗಿಸಿ ಸಾಮೂಹಿಕ ಕಾರ್ಯಾಚರಣೆ ಯೋಜಿಸಬೇಕಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕ್ರಮಗಳು ಮತ್ತು ಸಿದ್ಧತೆಗಳು ರೋಗನಿಯಂತ್ರಣದ ಪ್ರಯತ್ನಗಳು ಏನು ಸಾಲದಾಗಿದೆ. ಅಗತ್ಯ ಪ್ರಮಾಣದಲ್ಲಿ ಪಶುವೈದ್ಯರು ಮತ್ತು ಸಿಬ್ಬಂದಿ ಇಲ್ಲ. ಅಗತ್ಯ ಹಣಕಾಸು ಬೆಂಬಲವು ಇಲ್ಲ. ಸೂಕ್ತ ಜನಜಾಗೃತಿ ಪ್ರಯತ್ನಗಳಿಲ್ಲ.

ಲಸಿಕೆಯ ಗುಣಮಟ್ಟ

ಮತ್ತೊಂದು ಲಸಿಕೆಯ ಗುಣಮಟ್ಟದ ಪ್ರಶ್ನೆ. ಈಗ ನೀಡಲಾಗುತ್ತಿರುವ ಲಸಿಕೆ ಗುಣಮಟ್ಟವನ್ನು ಸುಧಾರಿಸಿ ಮತ್ತಷ್ಟು ಪರಿಣಾಮಕಾರಿಯಾದ ಲಸಿಕೆಯನ್ನು ರೂಪಿಸಲು ಸರ್ಕಾರ ಮುಖ್ಯವಾಗಿ ಕೇಂದ್ರ ಸರ್ಕಾರವು ಗಮನ ನೀಡಬೇಕು. ಈ ನಿಟ್ಟಿನಲ್ಲಿ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ, ಸಂಶೋಧನಾ ಸಂಸ್ಥೆಗಳಿಗೆ ಅಗತ್ಯ ನೆರವು ಮತ್ತು ಬೆಂಬಲ ದೊರೆಯಬೇಕು.

ಪಶು ಸಂಗೋಪನೆಯ ಮಹತ್ವ

ಹಾಲು, ಹಾಲಿನ ಉತ್ಪನ್ನಗಳು, ಮಾಂಸ, ಚರ್ಮ,ಬಟ್ಟೆಮತ್ತಿತರ ಅಗತ್ಯಗಳಿಗಾಗಿ ಹೈನುಗಾರಿಕೆ ಮತ್ತು ದನಗಳು, ಕುರಿ, ಮೇಕೆ, ಕೋಳಿ, ಹಂದಿ, ಮೀನು, ರೇಷ್ಮೆಹುಳು ಮುಂತಾದವುಗಳ ಸಾಕಣೆ ಭಾರತದಂತಹ ಕೃಷಿ ಪ್ರಧಾನವಾದ ಮತ್ತು ಬೃಹತ್ ಜನಸಂಪನ್ಮೂಲವುಳ್ಳ ಒಂದು ದೇಶದಲ್ಲಿ ಅತ್ಯಂತ ಮಹತ್ವದ್ದು. ಬೇಸಾಯ, ಕೈಗಾ ಅಥವಾ ಸೇವಾವಲಯಗಳು ಮಾತ್ರವೇ ದೇ ವಿಶಾಲ ಜನಸಂಖ್ಯೆಗೆ ಉದ್ಯೋಗಾವಕಾಶವ ನೀಡಲಾರವು. ಜೊತೆಗೆ ಈ ವಲಯ ಆಗುವ ಉತ್ಪಾದನೆ ಮತ್ತು ಅಭಿವೃದ್ಧಿ ಹಾಲು, ಮೊಟ್ಟೆ, ಮಾಂಸ ಮುಂತಾದ ಜ ಆಹಾರದ ಅಗತ್ಯಗಳನ್ನು ಪೂರೈಸುತ್ತದೆ. ದೇ ಕೋಟಿ ಕೋಟಿ ಜನ ಮಕ್ಕಳು, ಗರ್ಭಿಣಿಯ ಮಹಿಳೆಯರು ಮತ್ತು ಪುರುಷರು ಕು ಅಪೌಷ್ಟಿಕತೆಯಿಂದ ರಕ್ತಹೀನತೆಯಿ ನರಳುತ್ತಿರುವ ಈ ದೇಶದಲ್ಲಿ ಈ ಉದ್ದ ಬೆಳೆಯಬೇಕಾದ ಮಹತ್ವದ ಬಗೆಗೆ ಹೆ ವಿವರಿಸಬೇಕಾದ ಅಗತ್ಯವೇ ಇಲ್ಲ. ಮತ್ತು ಕ್ಷೇತ್ರದ ಅಭಿವೃದ್ಧಿ ದೇಶದ ವ್ಯಾಪಾರೋದ್ಯಮ ಮತ್ತು ವಿದೇಶಿ ವಿನಿಮಯಗಳಿಗೆ ನೆರವಾಗಲಿದೆ.

ಇಂದು ಚೀನಾ ದೇಶ ಬಿಟ್ಟರೆ ಹಾ ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನದಲ್ಲಿ ಕರ್ನಾಟಕ ರಾಜ್ಯವು ಹಾಲು ಉತ್ಪಾದನೆಯ ದೇಶದಲ್ಲಿಯೇ ಮುಂಚೂಣಿ ಸ್ಥಾನದಲ್ಲಿ ಅಂದರೆ ಇದು ದೇಶದ ಕೋಟ್ಯಾಂತರ ಜನ ಜೀವನಾಧಾರ ಒದಗಿಸಿದೆ.

ವೈಜ್ಞಾನಿಕ ಪದ್ದತಿ–ಉತ್ಪಾದಕತೆಯ ಪ್ರಶ್ನೆ

ಪಶುಪಾಲನೆಯು ವೈಜ್ಞಾನಿಕವಾದ ಮ ಆಧುನಿಕವಾದ ವಿಧಾನದಲ್ಲಿ ಆಗಬೇಕಾದ ಈ ನಿಟ್ಟಿನಲ್ಲಿ ರೈತರಿಗೆ ಮತ್ತು ಉದ್ದಿಮೆದಾರ ಸೂಕ್ತ ತಿಳುವಳಿಕೆ ಮತ್ತು ತರಬೇತಿ ನೀಡುವು ಇಂದಿನ ಒಂದು ತುರ್ತು ಅಗತ್ಯವಾಗಿದೆ. ಮ ಇದು ರೋಗ ನಿಯಂತ್ರಣದ ದೃಷ್ಟಿಯಿಂದಲ ಒಂದು ಶಾಶ್ವತವಾದ ಪರಿಹಾರವಾಗಿದೆ. ಮನೆ ಒಂದು ಕೋಣೆಯಲ್ಲಿ ಸೂಕ್ತ ಗಾಳಿ–ಬೆಳಕಿ ವ್ಯವಸ್ಥೆ ಇಲ್ಲದ ಪರಿಸ್ಥಿತಿಯಲ್ಲಿ ರೇಷ್ಮೆ ಸಾಕಾಣ ಕೊಡುವ ಫಲವೇ ಬೇರೆ. ಸೂಕ್ತವಾದ ಪ್ರತ್ಯೇಕ ಕೋಣೆಯಲ್ಲಿ ವೈಜ್ಞಾನಿಕವಾಗಿ ನಡೆಸು ರೇಷ್ಮೆ ಸಾಕಾಣಿಕೆ ಕೊಡುವ ಫಲವೇ ಬೇ ವೈಜ್ಞಾನಿಕ ವಿಧಾನದಲ್ಲಿ ಇಳುವರಿ ಹೆಚ್ಚುತ್ತ ಮಾತ್ರವಲ್ಲ ಗುಣಮಟ್ಟ ಕೂಡ ಹೆಚ್ಚುತ್ತ ದನಕರುಗಳ ಸಾಕಾಣಿಕೆಯ ವಿಷಯದಲ್ಲ ಅಷ್ಟೆ. ಸ್ವಚ್ಛತೆ ಕಾಪಾಡಲು ಸಾಧ್ಯವಾಗುವಂತ ಉತ್ತಮ ಕೊಟ್ಟಿಗೆ ನಿರ್ಮಾಣ ಮತ್ತು ವೈಜ್ಞಾನಿ ನಿರ್ವಹಣೆಯಿಂದ ಸಾಕಷ್ಟು ರೋಗಗಳನ ನಿವಾರಿಸಲು ಸಾಧ್ಯವಿದೆ. ಹೆಚ್ಚು ಹಾಲು ಕೊಡು ಸೀಮೆ ಹಸುಗಳು ಮತ್ತು ಸಂಮಿಶ್ರ ತಳಿಯ ಹಸುಗಳ ಆರೋಗ್ಯ ಪರಿಸ್ಥಿತಿ ಬಹುಸೂಕ್ಷ್ಮ ವಾ ಸಾಕಷ್ಟು ಎಚ್ಚರಿಕೆಯಿಂದ ಅವುಗಳನ್ನು ಪಾಲ ಮಾಡಬೇಕಾಗುತ್ತದೆ. ಒಂದೊಮ್ಮೆ ಇಂತ ರಾಸುಗಳ ಸಾವು ಸಂಭವಿಸಿದರೆ ಆರ್ಥಿ ದೃಷ್ಟಿಯಿಂದ ದೊಡ್ಡ ನಷ್ಟವನ್ನೇ ಸಾಕಾಣಿ ಕೆದಾರರರು ಅನುಭವಿಸಬೇಕಾಗುತ್ತದೆ.

ಆದರೆ ಬಡರೈತರು, ಬಡಜನರಿಗೆ, ಸಾಮಾ ಉದ್ದಿಮೆದಾರರಿಗೆ ಆಧುನಿಕ ಕೊಟ್ಟಿಗೆ, ಕೋಣ ಸುಸಜ್ಜಿತ ವೈಜ್ಞಾನಿಕ ಸಾಕಣೆ ಕೇಂದ್ರಗಳನ ತಾವೇ ನಿರ್ಮಿಸಿಕೊಳ್ಳುವುದು ಸಾಧ್ಯವಿಲ್ಲ ಮಾತು. ಸರ್ಕಾರಗಳು ಈ ವಿಷಯದಲ್ಲಿ ಸೂ ತರಬೇತಿ, ಕಡಿಮೆ ಬಡ್ಡಿಯ ಸಾಲದ ವ್ಯವ ಮತ್ತು ಸಹಾಯಧನದ ವ್ಯವಸ್ಥೆ ಮಾಡಲ ಮುಂದಾಗಬೇಕು. ಉತ್ಪನ್ನಗಳಿಗೆ ಸರಿಯಾ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು. ನೈಸರ್ಗಿ ವಿಕೋಪ, ಆಪತ್ತು, ರೋಗರುಜಿನಗಳು ಉಂಟಾ ಆಗುವ ಕಷ್ಟನಷ್ಟಗಳಿಂದ ರಕ್ಷಣೆ ನೀಡುವುದು ತನ ಕರ್ತವ್ಯವೆಂದು ಸರ್ಕಾರಗಳು ಹೊಣೆ ಹೊರಬೇಕು ನಿಜವಾಗಿಯೂ ಅರ್ಥಪೂರ್ಣವಾದ ರೀತಿ ನಷ್ಟ ತುಂಬಿಕೊಡುವ ವಿಮೆಸೌಲಭ್ಯವನ್ನು ಒದಗಿಸುವುದು ಮತ್ತು ಸರ್ಕಾರವೇ ಒಂದ ಮಾನವೀಯ–ಮಾದರಿ ವಿಮಾಸಂಸ್ಥೆಯಂ ಕೆಲಸ ಮಾಡುವುದು ಅಗತ್ಯವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಕೋಲಾರ: ಸಹಸ್ರಾರು ಹಸುಗಳ ಸಾವು !!
'ಕಾಲುಬಾಯಿ' ಜೊತೆ ಬೇರೆ ರೋಗದ ಸಂಶಯ'
ಡಿಸೆಂಬರ್-3, 2013 ಸಮಗ್ರ ಪರಿಹಾರಕ್ಕೆ ಆಗ್ರಹಿಸಿ ಬೆಂಗಳೂರು ಚಲೋ

ೃತರ ಜೀವನಕ್ಕೆ ಆಸರೆಯಾದ ಹಾಲು ರೆಯುವ ಹಸುಗಳು, ವ್ಯವಸಾಯ ುವಟಿಕೆಗಳ ಒಡನಾಡಿಗಳಾದ ಕರುಗಳು ದಿಢೀರನೆ ಕಣ್ಮುಚ್ಚಿಕೊಂಡರೆ ುಗಾರಿಕೆಯನ್ನು ನಂಬಿಕೊಂಡ ರೈತರಿಗೆ ಗಾಗಬಹುದು ? 'ವ್ಯವಸಾಯವನ್ನು ಕೊಂಡವರ ಬದುಕು ಏನಾಗಬಹುದು ಇಂದು ರೋಗಬಾಧೆಯಿಂದ ಬೇರೆ ್ಲೆಗಳಿಗಿಂತಲೂ ತೀವ್ರವಾದ ಸಮಸ್ಯೆಗಳಿಗೆ ುಕಿರುವ ಕೋಲಾರ ಜಿಲ್ಲೆಯಲ್ಲಿ ತಹ ಗಂಭೀರ ಸಮಸ್ಯೆಗೆ ಕಾರಣಗಳನ್ನು ಡುಕುವಂತಹ ಮತ್ತು ಪರಿಹಾರವನ್ನು ಚಿಸುವಂತಹ ಒಂದು ಚರ್ಚೆಯನ್ನು ೀಲಾರದ ಪ್ರಾಂತ ರೈತ ಸಂಘದ ಜಿಲ್ಲಾ ುತಿ ಹಮ್ಮಿಕೊಂಡಿತ್ತು.

ುಬಾಯಿ ರೋಗ ಸಂಪೂರ್ಣ ಯಂತ್ರಣ ಮತ್ತು ಶಾಶ್ವತ ಪರಿಹಾರ' ಬ ವಿಷಯದ ಮೇಲೆ ಕೋಲಾರ ನಗರದ ುನ್ಸ್ ಕ್ಲಬ್‌ನಲ್ಲಿ ಕೆಪಿಆರ್‌ಎಸ್ ವತಿಯಿಂದ ೆಂಬರ್ 21, 2013 ರಂದು ಹಮ್ಮಿಕೊಂಡಿದ್ದ ಂಡುಮೇಜಿನ ಸಭೆಯಲ್ಲಿ ವಿಜ್ಞಾನಿಗಳು, ಪ್ರತಿನಿಧಿಗಳು, ರೈತರು ಪಾಲ್ಗೊಂಡಿದ್ದರು. ಬೆಂಗಳೂರು ಹೆಬ್ಬಾಳದ 'ಪ್ರಾಣಿ ಆರೋಗ್ಯ ತ್ತು ಜೈವಿಕ ಸಂಸ್ಥೆ'ಯ ವಿಜ್ಞಾನಿ ಡಾ. ರವೀಂದ್ರ ್ಗೆಯವರು ಈ ಸಭೆಯಲ್ಲಿ ಮಾತನಾಡಿ ೀಗಬಾಧೆಯ ಕುರಿತು ಮಾಹಿತಿಯನ್ನು ಡಿದರು.

ೀಲಾರ ವಿಶೇಷ ಸಮಸ್ಯೆ

ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ೀಲಾರ ಜಿಲ್ಲೆಯಲ್ಲಿನ ಜಾನುವಾರುಗಳ ಸಾವಿಗೆ ುಬಾಯಿ ಜ್ವರದ ಜತೆಗೆ ಬೇರೆ ಅಂಶವೂ ರಣವಿದೆ. ಕೋಲಾರದ ಜಾನುವಾರುಗಳಲ್ಲಿ ೀಗ ನಿರೋಧಕ ಶಕ್ತಿ ತೀರಾ ಕಡಿಮೆ ಇದೆ ಂದು ಡಾ. ರವೀಂದ್ರಹೆಗ್ಡೆ ತಿಳಿಸಿದರು.

ಕಾಲುಬಾಯಿ ಜ್ವರ ಮಾರಣಾಂತಿಕ ಕಾಯಿಲೆ ದು ಕರುಗಳನ್ನು ಮಾತ್ರ ಕೊಲ್ಲಬಹುದು. ಹಸುಗಳಲ್ಲಿ ಹಾಲು ಉತ್ಪಾದನೆಯನ್ನು ಮೆ ಮಾಡುತ್ತದೆ. ದೇಶದಲ್ಲಿ ಪ್ರಸ್ತುತ ುಬಾಯಿ ಜ್ವರಕ್ಕೆ ಕಾರಣವಾಗುವ 7 ೇಧಗಳು ಜೀವಂತವಾಗಿದ್ದು, ಅವುಗಳಲ್ಲಿ ಎ; ಮತ್ತು ಏಷಿಯಾ-1 ವೈರಸ್‌ಗಳು ುಖವಾಗಿವೆ. ರಾಜ್ಯದಲ್ಲಿ ಸಾವಿರಾರು ನುವಾರುಗಳು ಕಾಲುಬಾಯಿ ಜ್ವರದಿಂದ ಮೃತಪಟ್ಟಿವೆ ಎಂದು ಸರಕಾರದ ಅಂಕಿಅಂಶಗಳು ತಿಳಿಸುತ್ತವೆ.

ರಾಮನಗರ, ಬೆಂಗಳೂರು ನಗರ,



ಗ್ರಾಮಾಂತರ ಸೇರಿದಂತೆ ನಾನಾ ಜಿಲ್ಲೆಗಳಲ್ಲಿ ಕಾಲುಬಾಯಿ ಜ್ವರದಿಂದ ಜಾನುವಾರುಗಳು ಮೃತಪಟ್ಟಿದ್ದಕ್ಕೂ ಕೋಲಾರ ಜಿಲ್ಲೆಯಲ್ಲಿನ ಜಾನುವಾರುಗಳ ಪರಿಸ್ಥಿತಿಗೂ ಹೋಲಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಕಾಲುಬಾಯಿ ಜ್ವರಕ್ಕೆ ತುತ್ತಾದ ನಂತರದಲ್ಲಿ ಜಾನುವಾರುಗಳು ಗಳಲೆ ರೋಗ, ಅಂತ್ರ್ಯಾಕ್ಸ್ ಅಥವಾ ಇನ್ನಾವುದೋ ವೈರಾಣು ಸೇರಿಕೊಂಡು ಮೃತಪಟ್ಟಿವೆ. ಅದು ಯಾವುದು ಎಂಬುದು ಖಚಿತಪಟ್ಟಿಲ್ಲ ಎಂದೂ ಅವರು ತಿಳಿಸಿದರು.

ಈ ನಿಟ್ಟಿನಲ್ಲಿ ಮೃತ ಜಾನುವಾರುಗಳಿಂದ ಸಂಗ್ರಹಿಸಿರುವ ಮಾದರಿಯನ್ನು ಬೇರೆ ಕ್ರಿಮಿ, ಬ್ಯಾಕ್ಟೀರಿಯಾಗಳ ಜತೆ ಸಮೀಕರಿಸಿ ನೋಡಲಾಗುತ್ತಿದೆ. ಪ್ರಯೋಗ ಅಂತಿಮ ಹಂತಕ್ಕೆ ಬಂದಿದ್ದು 15 ದಿನದೊಳಗೆ ಖಚಿತವಾದ ಕಾರಣ ತಿಳಿಯಬಹುದು.

ಕೋಲಾರ ಜಿಲ್ಲೆಯಲ್ಲಿ ಜಾನುವಾರುಗಳು ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಂಡಿವೆ. ವರ್ಷಕ್ಕೆ ಎರಡು ಬಾರಿ ಜಾನುವಾರುಗಳಿಗೆ ಕಾಲುಬಾಯಿಜ್ವರದವಿರುದ್ಧಲಸಿಕೆನೀಡಲಾಗುತ್ತದೆ. ಪ್ರತಿ ವರ್ಷವೂ ಲಸಿಕೆ ಹಾಕಿಸಿದರೂ ಆರು ತಿಂಗಳೊಳಗೆ ರೊಗ ನಿರೋಧಕ ಶಕ್ತಿ ಮೊದಲಿನ ಸ್ಥಿತಿಗೆ ತಲುಪುತ್ತಿರುವುದು ಕಂಡುಬಂದಿದೆ ಎಂದರು.

ಇದರ ಜತೆಗೆ 30-35 ಲೀಟರ್ ಹಾಲು ಕರೆಯುವ ಜಾನುವಾರುಗಳಲ್ಲಿ ಹಾಲಿನ ಉತ್ಪಾದನೆಯ ಒತ್ತಡವೂ ರೋಗ ನಿರೋ ಧಕ ಶಕ್ತಿ ಕುಂಠಿತಗೊಳ್ಳಲು ಕಾರಣವಾಗಬಹುದು ಎಂದು ಸಂದೇಹ ವ್ಯಕ್ತಪಡಿಸಿದರು.

ಪಂಜಾಬ್ ಮತ್ತು ಹ'ರಿಂ೨'೨ಾಣದ'ಲ್ಲಿ 15ನೇ ಸುತ್ತಿನ ಲಸಿಕೆ ಕಾರ್ಯಕ್ರಮ ನಡೆಯುತ್ತಿದೆ. ಕರ್ನಾಟಕದಲ್ಲಿ 2011ರಿಂದ ಆರಂಭಗೊಂಡು ಈಗ 5ನೇ ಸುತ್ತಿನ ಕಾರ್ಯಕ್ರಮ ನಡೆದಿದೆ. ರಾಜ್ಯದಲ್ಲಿ ಲಸಿಕಾ ಕಾರ್ಯಕ್ರಮ ಆರಂಭವಾಗುವ ಮುನ್ನ ಶೇ. 5 ರಷ್ಟು ಮಾತ್ರ ಆಗಿದ್ದ ರೋಗ ನಿರೋಧಕ ಲಸಿಕೆ ನೀಡಿಕೆ ಈಗ ಶೇ. 45ಕ್ಕೆ ಹೆಚ್ಚಿದೆ. ಇನ್ನೂ ಏಳೆಂಟು ವರ್ಷಗಳ ಕಾಲ ನಿರಂತರವಾಗಿ ಶೇ. 100 ರಷ್ಟು ಲಸಿಕಾ ಕಾರ್ಯಕ್ರಮ ನಡೆದ-ರೆ ಮಾತ್ರ ಉತ್ತಮ ಫಲಿತಾಂಶ ಕಾಣಬಹುದು ಎಂದು ಹೇಳಿದರು.

ಕಾಲುಬಾಯಿ ಜ್ವರದ ಹಿನ್ನೆಲೆಯಲ್ಲಿ ಜಾನುವಾರುಗಳ ಸಂತೆಗಳಿಗೆ ತಾತ್ಕಾಲಿಕವಾಗಿ ನಿಷೇಧ ಹೇರಿದರೂ ಮಧ್ಯವರ್ತಿಗಳ ಮೂಲಕ ನಡೆಯುವ ಪಶುಗಳ ಸಾಗಾಟಕ್ಕೆ ನಿಯಂತ್ರಣ ಸಾಧ್ಯವಾಗುತ್ತಿಲ್ಲ ಎಂದ ಅವರು, ಜಾನುವಾರುಗಳನ್ನು ಬಯೋ ಸೆಕ್ಯುರಿಟಿ(ಜೈವಿಕ ಸುರಕ್ಷತಾ ಕ್ಷಮಗಳು) ಅಡಿಯಲ್ಲಿ ಸಾಕಣೆ ಮಾಡದಿದ್ದಲ್ಲಿರೋಗಗಳಿಂದಮುಕ್ತಗೊಳಿಸುವುದು ಸಾಧ್ಯವಿಲ್ಲ ಎಂದ ಅವರು ಸಾಮಾನ್ಯ ರೈತರು ಇದನ್ನು ಪಾಲಿಸುವುದು ಕಷ್ಟ, ಅದು ಸುಲಭವಲ್ಲ ಎಂಬುದನ್ನು ಒಪ್ಪಿಕೊಂಡರು.

ಸರ್ಕಾರಕ್ಕೆ ನೀಡಿರುವ ಸಲಹೆ

ರಾಜ್ಯದಾದ್ಯಂತ ಎಲ್ಲ ಗ್ರಾಮಗಳಲ್ಲೂ ಜಾನುವಾರುಗಳಿಗೆ ಕಡ್ಡಾಯವಾಗಿ ವರ್ಷಕ್ಕೆ ಎರಡು ಬಾರಿ ಶೇ. 100ರಷ್ಟು ಲಸಿಕೆ ನೀಡಬೇಕು, ಮುಂಗಾರಿಗೆ ಮುನ್ನವೆ ರೋಗಕ್ಕೆ ಲಸಿಕಾ ಕಾರ್ಯಕ್ರಮ ಆರಂಭಿಸಬೇಕು. ಹಸು, ದನಗಳನ್ನು ಸಾಕುವವರು ಹಂದಿಗಳನ್ನು ದೂರವಿಡಬೇಕು. ಹಂದಿಗಳಿಂದ ರೋಗ ಬರುವ ಸಾಧ್ಯತೆ ಹೆಚ್ಚಿರುವುದರಿಂದ ಮುಂಜಾಗ್ರತೆ ವಹಿಸಬೇಕು ಎಂದು ವಿಜ್ಞಾನಿ ಡಾ. ರವೀಂದ್ರ ಹೆಗ್ಡೆ ಸಲಹೆ ನೀಡಿದರು.

ಕಾಂಗ್ರೆಸ್ ಪಕ್ಷದ ಮುಖಂಡರು, ಮಾಜಿ ಸ್ಪೀಕರ್ ಹಾಗೂ ಶಾಸಕರೂ ಆದ ಕೆ.ಆರ್. ರಮೇಶ್ ಕುಮಾರ್‌ರವರು ಮಾತನಾಡಿ, ಅಂತರ್ಜಲಮಟ್ಟ ಕುಸಿದಿರುವ ಕೋಲಾರ ಜಿಲ್ಲೆಯಲ್ಲಿ ನೀರು, ಮಣ್ಣಿನ ಅಂಶಗಳು ಕಲುಷಿತಗೊಂಡಿರುವುದು, ಫ್ಲೋ-ರೈಡ್ ಅಂಶ ಸಮಸ್ಯೆಗೆ ಕಾರಣವಾಗಿರಬಹುದೇ ಎಂದು ಸಂಶಯ ವ್ಯಕ್ತಪಡಿಸಿದರು. ಮತ್ತು ಈ ಕುರಿತು ಅಧ್ಯಯನ ನಡೆಯಬೇಕು ಎಂದು ಸೂಚಿಸಿದರು. ರಾಜ್ಯದಲ್ಲಿ ರೋಗದಿಂದ ಸಾವಿರಾರು ಜಾನುವಾರುಗಳು ಮೃತಪಟ್ಟಿರುವುದು ಮತ್ತು ಮುಂದೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನವೆಂಬರ್ 25 ರಂದು ಬೆಳಗಾವಿಯಲ್ಲಿ ಆರಂಭವಾಗುವ ವಿಧಾನಸಭಾ ಅಧಿವೇಶನದಲ್ಲಿ ತಾವು ಧ್ವನಿ ಎತ್ತುವುದಾಗಿ ರಮೇಶ್ ಕುಮಾರ್‌ರವರು ತಿಳಿಸಿದರು.



ಸಾಮೂಹಿಕ ಜನಜಾಗೃತಿ ಆಂದೋಲನವಾಗಲಿ
- ಜಿ.ಸಿ. ಬಯ್ಯಾರೆಡ್ಡಿ

ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ, ರಾಜ್ಯದಲ್ಲಿ 7500 ಹಸುಗಳು ಸತ್ತಿವೆ. ಕೋಲಾರ ಜಿಲ್ಲೆಯಲ್ಲೇ ಸು. 1,927 ಹಸುಗಳು ಬಲಿಯಾಗಿವೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ 300, ಮುಳಬಾಗಿಲಿನಲ್ಲಿ 500, ಬಂಗಾರಪೇಟೆ 200, ಮಾಲೂರು 260, ಕೋಲಾರ ತಾಲ್ಲೂಕಿನಲ್ಲಿ 700 ಹಸುಗಳು ಸತ್ತಿವೆ. ರೈತರನ್ನು ಸಂಕಟದಿಂದ ಪಾರು ಮಾಡಲು ಅಗತ್ಯವಾದ ಹಣಕಾಸನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು. ರಾಜ್ಯದಲ್ಲಿ ಹಾಲು ಉತ್ಪಾದಕರ ಸಂಘಗಳು ಆರ್ಥಿಕವಾಗಿ ಕುಗ್ಗಿರುವುದರಿಂದ ರಾಜ್ಯ ಸರ್ಕಾರ ಈ ಸಂಘಗಳಿಂದ ಪರಿಹಾರ ದೊರಕಿಸುವ ಪ್ರಯತ್ನ ಕೈ ಬಿಟ್ಟು ತಾನೇ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಸಮಸ್ಯೆಯ ತೀವ್ರತೆ ಕುರಿತು ಮಾತನಾಡಿದ ಅವರು ಲಸಿಕೆ ಹಾಕಿದರೂ ಕಾಯಿಲೆ ವಾಸಿ ಆಗುವುದಿಲ್ಲ. ಜಾನುವಾರುಗಳು ಸಾಯುತ್ತಿವೆ. ಲಸಿಕೆ ಸಾಮರ್ಥ್ಯ ಕಳೆದುಕೊಂಡಿದೆ. ಲಸಿಕೆ ಹಾಕಿದ ಜಾನುವಾರುಗಳಲ್ಲಿ ಬೇಸಿಗೆಯಲ್ಲಿ ಶೇ. 50% ರಷ್ಟು ಹಾಲು ಕಡಿಮೆಯಾಗುತ್ತಿದೆ. ಹೀಗಾದಲ್ಲಿ ರೈತನಿಗೆ ಆಗುವ ನಷ್ಟವನ್ನು ಯಾರು ಭರಿಸಬೇಕು? ಈ ಬಗ್ಗೆ ಜನಪ್ರತಿನಿಧಿಗಳು, ಸರ್ಕಾರ ವಿಶ್ಲೇಷಣೆ ನಡೆಸಬೇಕು ಎಂದು ಆಗ್ರಹಿಸಿದರು.

ಕಾಲುಬಾಯಿ ಜ್ವರದಿಂದ ಮೃತಪಟ್ಟ ಜಾನುವಾರುಗಳಿಗೆ 25 ಸಾವಿರ, ಎಮ್ಮೆ, ಎತ್ತುಗಳಿಗೆ-20 ಸಾವಿರ, ಕರುಗಳಿಗೆ 10 ಸಾವಿರ ರೂ. ಪರಿಹಾರ ನೀಡುವುದಾಗಿ ಸರ್ಕಾರ ಘೋಷಿಸಿದೆ. ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರವೂ ತಲಾ 25 ಸಾವಿರ ರೂ.ನಂತೆ ರೈತರಿಗೆ ತಲಾ 50 ಸಾವಿರ ರೂ. ಪರಿಹಾರ ನೀಡಬೇಕು. ಈ ಸಂಬಂಧ ಅಧಿವೇಶನದಲ್ಲಿ ಪ್ರಸ್ತಾಪಿಸಬೇಕೆಂದು ಶಾಸಕರನ್ನು ಒತ್ತಾಯಿಸಿದರು.

ಹಸು ಸಾಕಾಣಿಕೆ ಮತ್ತು ಪಶುಪಾಲನೆಗಳ ವೈಜ್ಞಾನಿಕ ಕ್ರಮಗಳ ಕುರಿತು, ಲಸಿಕೆ ಹಾಕುವಿಕೆ, ಸ್ವಚ್ಛತೆ ವಿಷಯಗಳಲ್ಲಿ ಸಮೂಹಿಕ ಜನಜಾಗೃತಿ ಆಂದೋಲನ ನಡೆಯಬೇಕು ಎಂದೂ ಬಯ್ಯಾರೆಡ್ಡಿಯವರು ಹೇಳಿದರು. ಕೋಲಾರ ಜಿಲ್ಲಾ ಪಂಚಾಯತ್ ಅಧ್ಯಕ್ಷ ತೂಪಲ್ಲಿ ಆರ್. ನಾರಾಯಣ ಸ್ವಾಮಿ, ಕೆಪಿಆರ್‌ಎಸ್ ಕೋಲಾರ ಜಿಲ್ಲಾಧ್ಯಕ್ಷ ಪಿ.ಆರ್. ಸೂರ್ಯನಾರಾಯಣ್ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಟಿ.ಎಂ. ವೆಂಕಟೇಶ್, ಮುಖಂಡರಾದ ಪಿ.ಆರ್. ನವೀನ್ ಕುಮಾರ್, ಗೌರಮ್ಮ, ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಕೆಪಿಆರ್‌ಎಸ್‌ನ ಮುಖಂಡರು, ರೈತರು ಪಾಲ್ಗೊಂಡಿದ್ದರು.

ಡಿಸೆಂಬರ್ 3, 2013 ರಾಜ್ಯಮಟ್ಟದ ಪ್ರತಿಭಟನೆ-ಬೆಂಗಳೂರು ಚಲೋ

ರೋಗಬಾಧೆ ನಿಯಂತ್ರಣದ ತುರ್ತು ಕ್ರಮಗಳು, ಸೂಕ್ತ ಮತ್ತು ಸಮಗ್ರವಾದ ಪರಿಹಾರ ಕ್ರಮಗಳು ಮುಂತಾದ ಬೇಡಿಕೆಗಳ ಆಧಾರದಲ್ಲಿ ಇದೇ ಡಿಸೆಂಬರ್ 3, 2013 ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರಾಜ್ಯಮಟ್ಟದ ಬೃಹತ್ ಪ್ರತಿಭಟನಾ ರ್ಯಾಲಿ ನಡೆಯಲಿದೆ. ಈ ಹೋರಾಟದಲ್ಲಿ ವಿವಿಧ ಹಾಲು ಉತ್ಪಾದಕರ ಹೋರಾಟ ಸಮಿತಿಗಳು, ನಾನಾ ಸಹಕಾರ ಸಂಘಗಳು ಪಾಲ್ಗೊಳ್ಳಲಿವೆ. ಸರ್ಕಾರಗಳು ಸೂಕ್ತ ಕ್ರಮಕೈಗೊಳ್ಳದೇ ಹೋದಲ್ಲಿ ಹೋರಾಟ ತೀವ್ರಸ್ವರೂಪ ಪಡೆದುಕೊಳ್ಳಲಿದೆ ಸರ್ಕಾರ ಅವಕ್ಕೆ ಅವಕಾಶ ನೀಡಬಾರದು ಎಂದು ದುಂಡು ಮೇಜಿನ ಸಭೆಯಲ್ಲಿ ಮಾತನಾಡುತ್ತಾ ಜಿ.ಸಿ.ಬಯ್ಯಾರೆಡ್ಡಿಯವರು ಸರ್ಕಾರಗಳನ್ನು ಆಗ್ರಹಿಸಿದರು.



ದಲಿತರಿಗೆಲ್ಲಿದೆ ನ್ಯಾಯ?

ನಿತ್ಯಾನಂದಸ್ವಾಮಿ



2012 ರ ದೆಹಲಿ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಸರ್ಕಾರ ಕೈಗೊಂಡ ತಕ್ಷಣದ ಹಾಗೂ ಪರಿಣಾಮಕಾರಿ ಕ್ರಮಗಳನ್ನು ದೇಶ ಬಾಂಧವರು ಪಕ್ಷಾತೀತವಾಗಿ ಸ್ವಾಗತಿಸಿದ್ದರು. ಜಾರಿಯಲ್ಲಿರುವ ಕಾಯ್ದೆಯಲ್ಲಿನ ದೋಷಗಳನ್ನು ಗುರುತಿಸಲು ಆಯೋಗ ನೇಮಕ ಮತ್ತು ಹೊಸ ಕಾಯ್ದೆಯೊಂದನ್ನು ಅಂಗೀಕರಿಸಿದ್ದು ಎಲ್ಲವೂ ಸ್ವಾಗತಾರ್ಹವೇ. ನ್ಯಾಯಾಂಗವೂ ಸಹ ಅಪರಾಧಿಗಳಿಗೆ ಮರಣ ದಂಡನೆಯ ಗರಿಷ್ಠ ಶಿಕ್ಷೆ ವಿಧಿಸಿದ್ದು ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ, ದೇಶಾದ್ಯಂತ ದಲಿತರ ಮೇಲೆ ನಡೆಯುತ್ತಿರುವ, ಇತ್ತೀಚೆಗೆ ಹೆಚ್ಚುತ್ತಿರುವ ದಮನ ದೌರ್ಜನ್ಯಗಳ ವಿರುದ್ಧ ಇದೇ ರೀತಿಯಲ್ಲಿ ಜನರ ಆಕ್ರೋಶ ಸ್ಫೋಟಗೊಳ್ಳುತ್ತಿಲ್ಲ ಏಕೆ? ಕರ್ನಾಟಕದ ಕಂಬಾಲಪಲ್ಲಿ, ಮಹಾರಾಷ್ಟ್ರದ ಖೈರ್ಲಾಂಜಿಯಂತಹ ದಲಿತ ಹತ್ಯಾಕಾಂಡಗಳಲ್ಲಿ ದೌರ್ಜನ್ಯಕ್ಕೊಳಗಾದ ದಲಿತರಿಗೆ ನ್ಯಾಯ ಸಿಗಲಿಲ್ಲವೇಕೆ?. ಸವರ್ಣೀಯರ ಇಂತಹ ಪೈಶಾಚಿಕ ಕೃತ್ಯಗಳ ಎದುರು ಭಾರತ ಏಕೆ ಮೂಕ ಪ್ರೇಕ್ಷಕವಾಗಿದೆ?.

ಕಳೆದ ಅಕ್ಟೋಬರ್ 9 ರಂದು, ಲಕ್ಷ್ಮಣ್‌ಪುರ್ ಬಾಥೆ ದಲಿತ ಹತ್ಯಾಕಾಂಡದ ಕುರಿತಾಗಿ ಪಾಟ್ನಾ ಉಚ್ಚ ನ್ಯಾಯಾಲಯದಿಂದ ಹೊರಬಿದ್ದ ತೀರ್ಪು ಈ ಪ್ರಶ್ನೆಯನ್ನು ಮತ್ತೊಮ್ಮೆ ದೇಶದ ನಾಗರಿಕರ ಎದುರು ತಂದು ನಿಲ್ಲಿಸಿದೆ. ಈ ನಮ್ಮ ನೆಲದಲ್ಲಿ ಶತಮಾನಗಳಿಂದ ಹೇಗೆ ಈ ಕ್ರೂರ ಜಾತಿಪದ್ಧತಿಯನ್ನು ಕಾನೂನುಬದ್ಧಗೊಳಿಸಲಾಗಿದೆ ಎಂಬ ನೋವನ್ನು ನೆನಪಿಸುತ್ತದೆ.

ಘಟನೆ ನಡೆದ ಸಂದರ್ಭದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಅಂದಿನ ರಾಷ್ಟ್ರಪತಿ ಡಾ. ಕೆ. ಆರ್. ನಾರಾಯಣನ್ "ಸ್ವಾತಂತ್ರ್ಯೋತ್ತರ ಭಾರತದಲ್ಲೇ ಇದೊಂದು ಅಪಮಾನಕರ ಘಟನೆ" ಎಂದು ಖಂಡಿಸಿದ್ದರು. ಅಂದು ರಾತ್ರಿ ಎರಡು ದೋಣಿಗಳ ಮೂಲಕ ಸೋನೆ ನದಿಯನ್ನು ದಾಟಿ ಭೂ ಮಾಲಕರ ರಣವೀರ ಸೇನೆಯ ಪಾತಕಿಗಳು ದಲಿತರ ಮನೆಗಳಿಗೆ ನುಗ್ಗಿ ಮಲಗಿದ್ದವರು ಮಕ್ಕಳು, ಮಹಿಳೆಯರು ಎಂಬುದನ್ನುನೋಡದೇ ಮನಬಂದಂತೆ ಗುಂಡಿನ ಮಳೆಗೆರೆದು 58 ಮಂದಿ ದಲಿತರನ್ನು ಕೊಂದುಹಾಕಿದ್ದರು. ಆದರೆ ಉಚ್ಚ ನ್ಯಾಯಾಲಯದ ತೀರ್ಪು ಹತ್ಯಾಕಾಂಡದ ಎಲ್ಲ ಆರೋಪಿಗಳನ್ನು ದೋಷಮುಕ್ತಗೊಳಿಸಿದೆ!

ಪಾಟ್ನಾ ಉಚ್ಚನ್ಯಾಯಲಯದ ತೀರ್ಪು, 16 ವರ್ಷಗಳ ಹಿಂದೆ, 1997 ರ ಡಿಸೆಂಬರ್ 1 ರ ಮಧ್ಯರಾತ್ರಿ ಲಕ್ಷ್ಮಣಪುರ್ ಬಾಥೆ ಗ್ರಾಮದ 27 ಮಹಿಳೆಯರು, 16 ಮಕ್ಕಳೂ ಸೇರಿದಂತೆ ಒಟ್ಟು 58 ದಲಿತರನ್ನು ಗುಂಡಿಕ್ಕಿ ಕೊಲ್ಲಲಾಯಿತು ಎಂಬುದರ ಬಗ್ಗೆ ಅನುಮಾನ ವ್ಯಕ್ತಪಡಿಸುವುದಿಲ್ಲ. ಆ ಕರಾಳ ರಾತ್ರಿ ನಡೆದ ದಾಳಿಯಿಂದ ಬದುಕಿ ಉಳಿದವರು ನಡೆದುದೆಲ್ಲವನ್ನು ಕಣ್ಣಾರೆ ಕಂಡವರು ಎಂಬುದನ್ನು ತೀರ್ಪು ತಳ್ಳಿಹಾಕುವುದಿಲ್ಲ. ಅಂದು ಬಂದೂಕುಧಾರಿಗಳಾಗಿ ಬಂದು ದಾಳಿಮಾಡಿದವರ ತಂಡದಲ್ಲಿ ಸುಮಾರು ಒಂದು ನೂರು ಜನರಿದ್ದರು. ಪೊಲೀಸರು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳುವುದರಲ್ಲಿ ವಿಳಂಬವಾಗಿತ್ತು. ಪ್ರಥಮ ಮಾಹಿತಿ ದಾಖಲೆಯಲ್ಲಿ ಪ್ರತ್ಯಕ್ಷದರ್ಶಿಗಳು ಗುರುತಿಸಿದ ಹಂತಕರ ಹೆಸರುಗಳನ್ನು ಹೇಳಿಕೆಗಳಲ್ಲಿ ನಮೂದಿಸದಿರಲಿಲ್ಲ. ಘಟನೆ ನಡೆದು 3 ದಿನಗಳ ನಂತರವಷ್ಟೇ ನ್ಯಾಯಾಲಯಕ್ಕೆ ಎಫ್‌ಐಆರ್ ಸಲ್ಲಿಕೆಯಾಗಿತ್ತು. ತನಿಖೆ ನಡೆಸಲು ಬಂದಿದ್ದ ತನಿಖಾಧಿಕಾರಿ ನದಿ ದಂಡೆಯ ಮೇಲೆ ಕಂಡುಬಂದ ಮನುಷ್ಯರ ನೂರಾರು ಹೆಜ್ಜೆ ಗುರುತುಗಳನ್ನು ಗಮನಿಸಿ ಹಂತಕರು ಕೃತ್ಯವೆಸಗಿದ ನಂತರ ನದಿದಾಟಿ ಸಹಾರ್ ಗ್ರಾಮದತ್ತ ಹೊರಟು ಹೋಗಿದ್ದಾರೆ ಎಂಬುದನ್ನು ದೃಢಪಡಿಸಿಕೊಂಡಿದ್ದಾರೆ. ಆದರೆ ಆ ತನಿಖಾಧಿಕಾರಿ ನದಿದಾಟಿ ಹೋಗಿ ತಮ್ಮ ತನಿಖೆಯನ್ನು ನಡೆಸಲಿಲ್ಲ.

ವಿಳಂಬ :

ಪ್ರಕರಣ 1999 ರಲ್ಲಿ ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲಾಯಿತು. ಇತರ ಜಾತಿ ದೌರ್ಜನ್ಯ ಪ್ರಕರಣಗಳಂತೆ, 11 ವರ್ಷಗಳವರೆಗೂ ಪ್ರಕರಣದ ವಿಚಾರಣೆ ಆರಂಭವಾಗಲಿಲ್ಲ. ಉಚ್ಚ ನ್ಯಾಯಾಲಯ 2008 ರಲ್ಲಿ ಹೊಸ ಆದೇಶವನ್ನು ನೀಡಿದ ನಂತರವಷ್ಟೇ ವಿಚಾರಣೆ ಆರಂಭವಾಯಿತು. ಅಷ್ಟರಲ್ಲಿ 91 ಸಾಕ್ಷಿಗಳ ಪೈಕಿ 38 ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಪರಿವರ್ತನೆಯಾಗಿದ್ದವು. 50 ಆರೋಪಿಗಳಲ್ಲಿ 44 ಮಂದಿ ಮಾತ್ರ ವಿಚಾರಣೆಯನ್ನು ಎದುರಿಸಿದರು. ಉಳಿದವರು ತೀರಿಹೋಗಿದ್ದರು. ಘಟನೆ ನಡೆದು 13 ವರ್ಷಗಳ ನಂತರ, 2010 ರಲ್ಲಿ ಸೆಷನ್ಸ್ ಕೋರ್ಟ್ ಕೊಲೆ, ಕ್ರಿಮಿನಲ್ ಪಿತೂರಿ, ಮತ್ತು ಜಾತಿ ದೌರ್ಜನ್ಯದ ಆರೋಪಗಳು ಸಾಬೀತಾಗಿರುವುದುದನ್ನು ಪರಿಗಣಿಸಿ 26 ಅಪರಾಧಿಗಳಿಗೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಿತು. ತೀರ್ಪು ನೀಡಿದ ನ್ಯಾಯಾಧೀಶ ವಿಜಯ್‌ಪ್ರಕಾಶ್ ಮಿಶ್ರಾ "ಲಕ್ಷ್ಮಣ್‌ಪುರ ಬಾಥೆ ಘಟನೆ ನಾಗರಿಕ ಸಮಾಜಕ್ಕೆ ಕಳಂಕದ ಮಾದರಿಯಾಗಿದ್ದು ಮತ್ತು ಕ್ರೌರ್ಯದಲ್ಲಿ ಅಪರೂಪವಲ್ಲೇ ಅಪರೂಪದ್ದು" ಎಂದು ಬಣ್ಣಿಸಿದ್ದರು.

ಸೆಷನ್ಸ್ ನ್ಯಾಯಾಲಯದ ತೀರ್ಪಿನ ವಿರುದ್ಧ ಆರೋಪಿಗಳು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದರು. ಪಾಟ್ನಾ ಉಚ್ಚ ನ್ಯಾಯಾಲಯ ಮರಣ ದಂಡನೆ ಇರಲಿ, ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯ ಹೆಸರಿನಲ್ಲಿ ಆರೋಪದಿಂದಲೇ ಸಂಪೂರ್ಣ ಮುಕ್ತಗೊಳಿಸಿತು!

ಹಂತಕರು ದೂರದ ಪ್ರದೇಶದಿಂದ ಬಂದ ಅಪರಿಚಿತರಾಗಿರಲಿಲ್ಲ. ಅವರೆಲ್ಲರೂ ಪಕ್ಕದ, ಗ್ರಾಮಗಳ ಮೇಲ್ಜಾತಿ ಭೂಮಾಲಕರಾಗಿದ್ದರು. ಇವರ ಹೊಲಗದ್ದೆಗಳಲ್ಲಿ ಈ ದಲಿತ ಕೃಷಿ ಕೂಲಿಕಾರರು ಕೆಲಸಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಕೂಲಿ ದರವನ್ನು ಹೆಚ್ಚಿಸಬೇಕೆಂಬುದು ದಲಿತ ಕೂಲಿಕಾರರ ಬೇಡಿ-ಕೆಯಾಗಿತ್ತು. ದಿನಕ್ಕೆ ಒಂದೂವರೆ ಕಿಲೋ ಧಾನ್ಯದ ಬದಲಿಗೆ 3 ಕಿಲೋ ಧಾನ್ಯ ನೀಡಬೇಕೆಂದು ಬೇಡಿಕೆ ಇಡಲಾಗಿತ್ತು. ಹೊಲಗಳಲ್ಲಿ ಪೈರು ಕಟಾವಿಗೆ ಸಿದ್ಧವಾಗಿತ್ತು. ಕೂಲಿ ಹೆಚ್ಚಳಕ್ಕೆ ಪಟ್ಟು ಹಿಡಿದಿದ್ದ ದಲಿತ ಕೂಲಿಕಾರರ ಮೇಲೆ ಸೇಡು ತೀರಿಸಿಕೊಳ್ಳಲು ಭೂಮಾಲಕರ ರಣವೀರ ಸೇನೆ 58 ಜನ ದಲಿತ ಕೂಲಿಕಾರರನ್ನು ಬರ್ಬರವಾಗಿ ಕೊಂದು ಹಾಕಿತು.

ಪಾಟ್ನಾ ಉಚ್ಚ ನ್ಯಾಯಾಲಯ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳ ಕುರಿತು ಆಕ್ಷೇಪವೆತ್ತುತ್ತದೆ. ಜಾತಿ ದೌರ್ಜನ್ಯದ ಪ್ರಕರಣಗಳು ಮುಕ್ತಾಯವಾಗುವುದು ಹೀಗೇ. ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ದೀರ್ಘಕಾಲ ಎಳೆದುಕೊಂಡು ಬರಲಾಗುತ್ತದೆ. ಈ ಅವಧಿಯಲ್ಲಿ ಸಾಕ್ಷಿಗಳನ್ನು ಉಲ್ಟಾ ಮಾಡಲಾಗುತ್ತದೆ. ಜಾತಿ ದೌರ್ಜನ್ಯದ ಪ್ರಕರಣಗಳಲ್ಲಿ ದೂರು ಕೊಟ್ಟ ದಲಿತರ ಸಾಕ್ಷಿ ಹೇಳಲು ಮುಂದೆ ಬಂದವರಿಗೆ ಯಾವುದೇ ರಕ್ಷಣೆ ಇರುವುದಿಲ್ಲ. ತಮ್ಮ ಬದುಕಿಗಾಗಿ ಸವರ್ಣೀಯ ಭೂಮಾಲಕ ಅವಲಂಭಿಸಿರುವ ಬಡಪಾಯಿ ದಲಿತ ಭೂ ಕೂಲಿಕಾರರು ನ್ಯಾಯಾಲಯದಲ್ಲಿ ಭೂಮಾ ವಿರುದ್ಧ ಸಾಕ್ಷಿ ಹೇಳಿ ನ್ಯಾಯಪಡೆಯು ಸಾಧ್ಯವೇ? ಹಾಗಾದರೆ ದಲಿತರಿಗೆ ಈ ದೇ ನ್ಯಾಯ ಇಲ್ಲವೆ?

ಅನ್ಯಾಯದ ವಿರುದ್ಧ ಹೋರಾಟ ಮಾ ನ್ಯಾಯ ಸಿಗುವುದಿಲ್ಲ. ದಲಿತರು ಅನುಬವಿಸುತ್ತಿ ಅನ್ಯಾಯ, ಅವಮಾನದ ವಿರುದ್ಧ ದಲಿ ಮತ್ತು ದಲಿತೇತರರು ಒಟ್ಟಾಗಿ ಹೋರಾಡಬೇ ದಲಿತರ ಆರ್ಥಿಕ ಹಾಗೂ ಸಾಮಾ ಪ್ರಶ್ನೆಗಳನ್ನು ಮತ್ತು ದಲಿತೇತರರ ಆರ್ಥಿಕ ಸಾಮಾಜಿಕ ಪ್ರಶ್ನೆಗಳನ್ನು ಒಟ್ಟೊಟ್ಟಿಗೆ ಕೊಂಡು ಹೋರಾಡುವ ಸಂಘಟನೆಗಳನ್ನು ಬೆಳೆಸಬೇಕು. ಎಸ್.ಸಿ/ಎಸ್.ಟಿ. (ದೌರ್ಜನ್ಯ ಕಾಯ್ದೆಯನ್ನು ತುರ್ತಾಗಿ ತಿದ್ದುಪಡಿ ಮ ಬಲಪಡಿಸುವಂತೆ ಒತ್ತಾಯಿಸಬೇಕು.

ಕುಂದಾಪುರ ಪುರಸಭೆ: ಸಿಪಿಐ(ಎಂ) ಅಧ್ಯಕ್ಷೆಯಾಗಿ



ಉಡುಪಿ ಜಿಲ್ಲೆ ಕುಂದಾಪುರ ಪುರಸಭೆ ಅಧ್ಯಕ್ಷರ ಚುನಾವಣೆಯಲ್ಲಿ ಸರಕಾ ಮೀಸಲಾತಿಯನ್ವಯ ಸಿಪಿಐ(ಎಂ) ಕೌನ್ಸಿಲರ್ ಕಲಾವತಿ.ಯ.ಎಸ್. ಪುರಸಭೆ ಅಧ್ಯಕ್ಷರಾಗಿ ಆಯ್ಕೆಯಾದರು. ಕುಂದಾಪು ಪುರಸಭೆಯಲ್ಲಿ ಸಿಪಿಐ(ಎಂ) ಪಕ್ಷದಿಂದ ಇಬ್ಬ ಮಹಿಳಾ ಕೌನ್ಸಿಲರ್ ಜನಪ್ರತಿನಿಧಿಯಾಗಿದ್ದಾರೆ.

ಈ ಹಿಂದೆ ಪುರಸಭೆ ಆಡಳಿತಾಧಿಕಾರಿಯವರ ಅವಧಿಯಲ್ಲಿ–ಅಧಿಕಾ ವರ್ಗ ಏಕಪಕ್ಷೀಯವಾಗಿ–ಪುರಸಭಾ ವ್ಯಾಪ್ತಿ ನೀರಿನ ದರವನ್ನು 3 ಪಟ್ಟು ಏರಿಕೆ ಮಾಡಿರುವುದನ್ ವಿರೋಧಿಸಿ ಸಿಪಿಐ(ಎಂ) ಮತ್ತು ಡಿವೈಎಫ್ ಅವಿರತ ಹೋರಾಟ ಮಾಡಲಾಗಿದ್ದರ ಅಧಿಕಾರಿ ವರ್ಗ ಸ್ಪಂದಿಸಿರಲಿಲ್ಲ. ಇದೀಗ ನೂತ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡಿರು ಸಿಪಿಐ(ಎಂ) ಪಕ್ಷದ ಕಲಾವತಿ.ಯು.ಎಸ್.ರವ ಪ್ರಥಮ ಕೌನ್ಸಿಲ್ ಅಧಿವೇಶನದಲ್ಲೇ ಪುರಸಭ ವ್ಯಾಪ್ತಿಯ ನೀರಿನ ದರ ಏರಿಕೆ ಮಾಡಿದ್ದನ್ ನಾಗರಿಕರಿಗೆ ಅನುಕೂಲವಾಗುವಂತೆ ಇಳಿಸ ತೀರ್ಮಾನ ಕೈಕೊಂಡಿದ್ದಾರೆ. ಈ ಕ್ರಮ ಅವರು ಪುರಸಭಾ ನಾಗರಿಕರ ಪ್ರ ಪಾತ್ರರಾಗಿದ್ದಾರೆ.

ವರದಿ: ವೆಂಕಟೇಶ ಕೋ

ಜನಶಕ್ತಿ
ಕನ್ನಡ ವಾರಪತ್ರಿಕೆ

ನೇರ ನಗದು ವರ್ಗಾವಣೆ–ನಿಜ ಉದ್ದೇಶ ಬಯಲಾಗುತ್ತಿದೆ

ಎನ್.ಕೆ. ವೇದರಾಜ

ರ ನಗದು ವರ್ಗಾವಣೆ ತಮ್ಮ ಒಂದು ಷ ಸಾಧನೆ ಎಂಬಂತೆ ಯುಪಿಎ–2 ಡರು ಪೋಸು ಕೊಡುತ್ತಾ ಬಂದಿದ್ದಾರೆ. ರ ನೀಡುವ ಸಬ್ಸಿಡಿಗಳನ್ನು ಯಾವುದೇ ಚಾರದ, ಆಡಳಿತದ ತೊಡಕುಗಳಿಲ್ಲದೆ ವಾಗಿ ಫಲಾನುಭವಿಗಳಿಗೆ ತಲುಪಿಸಲಿಕ್ಕಾಗಿಯೇ ನ್ನು ರೂಪಿಸಲಾಗಿದೆ ಎಂದು ಹೇಳಲಾಗಿತ್ತು. ಿ ನಮ್ಮದೇ ರಾಜ್ಯದ ಮೈಸೂರಿನ ಎಲ್‌ಪಿಜಿ ಕರ ಅನುಭವ ತದ್ವಿರುದ್ಧವಾಗಿದೆ. ನೇರ ನಗದು ವಣೆ ತಂದಿರುವುದೇ ಜನಸಾಮಾನ್ಯರಿಗೆ ರ ಕೊಡುವ ಸಬ್ಸಿಡಿಗಳ ಪ್ರಮಾಣವನ್ನು ಮಾಡಲಿಕ್ಕಾಗಿ, ಹಣದುಬ್ಬರದ ಹೊರೆಯನ್ನು ್ನು ಹೆಚ್ಚಾಗಿ ಜನಸಾಮಾನ್ಯರ ತಲೆಯ ಮೇಲೆ ಸಲಿಕ್ಕಾಗಿ ಎಂದು ಎಡಪಕ್ಷಗಳು ಮಾಡಿದ್ದ ಯನ್ನು ಇದು ಸಾಬೀತು ಮಾಡುತ್ತಿದೆ. ಗಳು ಏರುತ್ತಿದ್ದರೂ ಸಬ್ಸಿಡಿ ಮೊತ್ತ ಮಾತ್ರ ಸ್ಥವಾಗಿರುತ್ತದೆ.

ಕರ್ನಾಟಕದಲ್ಲಿ ಈ ನೇರ ನಗದು ಣೆಯನ್ನು ಜಾರಿಗೆ ತಂದಿರುವ ಸ್ಥಳಗಳಲ್ಲಿ ರು ಪ್ರಮುಖವಾದದ್ದು. ಈಗ ಇಲ್ಲಿಯ ಪಿಜಿ ಗ್ರಾಹಕರು 'ಅನಿರೀಕ್ಷಿತ ಆಘಾತ' ಭವಿಸುತ್ತಿದ್ದಾರೆ ಎಂದು ಪ್ರಜಾವಾಣಿ ೆ (ನವಂಬರ್ 28) ಹೇಳಿದೆ. ನಗದು ವರ್ಗಾವಣೆಯಿಂದಾಗಿ ಮೈಸೂರಿನ ಗ್ರಾಹಕರು ಎಲ್‌ಪಿಜಿ ಸಿಲಿಂಡರ್‌ಗೆ ಮಾರುಕಟ್ಟೆ ದರ ತೆರಬೇಕು. ಸರಕಾರದ ಸಬ್ಸಿಡಿ ಮೊತ್ತ ಆ ಮೇಲೆ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯಾಗುತ್ತದೆ. ಕಳೆದ ಐದು ತಿಂಗಳ ಅವಧಿಯಲ್ಲಿ ಮಾರುಕಟ್ಟೆ ದರ 839 ರೂ.ನಿಂದ ರೂ.1012 ವರೆಗೆ ವ್ಯತ್ಯಾಸಗೊಂಡಿದೆ. ಆದರೆ ಇದಕ್ಕನುಗುಣವಾಗಿ 'ನಗದು ವರ್ಗಾವಣೆ' ಮಾತ್ರ ಆಗಿಲ್ಲ.

ಎರಡು ತಿಂಗಳು ಸರಿಯಾಗಿ ಬ್ಯಾಂಕ್ ಖಾತೆಗೆ ಸಬ್ಸಿಡಿ ಹಣ ಬಂತು, ನಂತರ ಎರಡು ಸಿಲಿಂಡರ್ ಖರೀದಿಸಿದರೂ ಇದುವರೆಗೆ ಸಬ್ಸಿಡಿ 'ವರ್ಗಾವಣೆ' ಆಗಿಲ್ಲ, ಗ್ಯಾಸ್ ಏಜೆಂಸಿಯವರನ್ನು ಕೇಳಿದರೆ ಬ್ಯಾಂಕನ್ನು ಕೇಳಿ ಅನ್ನುತ್ತಾರೆ, ಬ್ಯಾಂಕಿನವರು ತಮಗೇನೂ ಮಾಹಿತಿಯಿಲ್ಲ ಅನ್ನುತ್ತಾರೆ, ನಗದು ವರ್ಗಾವಣೆಯಲ್ಲ, ಹೊಣೆಯ ವರ್ಗಾವಣೆಯಾಗಿದೆ ಎಂದು ಒಬ್ಬ ಗ್ರಾಹಕರು ಟಿಪ್ಪಣಿ ಮಾಡಿದ್ದಾರಂತೆ. ಅಕ್ಟೋಬರಿನಲ್ಲಿ ಮಾರುಕಟ್ಟೆ ಬೆಲೆ ರೂ.1012 ಇತ್ತು. ಸಬ್ಸಿಡಿ ಮೊತ್ತ ರೂ.584.40 ಜಮಾ ಆಗಬೇಕಿತ್ತು. ಆದರೆ ಒಬ್ಬ ಗ್ರಾಹಕರಿಗೆ ಜಮಾ ಆಗಿದ್ದು ರೂ.534.40. ಒಬ್ಬೊಬ್ಬರಿಗೆ ಒಂದೊಂದು ರೀತಿ ಜಮಾ ಆಗಿದೆಯಂತೆ. ಮೇಲೆ ಹೇಳಿದಂತೆ ಕೆಲವರಿಗೆ ಜಮಾ ಕೂಡ ಆಗಿಲ್ಲವಂತೆ.

ಸುಪ್ರಿಂ ಕೋರ್ಟ್ ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಯಾರಿಗೂ ಸರಕಾರದ ಸೌಲಭ್ಯಗಳನ್ನು ನಿರಾಕರಿಸಬಾರದು ಎಂದು ನೀಡಿರುವ ಮಧ್ಯಂತರ ಆದೇಶವನ್ನು ಬದಲಿಸಬೇಕು 'ಎಂದು ಈ ತೈಲ ಮಾರಾಟ ಕಂಪನಿಗಳು, ಕೇಂದ್ರ ಸರಕಾರ ಹಾಗೂ ಆಧಾರ್ ಕಾರ್ಡ್ ನೀಡುತ್ತಿರುವ ಯುಐಡಿಎಐ ಸಲ್ಲಿಸಿರುವ ಅರ್ಜಿಯ ವಿಚಾರಣೆ ಈಗ ನಡೆದಿದೆ. ಈ ವಿಚಾರಣೆಯ ಸಂದರ್ಭದಲ್ಲಿ ತೈಲ ಮಾರಾಟ ಕಂಪನಿಗಳು ಹಲವು ಜಿಲ್ಲೆಗಳಲ್ಲಿ ಈ 'ನಗದು ವರ್ಗಾವಣೆ' ಬಹಳ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಹೇಳಿವೆ. ಆದರೆ ಸುಪ್ರಿಂ ಕೋರ್ಟ್ ಮಧ್ಯಂತರ ಆದೇಶದಿಂದಾಗಿ ತೊಂದರೆಯಾಗುತ್ತದೆ ಎಂದು ಬಿನ್ನವಿಸಿವೆ. ಮೇಲೆ ಹೇಳಿದ ಮೈಸೂರಿನ ಎಲ್‌ಪಿಜಿ ಗ್ರಾಹಕರ 'ಆಘಾತ'ಕ್ಕೆ ಇದೇ ಕಾರಣವೆಂದು ಅವರು ಹೇಳುತ್ತಾರೋ ಗೊತ್ತಿಲ್ಲ.

ಆದರೆ ಇಂತಹ ತೊಂದರೆಗಳಿದ್ದರೂ, ಸುಪ್ರಿಂ ಕೋರ್ಟ್ ಯಾವುದೇ ಕಾರಣಕ್ಕೆ ಸರಕಾರದಿಂದ ಜನಗಳಿಗೆ ಸಿಗುವ ಸೌಲಭ್ಯಗಳನ್ನು (ಸಬ್ಸಿಡಿಗಳನ್ನು) ನಿಲ್ಲಿಸಬಾರದು ಎಂದು ಹೇಳಿದ್ದರೂ ಈ 'ನೇರ ನಗದು ವರ್ಗಾವಣೆ'ಯನ್ನು ಬೆಂಗಳೂರು ಸೇರಿದಂತೆ ಇತರ ಸ್ಥಳಗಳಿಗೂ ವಿಸ್ತರಿಸುವ ತರಾತುರಿ ಏಕೆ ಎಂಬ ಸಾಮಾನ್ಯ ನಾಗರಿಕರ ಪ್ರಶ್ನೆಗೆ ತೈಲ ಕಂಪನಿಗಳ ಬಳಿಯಂತೂ ಉತ್ತರವಿಲ್ಲ. ಬಹುಶಃ ಅವರು ಯುಪಿಎ–2 ಸರಕಾರದತ್ತ ಬೊಟ್ಟು ಮಾಡಬೇಕು.



ಈಗ ವಿಐಎಸ್‌ಎಲ್ ಖಾಸಗೀಕರಣದ ಹುನ್ನಾರ

ಭದ್ರಾವತಿಯ ವಿಶ್ವೇಶ್ವರ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (ವಿಐಎಸ್‌ಎಲ್)ಯನ್ನು ಖಾಸಗಿಯವರಿಗೆ ನೀಡುವ ಹುನ್ನಾರ ನಡೆದಿದೆ ಎಮದು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಆಪಾದಿಸಿದೆ. ಭಾರತದ ಉಕ್ಕು ಪ್ರಾಧಿಕಾರ(ಸ್ಟೀಲ್ ಆಥಾರಿಟಿ ಆಫ್ ಇಂಡಿಯಾ–ಸೈಲ್) ತನ್ನ ಅಧೀನದಲ್ಲಿರುವ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಲು ಈಗಾಗಲೇ ಈ ಕುರಿತು ಜಾಗತಿಕ ಟೆಂಡರ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ ಎಂದು ತಿಳಿದು ಬಂದಿದೆ.

90 ವರ್ಷಗಳ ಹಿಂದೆ ಆರಂಭವಾದ ಈ ಕಾರ್ಖಾನೆ ಕರ್ನಾಟಕದ ಜನರ ಹೆಮ್ಮೆಯ ಕೂಸಾಗಿದೆ. ನಷ್ಟದಲ್ಲಿರುವ ಈ ಕಾರ್ಖಾನೆಗೆ ಕಡಿಮೆ ವೆಚ್ಚದಲ್ಲಿ ಅದಿರನ್ನು ಪಡೆಯಲು ಅನುಕೂಲವಾಗುವಂತೆ ಗಮನವನ್ನು ನೀಡಬೇಕು. ಅಲ್ಲದೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಲು ಸಾರ್ವಜನಿಕ ಹೂಡಿಕೆಯನ್ನು ಕೇಂದ್ರ ಸರ್ಕಾರ ಮತ್ತು ಸೈಲ್ ಮಾಡಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ವಿಐಎಸ್‌ಎಲ್‌ನ ಖಾಸಗಿಕರಣದ ವಿರುದ್ಧ ಸುಮಾರು 40 ದಿನಗಳಿಂದ ಅಲ್ಲಿನ ಕಾರ್ಮಿಕ ಸಂಘಗಳು ಮತ್ತು ಸಾರ್ವಜನಿಕರು ಹೋರಾಟ ನಡೆಸುತ್ತಿದ್ದಾರೆ.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯ ತಪನ್ ಸೇನ್ ರವರು ಈ ಕುರಿತು ಕೇಂದ್ರ ಸರ್ಕಾರದ ಉಕ್ಕು ಸಚಿವರು ಮತ್ತು ಸೈಲ್‌ನ ಅಧ್ಯಕ್ಷರಿಗೆ ಪತ್ರ ಬರೆದು ಖಾಸಗಿಕರಣ ಮಾಡಬಾರದೆಂದು ಒತ್ತಾಯಿಸಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಯವರು ಕೂಡ ಈ ಕಾರ್ಖಾನೆಗೆ ಗಣಿಯನ್ನು ನೀಡುವುದಾಗಿ ಹೇಳಿದ್ದಾರೆ. ಹೀಗಿರುವಾಗ ಖಾಸಗಿಕರಣದ ಅಗತ್ಯವೇನಿಲ್ಲ. ಅವರೂ ಖಾಸಗೀಕರಣ ಮಾಡಬಾರದು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ವಿಐಎಸ್‌ಎಲ್‌ನ್ನು ಯಾವುದೇ ಕಾರಣಕ್ಕೂ ಖಾಸಗಿಕರಣಗೊಳಿಸುವುದಾಗಲೀ, ಜಂಟಿ ಸಹಭಾಗಿತ್ವಕ್ಕೆ ಒಳ ಪಡಿಸುವುದಾಗಲೀ ಸಲ್ಲದು. ಬದಲಾಗಿ ಈ ಕಾರ್ಖಾನೆಗೆ ಗಣಿಯನ್ನು ಒದಗಿಸಬೇಕು ಹಾಗೂ ಅದನ್ನು ಆಧುನೀಕರಣಗೊಳಿಸಲು ಬಂಡವಾಳ ಹೂಡಿಕೆಯನ್ನು ಮಾಡಬೇಕು ಎಂದು ಒತ್ತಾಯಿಸಿರುವ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ, ಇಲ್ಲವಾದಲ್ಲಿ ರಾಜ್ಯದ್ಯಾಂತ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಮಿತಿ ಮೀರಿದ ಕೆಲಸ : ವಾರದಲ್ಲಿ ಮೂರು ಶಂಟಿಂಗ್ ಅಪಘಾತಗಳು

ಭಾರತೀಯ ರೈಲ್ವೆಯಲ್ಲಿ ಕಳೆದ ಹತ್ತು ಗಳಲ್ಲಿ ಮೂರು ವಿಚಿತ್ರ ಎನ್ನಬಹುದಾದ ಘಾತಗಳು ಸಂಭವಿಸಿವೆ. ಮೂವರು ಪ್ರಾಣ ಕೊಂಡಿದ್ದಾರೆ. ಇವರು ಪ್ರಯಾಣಿಕರಲ್ಲ ಬುದು ಗಮನಾರ್ಹ.

ಈ ಮೂರೂ 'ಶಂಟಿಂಗ್' ಅಪಘಾತಗಳು ಬುದು ಈ ಸಮಸ್ಯೆಯ ಮೂಲ ಎಲ್ಲಿದೆ ದು ಯೋಚಿಸುವಂತೆ ಮಾಡಿದೆ.

ಕಳೆದ ಭಾನುವಾರ, ನವಂಬರ್ 24ರಂದು ಗಳೂರು ನಗರ ರೈಲ್ವೆ ನಿಲ್ದಾಣದಿಂದ ಲಿಗೆ ಹೊರಡಬೇಕಿದ್ದ ರಾಜಧಾನಿ ಎಕ್ಸ್‌ಪ್ರೆಸ್‌ನ ಜಿನ್‌ಗೆ ಬೋಗಿಗಳನ್ನು ಜೋಡಿಸುವ ದಲ್ಲಿ ಹಿಮ್ಮುಖವಾಗಿ ಚಲಿಸುತ್ತಿದ್ದಾಗ ಡೆಗೆ ಗುದ್ದಿದಾಗ ಮೂರು ಬೋಗಿಗಳು ತಪ್ಪಿದವು. ಒಂದು ಬೋಗಿ ಪಕ್ಕದಲ್ಲೇ ಇರುವ ಕಾಲನಿಯ ರಸ್ತೆಗೆ ಬಿದ್ದಿತು. ಅದೃಷ್ಟವಶಾತ್ ಆಗ ಜನಸಂಚಾರ ಇರಲಿಲ್ಲ. ಆದ್ದರಿಂದ ಸಾವು–ನೋವುಗಳು ಸಂಭವಿಸಲಿಲ್ಲ.

ಇದಕ್ಕೆ ಒಂದು ವಾರ ಮೊದಲು, ಕೇರಳ ಎಕ್ಸ್‌ಪ್ರೆಸ್ ಇದೇ ರೀತಿಯ ಶಂಟಿಂಗ್ ಕ್ರಿಯೆಯ ಸಂದರ್ಭದಲ್ಲಿ ಪಶ್ಚಿಮ ಎಕ್ಸ್‌ಪ್ರೆಸ್‌ಗೆ ಗುದ್ದಿತು. ಇಲ್ಲಿಯೂ ಕೆಲವು ಬೋಗಿಗಳು ಜಖಂ ಆದರೂ, ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಲಿಲ್ಲ.

ಆದರೆ ಬೆಂಗಳೂರಿನ ಶಂಟಿಂಗ್ ಅಪಘಾತದ ಮರುದಿನವೇ ಹಳೆ ದಿಲ್ಲಿ ಸ್ಟೇಶನ್‌ನಲ್ಲಿ ನಡೆದ ಮತ್ತೊಂದು ಶಂಟಿಂಗ್ ಅಪಘಾತದಲ್ಲಿ ಮೂವರು ಪ್ರಾಣ ಕಳಕೊಂಡಿದ್ದಾರೆ. ಇಲ್ಲಿ ಬೋಗಿಗಳನ್ನು ಜೋಡಿಸಿ ಹಿಮ್ಮುಖವಾಗಿ ಚಲಿಸುತ್ತಿದ್ದಾಗ ಕೊನೆಯ ಬೋಗಿ ಹಳಿಯ ಕೊನೆಯನ್ನು ದಾಟಿ ಹೋಗಿ ತಡೆಗೋಡೆಗೆ ಗುದ್ದಿತು. ಆ ಗೋಡೆ ಕುಸಿದು ಅದರಾಚೆ ಮಲಗಿದ್ದವರ ಮೇಲೆ ಬಿತ್ತು. ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಆದರೆ ಜೀವ ಉಳಿಯಲಿಲ್ಲ.

ಬೆಂಗಳೂರಿನ ಶಂಟಿಂಗ್ ಅಪಘಾತದ ಎರಡು ತಿಂಗಳ ಹಿಂದೆ ರಾಜಧಾನಿ ಎಕ್ಸ್‌ಪ್ರೆಸ್‌ನ ಒಂದು ಬೋಗಿ ಅದೇ ಸ್ಥಳದಲ್ಲಿ ಹಳಿ ತಪ್ಪಿತ್ತು, ಒಂದು ತಿಂಗಳ ಹಿಂದೆ ಜೋಧ್‌ಪುರ್ ಎಕ್ಸ್‌ಪ್ರೆಸ್‌ನ ಬೋಗಿಯೊಂದು ಉರುಳಿ ಬಿದ್ದಿತ್ತು ಎಂದು ವರದಿಯಾಗಿದೆ.

ದಿಲ್ಲಿ ಪೋಲೀಸರು ಲೋಕೋ ಚಾಲಕನನ್ನು ಮತ್ತು ಇಬ್ಬರು ಶಂಟಿಂಗ್ ನೌಕರರನ್ನು ಬಂಧಿಸಿದ್ದಾರೆ. ರೈಲ್ವೆ ಇಲಾಖೆ ಇವರನ್ನು ಅಮಾನತುಗೊಳಿಸಿದೆ. ತನಿಖೆ ನಡೆಸಲಾಗುತ್ತಿದೆಯಂತೆ. ಆದರೆ ಈ ರೀತಿಯ ಶಂಟಿಂಗ್ ಅಪಘಾತಗಳು ಸಾಲುಸಾಲಾಗಿ ಏಕೆ ನಡೆಯುತ್ತಿವೆ ಎಂಬುದೂ ಆ ತನಿಖೆಯಲ್ಲಿ ಸೇರಿದೆಯೇ ತಿಳಿದಿಲ್ಲ.

ಒಂದು ಅಧ್ಯಯನದ ಪ್ರಕಾರ ಲೋಕೋ ಚಾಲಕರಲ್ಲಿ 91 ಶೇ. ಮಂದಿ ಅವರ ದುಡಿಮೆಯ ಪರಿಸ್ಥಿತಿಗಳ ಒತ್ತಡದಿಂದಾಗಿ ಹಲವು ತರದ ವೈದ್ಯಕೀಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಅವರನ್ನು ಹತ್ತು ಗಂಟೆಗಳ ಕಾಲ ಈ ಒತ್ತಡಪೂರ್ಣ ಕೆಲಸದಲ್ಲಿ ದುಡಿಸಲಾಗುತ್ತಿದೆ. ಆದ್ದರಿಂದ ಕೆಲಸದ ಅವಧಿಯನ್ನು ಕಡಿತ ಮಾಡಬೇಕೆಂಬುದು ಲೋಕೋ ಚಾಲಕರ ಸಂಘದ ಬಹುಕಾಲದ ಬೇಡಿಕೆ. ರೈಲ್ವೆಯ ಉನ್ನತಾಧಿಕಾರ ಸಮಿತಿ(ರೈಲು ಚಾಲನೆ ಮತ್ತು ಸುರಕ್ಷೆ) ಕೂಡ ಕೆಲಸದ ಅವಧಿಯನ್ನು 10 ಗಂಟೆಗಳಿಂದ 9ಕ್ಕೆ ಇಳಿಸಬೇಕು ಎಂದು ಶಿಫಾರಸು ಮಾಡಿದೆ. ಆದರೆ ಎಲ್ಲವೂ ವ್ಯರ್ಥ. ರೈಲ್ವೆ ಇಲಾಖೆ ಈ ಬಗ್ಗೆ ಇನ್ನೂ ನಿರ್ಧಾರಕ್ಕೆ ಎಂದಿಲ್ಲ ಎಂದು ಜಾರಿಕೊಳ್ಳುತ್ತಿದೆಯಷ್ಟೇ. 17000 ಹುದ್ದೆಗಳು ಖಾಲಿಯಿವೆ, ಆದ್ದರಿಂದಾಗಿ ಇದು ಸಾಧ್ಯವಿಲ್ಲವೆನ್ನಲಾಗುತ್ತಿದೆ.

ಹುದ್ದೆ ಖಾಲಿಯಿರಲು ಲೋಕೋ ಚಾಲಕರಂತೂ ಕಾರಣರಲ್ಲ. ಬಹುಶಃ ರೈಲ್ವೆ ಇಲಾಖೆಯೂ ಯುಪಿಎ–2 ಸರಕಾರದತ್ತ ಬೊಟ್ಟು ಮಾಡಬೇಕು! 'ಜನರಿಗಿಂತ ಲಾಭ ಮುಖ್ಯ' ಎಂಬ ನವ–ಉದಾರವಾದಿ ತತ್ವಕ್ಕೆ ಮುಖಗಳು ಹಲವು, ಅದರಿಂದಾಗಿ ದುಷ್ಪರಿಣಾಮಗಳೂ ಹಲವು.



ನಿಮ್ಮ ಪಕ್ಷ ಗೆಲ್ಲುತ್ತದೆ, ಸಾರ್! ನಮ್ಮ ಜಾಣ ಜಾಹೀರಾತುಗಳಿಂದ ಕೆಲವು ಅತ್ಯಂತ ಕಳಪೆ ಮೂರನೇ ದರ್ಜೆಯ ಉತ್ಪನ್ನಗಳನ್ನೂ ಮಾರಿದ್ದೇವೆ!– ಡೆಕ್ಕನ್ ಕ್ರಾನಿಕಲ್‌ನಲ್ಲಿ ಸುಧೀರ್ ತೈಲಂಗ್ ವ್ಯಂಗ್ಯ

ಕೇರಳ : ಲಾವ್ಲಿನ್ ತೀರ್ಪು: ಪಿಣರಾಯ ನಿರ್ದೋಷಿ

ಮೆಕ್‌ಕ್ಯಾರ್ತೀಸಂ ಎಂಬ ಹೊಸ ಪದ ಬಳಕೆ ಅಸ್ತಿತ್ವಕ್ಕೆ ಬಂದದ್ದು 1950ರಲ್ಲಿ. ಮೆಕಾರ್ತೀಸಂ ಎಂದರೆ ತಲೆಬುಡವಿಲ್ಲದ ದೂರು ನೀಡಿ ಅಥವಾ ಇಲ್ಲಸಲ್ಲದ ಆಪಾದನೆ ಮಾಡಿ ಆರೋಪಿಗೆ ತನ್ನ ನ್ಯಾಯಮಂಡಿಸುವ ಅವಕಾಶವನ್ನೂ ನೀಡದ ರೀತಿಯಲ್ಲಿ ತನಿಖೆ ನಡೆಸಿ ಅಪರಾಧಿಯನ್ನಾಗಿ ಮಾಡುವುದು. ರಾಜಕೀಯ ಟೀಕೆ ಅಥವಾ ತನ್ನ ವಿರುದ್ಧದ ಪ್ರಬಲ ವಿರೋಧವನ್ನು ಹತ್ತಿಕ್ಕಲು ಇಂತಹ ಪ್ರಕ್ರಿಯೆ ನಡೆಯುತ್ತದೆ. 1950ರಲ್ಲಿ ಅಮೆರಿಕದ ಸೆನೆಟರ್ ಜೋಸೆಫ್ ಮೆಕ್‌ಕಾರ್ತಿ ಕಮ್ಯುನಿಸ್ಟರನ್ನು ಸದೆಬಡಿಯಲು ಈ ತಂತ್ರ ಹೂಡಿದ್ದ. ಅಮೆರಿಕದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಮ್ಯುನಿಸ್ಟರು, ಸೋವಿಯತ್ ಗೂಢಚಾರಿಗಳು ಮತ್ತು ಹಿತಚಿಂತಕರು ಇದ್ದಾರೆ ಎಂದು ಆತ ವಾದ ಮಂಡಿಸಿದ್ದ. ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ, ಅಥವಾ ಈ ಬಗ್ಗೆ ಅನುಮಾನ ಬಂದಲ್ಲಿ ಅವರನ್ನು ವೃಥಾ ಆರೋಪ ಮಾಡಿ ಪೂರ್ವಾಗ್ರಹ ತನಿಖೆ ನಡೆಸಿ ಅಪರಾಧಿಯನ್ನಾಗಿ ಮಾಡುತ್ತಿದ್ದ. ಇದರಿಂದ ಮೆಕ್‌ಕ್ಯಾರ್ತಿಸಂ ಎಂಬ ಪದಬಳಕೆ ಚಾಲ್ತಿಗೆ ಬಂತು.


ಕೇರಳದಲ್ಲೂ ಇಂತಹ ಮೆಕಾರ್ತಿಸಂ ಎಂಬ ದುಷ್ಟ ವಿನ್ಯಾಸವನ್ನು ಸಿಪಿಐ(ಎಂ) ಮತ್ತು ಅದರ ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ವಿರುದ್ಧ ನಡೆಸಲಾಗುತ್ತಿದೆ. ಪಕ್ಷ ಮತ್ತು ಅದರ ನಾಯಕತ್ವದ ಬಗ್ಗೆ ಜನರಲ್ಲಿ ಸಂಶಯದ ಮನೋಭಾವ ಮೂಡಿಸುವುದು ಮತ್ತು ಅಪರಾಧಿಯನ್ನಾಗಿ ಬಿಂಬಿಸುವ ವ್ಯವಸ್ಥಿತ ಸಂಚು ಇದಾಗಿದೆ.

ಪಕ್ಷದ ನಾಯಕರ ವಿರುದ್ಧ ಇಲ್ಲಸಲ್ಲದ ಅಥವಾ ಕಪೋಲಕಲ್ಪಿತ ಕಥೆ ಹಣೆದು, ಅವರ ವಿರುದ್ಧ ಆಧಾರರಹಿತ ಆರೋಪ ಮಾಡುವುದು ನಡೆದೇ ಇದೆ. ಇಷ್ಟೇ ಅಲ್ಲದೆ, ಬೀದಿಗಳಲ್ಲಿ ಇಂತಹ ಆರೋಪಗಳ ವಿರುದ್ಧ ಹೋರಾಟ ನಡೆಸುವುದು, ಜನವಿರೋಧವನ್ನು ಕಾಯ್ದುಕೊಳ್ಳಲು ನ್ಯಾಯಾಲಯಗಳಲ್ಲಿ ಇಂತಹ ಆರೋಪಗಳ ಬಗ್ಗೆ ದೂರು ಸಲ್ಲಿಸುವ ಮಟ್ಟಕ್ಕೂ ರಾಜಕೀಯ ದ್ವೇಷಿಗಳು ಹೋಗಿದ್ದಾರೆ. ಇದು ಯಾವ ಹಂತಕ್ಕೆ ಹೋಗಿದೆ ಎಂದರೆ ಸ್ವತಃ ಜೋಸೆಫ್ ಮೆಕ್ಯಾರ್ತೀ ಬದುಕಿದ್ದರೆ ನಾಚಿಕೆಯಿಂದ ತಲೆತಗ್ಗಿಸುತ್ತಿದ್ದ!!!...

ಆದರೆ, ಇತ್ತೀಚೆಗೆ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ ತೀರ್ಪು ಮೆಕ್ಯಾರ್ತಿಸಂ ಅನುಸರಿಸುವ ರಾಜಕೀಯ ದ್ವೇಷಿಗಳಿಗೆ ಒಂದು ಪ್ರಬಲವಾದ ಹೊಡೆತವಾಗಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಆರೋಪಿಯಾಗಿರುವ ಎಸ್‌ಎನ್‌ಸಿ ಲ್ಯಾವಲಿನ್ ಪ್ರಕರಣದಲ್ಲಿ ಪಿಣರಾಯಿ ನಿರ್ದೋಷಿ ಎಂದು ನ್ಯಾಯಾಲಯ ತೀರ್ಪು ನೀಡಿದೆ. ಪಿಣರಾಯಿ ವಿರುದ್ಧ ಮಾಡಲಾದ ಯಾವುದೇ ಆಪಾದನೆ ಹುರುಳಿಲ್ಲ ಮತ್ತು ಆಧಾರರಹಿತ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಇದು ವೃಥಾ ಅಪಪ್ರಚಾರದಲ್ಲಿ ತೊಡಗಿರುವ ಕಮ್ಯುನಿಸ್ಟ್ ವಿರೋಧಿ ಶಕ್ತಿಗಳಿಗೆ ಮರ್ಮಾಘಾತ ನೀಡಿದೆ.

ಸಿಬಿಐ ವಿಶೇಷ ನ್ಯಾಯಾಲಯ ಎಸ್‌ಎಲ್‌ಸಿ ಲ್ಯಾವಲಿನ್ ಪ್ರಕರಣದಲ್ಲಿ ಪಿಣರಾಯಿ ವಿಜಯನ್ ಮತ್ತು ಇತರ ಆರು ಮಂದಿಯ ಮೇಲಿನ ಆರೋಪವನ್ನು ಖುಲಾಸೆಗೊಳಿಸಿದ್ದು ಮಾತ್ರವಲ್ಲ, ಈ ಪ್ರಕರಣದ ತನಿಖೆ ನಡೆಸಿದ ಬಗ್ಗೆ ತನಿಖಾ ಸಂಸ್ಥೆ ವಿರುದ್ಧ ಕಠಿಣ ಪದಬಳಕೆ ಮಾಡಿದೆ.

ಸಿಬಿಐ ಸಲ್ಲಿಸಿದ ಆರೋಪಪಟ್ಟಿಯಲ್ಲಿ ಇರುವ ಎಲ್ಲ ಆರೋಪಗಳನ್ನು ಖಂಡಿಸಿರುವ



ನ್ಯಾಯಮೂರ್ತಿಗಳು, ಯಾವುದೇ ಆಧಾರವಿಲ್ಲದೆ ಇಂತಹ ಗಂಭೀರ ಆರೋಪ ಮಾಡಿರುವ ಬಗ್ಗೆ ಸಖೇದಾಶ್ಚರ್ಯ ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿ ಉನ್ನತ ಸ್ಥಾನಮಾನದಲ್ಲಿ ಇರುವ ಒಬ್ಬ ವ್ಯಕ್ತಿ ಇಂತಹ ಕೃತ್ಯ ನಡೆಸಿದ್ದಾನೆ ಎಂಬುದನ್ನು ಒಪ್ಪಲೂ ಸಾಧ್ಯವಿಲ್ಲದ ಆರೋಪ ಇದಾಗಿದೆ ಎಂದು ಟಿಪ್ಪಣಿಯಲ್ಲಿ ಹೇಳಲಾಗಿದೆ. ಈ ಎಲ್ಲ ಆರೋಪಗಳು ರಾಜಕೀಯ ಪ್ರೇರಿತ ಎಂಬುದು ದೃಢಪಟ್ಟಿದ್ದು, ಸಿಬಿಐ ತನ್ನ ಪ್ರಮುಖ ಆರೋಪಗಳಿಗೂ ಕನಿಷ್ಠ ಸಾಕ್ಷ್ಯ ಒದಗಿಸಲು ವಿಫಲವಾದ ಬಗ್ಗೆ ಕೋರ್ಟು ಟೀಕಾತ್ಮಕ ಟಿಪ್ಪಣಿ ಮಾಡಿದೆ.

ಪ್ರಕರಣದ ಪ್ರಮುಖ ಆರೋಪ ಎಂದರೆ ಪಲ್ಲಿವಸಲ್, ಸೆಂಗುಲಂ ಮತ್ತು ಪನ್ನಿಯರ್ (ಪಿಎಸ್‌ಪಿ) ವಿದ್ಯುತ್ ಯೋಜನೆಗಳ ಆಧುನೀಕರಣ ಮತ್ತು ನವೀಕರಣದ ಒಪ್ಪಂದವನ್ನು ಕೆನಡಾದ ಎಸ್‌ಎನ್‌ಸಿ ಲ್ಯಾವಲಿನ್ ಕಂಪೆನಿಗೆ ನೀಡಲು ಸರ್ಕಾರದ ಎಲ್ಲ ಅಧಿಕಾರಿಗಳು, ಸಿಬ್ಬಂದಿ ತಮ್ಮ ಬದ್ಧತೆ, ಕರ್ತವ್ಯ ಹಾಗೂ ಪ್ರಾಮಾಣಿಕತೆಯ ಗಡಿ ದಾಟಿದ್ದಾರೆ ಎಂಬುದು. ಎಲ್ಲ ನೀತಿ ನಿಯಮಗಳನ್ನು ಉಲ್ಲಂಘಿಸಿ ನಿಗದಿತ ದರಕ್ಕೆ ಒಪ್ಪಂದ ಮಾಡಿರುವುದು ಆಕ್ಷೇಪದ ಮತ್ತೊಂದು ವಾದ. ಅಲ್ಲದೆ, ಮಲವಾರ್ ಕ್ಯಾನ್ಸರ್ ಸೆಂಟರ್‌ಗೆ 98.3 ಕೋಟಿ ರೂಪಾಯಿ ಅನುದಾನ ನೀಡುವ ಲ್ಯಾವಲಿನ್ ಭರವಸೆಯ ಬಗ್ಗೆ ಲಿಖಿತ ಒಪ್ಪಂದ ಮಾಡದಿರುವ ಹಿಂದೆ ಕ್ರಿಮಿನಲ್ ಪಿತೂರಿ ಅಡಗಿದೆ ಎಂಬುದು ಸಿಬಿಐ ವಾದ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಭಾರೀ ಪ್ರಮಾಣದ ನಷ್ಟ ಉಂಟಾಗಿದ್ದು, ಎಸ್‌ಎನ್‌ಸಿ ಲ್ಯಾವಲಿನ್ ಕಂಪೆನಿಗೆ ಇದರಿಂದ ಬೃಹತ್ ಲಾಭವಾಗಿದೆ ಎಂಬ ವಾದ ಮಂಡಿಸಿತ್ತು.

ಒಪ್ಪಂದ ಮಾಡದ ಕಾರಣದಿಂದ ಲ್ಯಾವಲಿನ್ ಸಂಸ್ಥೆ ಕ್ಯಾನ್ಸರ್ ಕೇಂದ್ರದ ಯೋಜನೆಗೆ 98 ಕೋಟಿಗೆ ಬದಲಾಗಿ ಕೇವಲ 12.05 ಕೋಟಿ ರೂಪಾಯಿ ನೀಡಿದೆ. ಇದರಿಂದ ಸರ್ಕಾರದ ಖಜಾನೆಗೆ 86.25 ಕೋಟಿ ರೂ. ನಷ್ಟವಾಗಿದೆ ಎಂಬುದು ಅದರ ವಾದ.

ಆದರೆ, ಇದಕ್ಕೆ ಪ್ರತಿಯಾಗಿ ಪಿಣರಾಯಿ ವಿಜಯನ್ ಸೇರಿದಂತೆ ಯಾವುದೇ ಆರೋಪಿಗಳು ಹಣಕಾಸಿನ ಅಥವಾ ಇತರ ಯಾವುದೇ ರೀತಿಯ ಲಾಭ ಮಾಡಿರುವುದರ ಬಗ್ಗೆ ಪುರಾವೆ ಒದಗಿಸಲು ಸಿಬಿಐ ವಿಫಲವಾಗಿರುವುದನ್ನು ಸಿಬಿಐ ನ್ಯಾಯಾಲಯ ಗಮನಿಸಿದೆ.

ಹಣಕಾಸು ಅಥವಾ ಯಾವುದೇ ಮೌಲ್ಯಯುತ ಆಸ್ತಿಯ ಕಿಕ್‌ಬ್ಯಾಕ್ ವ್ಯವಹಾರ ನಡೆಸಿದೆ ಎಂಬುದು ತನಿಖೆಯಲ್ಲಿ ಕಂಡುಬಂದಿಲ್ಲ. ವಿದ್ಯುತ್ ಯೋಜನೆಗೆ ಪ್ರತಿಯಾಗಿ ತಲಶ್ಶೇರಿಯ ಮಲಬಾರ್ ಕ್ಯಾನ್ಸರ್ ಸೆಂಟರ್‌ಗೆ ಎನ್‌ಎನ್‌ಸಿ ಲ್ಯಾವಲಿನ್ ಕಂಪೆನಿಯಿಂದ 98.3 ಕೋಟಿ ಅನುದಾನ ಒದಗಿಸುವ ನಿಟ್ಟಿನಲ್ಲಿ ಪಿಣರಾಯಿ ವಿಜಯನ್ ಅಥವಾ ಇತರ ಯಾವುದೇ ಮಧ್ಯಸ್ತಿಕೆದಾರ ಲಾಭ ಮಾಡಿಕೊಂಡಿರುವ ಬಗ್ಗೆ ಸಿಬಿಐ ಆರೋಪ ಮಾಡಿಲ್ಲ.

ತನ್ನ ರಾಜಕೀಯ ದೊರೆಗಳನ್ನು ತೃಪ್ತಿಪಡಿಸಲು ಸಿಬಿಐ ಮತ್ತೊಂದು ಆರೋಪವನ್ನೂ ಮಾಡಿತ್ತು. ಆಗ ವಿದ್ಯುತ್ ಸಚಿವರಾಗಿದ್ದ ಪಿಣರಾಯಿ ಕ್ಯಾನ್ಸರ್ ಕೇಂದ್ರಕ್ಕೆ ತನ್ನ ಖಾಸಗಿ ಸಿಬ್ಬಂದಿಯನ್ನು ನೇಮಕ ಮಾಡಿದ್ದರು. ಈ ಮೂಲಕ ಭೂಸ್ವಾಧೀನ ಹಾಗೂ ಇತರ ಪ್ರಕ್ರಿಯೆ ಬಗ್ಗೆ ಜವಾಬ್ದಾರಿ ವಹಿಸಿದ್ದರು. ಸಚಿವ ಸ್ಥಾನದಿಂದ ಮುಕ್ತಗೊಂಡ ಬಳಿಕವೂ ವೈಯಕ್ತಿಕ ಹಿತಾಸಕ್ತಿ ತೋರಿಸಿ ಈ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಂಡಿದ್ದರು ... ಅದರ ಆರೋಪ. ಸಮಾಜದ ... ಯ ವ್ಯಕ್ತಿಗೆ ಉಪಯೋಗವಾಗುವ ಈ ಯೋಜನೆಯನ್ನು ಸಾಕಾರಗೊಳಿಸಲು ಪಿ... ಹಗಲಿರುಳು ದುಡಿದಿರುವುದಕ್ಕೆ ... ವ್ಯಕ್ತಪಡಿಸುವುದನ್ನು ಬಿಟ್ಟು ಆರೋಪ ಮ... ಕಾಮಾಲೆ ಕಣ್ಣಿನ ಬಗ್ಗೆ ನ್ಯಾಯಾಲಯ ... ತರಾಟೆಗೆ ತೆಗೆದುಕೊಂಡಿದೆ.

ಸಿಬಿಐನ ವಾದ ನ್ಯಾಯಾ... ತನಿಖೆಯಲ್ಲಿ ಎಷ್ಟು ಟೊಳ್ಳು ಎಂಬುದು ... ಜಗಜ್ಜಾಹೀರಾಗಿದೆ.

ಪ್ರಕರಣದ ಸಂಪೂರ್ಣ ... ಪೂರ್ಣಗೊಳಿಸಿದ ನ್ಯಾಯಾಲಯ, ಇದ... ಸಮಾಜಿಕ ಹಿತಾಸಕ್ತಿ ಇಲ್ಲದ ಒಪ್ಪಂದವೇ ... ಸಿಬಿಐಗೆ ಮರುಪ್ರಶ್ನೆ ಹಾಕಿದೆ.

ವಿದ್ಯುತ್ ಯೋಜನೆಯ ... ಸಂಬಂಧಿಸಿದ ಸರ್ಕಾರದ ... ದುರುಪಯೋಗ, ಅಪ್ರಾಮಾಣಿಕತೆ ... ಅಧಿಕಾರದ ಸ್ಥಾನದ ದುರ್ಬಳಕೆ ಇತ್ಯಾದಿ ... ನೀಡುವುದು ತರವಲ್ಲ ಎಂದು ನ್ಯಾಯ... ತೀರ್ಪಿನಲ್ಲಿ ಹೇಳಿದ್ದು, ಇಂತಹ ಆರೋ... ವಿಧ್ವಂಸಕವಾಗಿದ್ದು, ಪರಸ್ಪರ ವೈ... ಕೂಡಿದೆ ಎಂದು ವ್ಯಾಖ್ಯಾನಿಸಿದೆ.

"ಚಂದಿರನಿಗೂ ಚಿಂತೆ"

ಕವನ

ಅಜ್ಜ ಹೇಳಿದ ಮಾತು
ನೆನಪಾಯಿತು,
ಚಂದ್ರ ಲೋಕದೊಳಗೊಂದು
ಮನೆಯ ಕಟ್ಟುವರಂತೆ,
ಅದು ಹಳೆಯ ಮಾತು
ಈಗ,
ಹೊಸದೊಂದು ಸುದ್ದಿ
ಚಂದ್ರಲೋಕದೊಳಗೊಂದು
ಜೈಲು ಕಟ್ಟುವರಂತೆ
ಮಂಗಳನ ಅಂಗಳದಲ್ಲೂ
ಜಾಗ ಹುಡುಕುತ್ತಿದ್ದಾರಂತೆ,
ಚಂಚಲಗುಡ
ಪರಪ್ಪನ ಅಗ್ರಹಾರ
ಜೈಲುಗಳೆಲ್ಲಾ
ಭರ್ತಿಯಾಗಿವೆಯಂತೆ,

ಇನ್ನೂ
ಜೈಲುಗಳ ಮುಂದೆ
ಸಾಲುಗಟ್ಟಿ ನಿಂತವರೆಷ್ಟು
ಹನುಮಂತನ ಬಾಲಕ್ಕಿಂತಲೂ
ಉದ್ದ ಅವರ LIST
ಫಿರಂಗಿ ಕಳ್ಳರು
ತರಂಗ ಕಳ್ಳರು
ಶವಪೆಟ್ಟಿಗೆ ಕಳ್ಳರು
ಗಣಿಕಳ್ಳರು
ನೆಲಗಳ್ಳರು
ಜಲಗಳ್ಳರು
ಮಲ ಇನ್ನೂ ಕದ್ದಿಲ್ಲ
ಮೇವು ಕದ್ದವರು
ಅನಿಲ ಕದ್ದವರು
ಮರಳು ಕದ್ದವರು
ಕಲ್ಲು ಕದ್ದವರು
ಕಲ್ಲಿದ್ದಲು ಕದ್ದವರು

ಜೊತೆಗೆ
ಖಾವಿಯೊಳಗೆ
ಕಾಮ ತುಂಬಿಕೊಂಡು
ವೀರ್ಯ ಹರಿಸಿದವರು
ನಿತ್ಯಾನಂದ, ಸತ್ಯಾನಂದ,
ಪ್ರೇಮಾನಂದ, ಆತ್ಮಾನಂದ,
ಎಷ್ಟೊಂದು ಜನ!
ಎಲ್ಲರಿಗೂ ಎಲ್ಲಿದೆ ಜಾಗ
ಜೈಲು ಗೋಡೆಯ ಒಳಗ
ಹೊಸ ಜೈಲು ಕಟ್ಟಲು
ಜಾಗವೇ ಇಲ್ಲ,
ರಿಯಲ್ ಎಸ್ಟೇಟ್ ದಂಧ
ನೆಲವೆಲ್ಲಾ ಸ್ವಾಹಾ!
ಈಗ
ಹೊಸದೊಂದು ಯೋಜನೆ
ಸಿದ್ಧವಾಗಿದೆಯಂತೆ
ಆಪರೇಷನ್ ಜೈಲ್
ಆನ್ ಮೂನ್
ಚಂದಿರನಿಗೆ ಅದೇ ಚಿಂತೆ
ನಿದ್ದೆಯಿಲ್ಲವಂತೆ,
ತನ್ನನ್ನೂ ಕದ್ದು
ಮಾರಿ ಬಿಡುವರೇನೋ
ಎಂಬ ಭಯವಂತೆ,
ಬೆಳದಿಂಗಳ ಕಣ್ಣುಗಳ
ಕಿತ್ತು ಬಿಡುವರೇನೋ
ಎಂದು ಹೆದರಿಕೆಯಂತೆ
ಮಂಗಳನೂ ಗಳ ಗಳ
ಅಳುತ್ತಿರುವಂತೆ.

–ತುಲಿಕಟ್ಟೆ ಚನ್ನ...

ಜನಶಕ್ತಿ
ಕನ್ನಡ ವಾರಪತ್ರಿಕೆ

'ಹೆಚ್ಚುತ್ತಿರುವ ದಲಿತರ ಮೇಲಿನ ದೌರ್ಜನ್ಯಕ್ಕೆ ತಡೆ ಹಾಕಿ – ಲೋಪದೋಷ ನಿವಾರಿಸಿ ಕಾಯ್ದೆ ಬಲಪಡಿಸಿ' – ಕೆ. ವರದರಾಜನ್ ಆಗ್ರಹ

'ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ದೌರ್ಜನ್ಯತಡೆ) ಕಾಯಿದೆ 1989'ರ ತಿದ್ದುಪಡಿ ಕುರಿತು ಕಾರ್ಯಾಗಾರ 'ಒಂದು ಕೋಟಿ ಸಹಿ ಸಂಗ್ರಹಕ್ಕೆ ಕರೆ'

ರಿಶಿಷ್ಟ ಜಾತಿ-ಪಂಗಡಗಳ (ಎಸ್.ಸಿ.–ಟಿ.)ಮೇಲಿನ ದೌರ್ಜನ್ಯ ತಡೆ ಕಾಯ್ದೆಗೆ ದ್ದುಪಡಿಗಳನ್ನು ಸಂಸತ್ತಿನ ಈ ಚಳಿಗಾಲ ಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಬೇಕು. ಇವರೆಗೆ ಕಾಯ್ದೆಯಲ್ಲಿ ಗುರುತಿಸದಿರುವ ಸ ಅಪರಾಧಗಳನ್ನು ಸ್ಪಷ್ಟವಾಗಿ ಈ ಯ್ದೆಯೊಳಗೆ ಸೇರಿಸಬೇಕು. ಎಸ್.ಸಿ./ ಟಿ.ಗಳ ಮೇಲಿನ ದೌರ್ಜನ್ಯ ತ್ತು ದಾಳಿಗಳಿಗೆ ಶಿಕ್ಷೆಯನ್ನು ಮತ್ತಷ್ಟು ಣಗೊಳಿಸಬೇಕು ಮುಂತಾದ ಪ್ರಶ್ನೆಗಳ ಧಾರದಲ್ಲಿ ಈ ಕಾಯ್ದೆ ತಿದ್ದುಪಡಿ ಕುರಿತ ರ್ಯಾಗಾರವೊಂದನ್ನು ಇದೇ ನವೆಂಬರ್ 2013 ರಂದು ಸಿಪಿಐ(ಎಂ) ರಾಜ್ಯ ತಿ ಹಾಗೂ ದಲಿತ ಹಕ್ಕುಗಳ ಸಮಿತಿಗಳು ಘಟಿಸಿದ್ದವು.

ಕಾರ್ಯಾಗಾರ ಉದ್ಘಾಟಿಸಿ ಸಿಪಿಐ(ಎಂ) ಲಿಟ್ ಬ್ಯೂರೋ ಸದಸ್ಯರಾದ ವರದರಾಜನ್ ಮಾತನಾಡಿ ಸ್ವಾತಂತ್ರ್ಯ ಬಂದು ವರ್ಷಗಳು ಕಳೆದರೂ ನಮ್ಮ ದೇಶದಲ್ಲಿನ ಲಿತರ ಸ್ಥಿತಿಗತಿಗಳಲ್ಲಿ ಬದಲಾವಣೆ ಲ್ಲ. ನಮ್ಮ ಸಂವಿಧಾನ ನಮಗೆ ಮಾನತೆ ಒದಗಿಸಿದೆ. ಅಸಮಾನತೆಯನ್ನು ೇಧಿಸುತ್ತದೆ. ಆದರೆ ಈ ಕಾನೂನು ಮತ್ತು ..., ಭೂಸುಧಾರಣಾ ಕಾಯಿದೆ ಇವೆಲ್ಲಾ ಗದದ ಮೇಲಿದೆ ಅಷ್ಟೇ. ನಮ್ಮ ದೇಶದಲ್ಲಿ ಲವು ರಾಜ್ಯಗಳಲ್ಲಿ ಸುಮಾರು ನೂರೈವತ್ತು ತಿಯ ಅಸ್ಪೃಶ್ಯತಾ ಆಚರಣೆಗಳಿವೆ. ವು ಹಳ್ಳಿಗಳಲ್ಲಿ ದಲಿತರು ಇಂದಿಗೂ ಪ್ಪಲಿ ಹಾಕುವಂತಿಲ್ಲ. ಸೈಕಲ್ ಮೇಲೆ ಓಡಾಡಬಾರದು. ತಮಿಳುನಾಡಿನಂತಹ ಕಡೆ ಲಿತರು ಗಂಡು ನಾಯಿ ಸಾಕುವಂತಿಲ್ಲ. ಕೃಷ್ಣ ಭಗವದ್ಗೀತೆಯಲ್ಲಿ ಚಾತುರ್ವರ್ಣವನ್ನು ನೇ ಸೃಷ್ಟಿಸಿದ್ದು ಎಂದು ಹೇಳುತ್ತಾನೆ. ವನ್ನು ಯಾರೂ ಹಾಳುವುಮಾಡುದಾಗಲಿ, ದಲಾವಣೆ ಮಾಡುವುದಾಗಲಿ ಮಾಡಬಾರದು. ಮು ಪೂರ್ವಜನ್ಮದ ಕರ್ಮಫಲ, ಎಂದು ೇಳುತ್ತಾನೆ. ಇದನ್ನು ನಂಬಲು ಸಾಧ್ಯವೇ?

ಉಡುಪಿಯ ಪೇಜಾವರ ಮಠಾಧೀಶರು ನಮ್ಮ ವಿರುದ್ಧ ಮಾತ್ರ ಏಕೆ ಹೋರಾಟ ಮಾಡುತ್ತಾರೆಂದು ಪ್ರಶ್ನಿಸುತ್ತಾರೆ. ಆದರೆ ಶೋಷಣೆ ನಡೆಯುವ ಯಾವುದೇ ಪ್ರದೇಶ ಯಾವುದೇ ಧರ್ಮಕ್ಷೇತ್ರಗಳಾದರೂ ನಾವು



ಶೋಷಣೆ ವಿರುದ್ಧ ಹೋರಾಟ ಮಾಡುತ್ತೇವೆ.

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವ ಮತ್ತು ಅವರಿಗೆ ರಕ್ಷಣೆ ಒದಗಿಸುವ ಉದ್ದೇಶಕ್ಕಾಗಿ ಎಸ್.ಸಿ/ ಎಸ್.ಟಿ. (ದೌರ್ಜನ್ಯ ತಡೆ) ಕಾಯ್ದೆಯನ್ನು ರೂಪಿಸಿ ಸುಮಾರು 25 ವರ್ಷಗಳಾಗಿವೆ. ಆದರೆ, ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಆದ್ದರಿಂದ ಕಾಯ್ದೆಯಲ್ಲಿರುವ ಲೋಪದೋಷಗಳನ್ನು ತೆಗೆದುಹಾಕಲು ಮತ್ತು ಕಾಯ್ದೆಯನ್ನು ಬಲಪಡಿಸಲು ಅದನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅಗತ್ಯವಿದೆ. ಆದ್ದರಿಂದ ಸರ್ಕಾರ ಮತ್ತು ಆಡಳಿತವು ದಲಿತರ ಮೇಲಿನ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಒಂದು ಕೋಟಿ ಸಹಿಸಂಗ್ರಹಿಸುವ ಮೂಲಕ ಸರ್ಕಾರಕ್ಕೆ ನಾವು ಆಗ್ರಹಿಸುತ್ತೇವೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಹಿರಿಯ ಕಾರ್ಮಿಕ ಮುಖಂಡರಾದ ವಿಜೆಕೆ ನಾಯರ್ ಮೊದಲ ಸಹಿ ಮಾಡುವುದರ ಮೂಲಕ ಒಂದು ಕೋಟಿ ಸಹಿಸಂಗ್ರಹ ಆಂದೋಲನ ಉದ್ಘಾಟನೆ ಮಾಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮಾತನಾಡಿ ಕರ್ನಾಟಕದಲ್ಲಿ ಹೆಚ್ಚು ಅಸ್ಪ್ರಶ್ಯತಾ ಆಚರಣೆಗಳು ನಡೆಯುತ್ತಿವೆ. ಕಾಯಿದೆ ಬಳಸಿಕೊಂಡು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿದರು. ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಸವರಾಜ್ ವಹಿಸಿದ್ದರು. ಎನ್.ನಾಗರಾಜ್ ಸ್ವಾಗತಿಸಿದರು, ಕೃಷ್ಣ ಮಂಡ್ಯ ವಂದನಾರ್ಪಣೆ ಮಾಡಿದರು.

–ಗೋಪಾಲಕೃಷ್ಣ ಅರಳಹಳ್ಳಿ

ೋಮನ ದುಡಿ....

ಟ 2 ರಿಂದ

ಳುತ್ತಿದ್ದೇವೆ. ಯಾವ ಕನ್ನಡದಲ್ಲಿ ಎಂಬ ಶೆಯನ್ನು ಈಗಲಾದರೂ ಎತ್ತ ಬೇಕಾಗಿದೆ. ...ದ್ಯಕ್ಕೆ ಕಾನೂನುಗಳ ಕನ್ನಡ ಅನುವಾದಕ್ಕೆ ಳಸಿದ ಭಾಷೆಯೇ ಆದರೆ ಕಾನೂನುಗಳು ಂಗ್ಲಿಷಿನಲ್ಲಿರುವುದೇ ಕ್ಷೇಮ ಎಂದು ಹೋರಾಟ ಾಡುವ ಪರಿಸ್ಥಿತಿ ಬಾರದಿರಲಿ. ಸಾಮಾನ್ಯ ನಕ್ಕೆ ಅರ್ಥವಾಗುವ ಕನ್ನಡವನ್ನು ಬಳಸಲಿ ಂದು ಒತ್ತಾಯಿಸಬೇಕಾಗಿದೆ.

ಈ ಲೇಖನ ಮಾಲೆಯ ಆರಂಭದಲ್ಲಿಯೇ ಷಿ ಶಿಕ್ಷಣದ ಉದಾಹರಣೆ ನೀಡಿದ್ದೇನೆ. ದೇಶದ ತರಿಗೆ ಕೃಷಿಯ ಆಧುನಿಕ ವಿಧಾನಗಳನ್ನು ಳಿಸಿಕೊಡಬೇಕಾದ ಈ ವಿಜ್ಞಾನಗಳಿಗೆ ಬೇಕಾದ ದ ಸಂಪತ್ತು ಇಂಗ್ಲಿಷರಿಗಿಂತ ಸಾವಿರ ವರ್ಷ ೂದಲೇ ಕೃಷಿಯಲ್ಲಿ ತೊಡಗಿದ ಜನರ ಾಷೆಯಾದ ಕನ್ನಡದಲ್ಲಿ ಇರಲಿಲ್ಲವೇ ? ಅಥವಾ ರುವ ಪದಸಂಪತ್ತಿನ ಆಧಾರದ ಮೇಲೆ ಾಮಾನ್ಯ ಜನರಿಗೆ ಅರ್ಥವಾಗುವಂತೆ ಹೊಸ ದಗಳನ್ನು ಸೃಷ್ಟಿಸುವುದು ಅಸಾಧ್ಯವಾದ ಕೆಲಸವೇ ಇಂಗ್ಲಿಷಿನಲ್ಲಿ ಈ ವಿಷಯಗಳ ಅಧ್ಯಯನ ... ವಿದ್ಯಾರ್ಥಿಗಳು ಮುಂದೆ ರೈತರಿಗೆ ವರಿಸಲು ಹೊರಟಾಗ ಬೆಬ್ಬೆಬ್ಬೆ ಎನ್ನುವುದನ್ನು, ಂಗ್ಲಿಷ್ ಪದಗಳನ್ನು ಯಥೇಚ್ಛವಾಗಿ ಬಳಸುತ್ತಾ ಪಹಾಸ್ಯಕ್ಕೆ ಒಳಗಾಗುವುದನ್ನು ಇಂದಿಗೂ ಕಾಣುತ್ತೇವೆ. ರೈತರಿಗೆ ಕೃಷಿ ವಿಧಾನಗಳನ್ನು ತಿಳಿಸಿಕೊಡಲಾಗದೆ, ಕೃಷಿಕರಿಗೂ ಕೃಷಿ ವಿದ್ಯಾಲಯಗಳಿಗೂ ಅವಿನಾಭಾವ ಸಂಬಂಧ ಏರ್ಪಡದೆ, ಕೃಷಿಯ ಬೆಳವಣಿಗೆಗೆ ಎಷ್ಟು ನಷ್ಟವುಂಟಾಗಿರಬಹುದು ಅಂದಾಜಿಸಲು ಸಾಧ್ಯವೇ ? ರಾಜ್ಯದ ಅತ್ಯುತ್ತಮ ಬೆಳೆಗಾರರನ್ನು, ವಿವಿಧ ಯಶಸ್ವೀ ಪ್ರಯೋಗಗಳನ್ನು ಮಾಡಿ ಹೊಸ ವಿಧಾನಗಳನ್ನು ಕಂಡು ಹಿಡಿದವರನ್ನು ಈ ವಿಶ್ವವಿದ್ಯಾಲಯಗಳಲ್ಲಿ ಗೌರವ ಪ್ರಾಧ್ಯಾಪಕರೆಂದು ಪರಿಗಣಿಸಿ ತರಗತಿಗಳಲ್ಲಿ ಅವರಿಂದ ಪಾಠ ಮಾಡಿಸಲು ಸಾಧ್ಯವೇ ?

ಇನ್ನು ವೈದ್ಯಕೀಯಕ್ಕೆ ಬಂದರೆ ಅವರಿಗೆ ಕಲಿಸಲು ಉಪಯೋಗಿಸುವ ಗಡಚು ಇಂಗ್ಲಿಷ್–ಲ್ಯಾಟಿನ್ ಭಾಷೆಗಳ ಮಿಶ್ರಣದಿಂದಾಗಿ ವೈದ್ಯರು ನೀಡುವ ರೋಗ ವಿವರಣೆ ಶ್ರೀ ಸಾಮಾನ್ಯರಿಗೆ ರೋಗವೂ, ರೋಗ ಕಾರಣವೂ ಗೊತ್ತಾಗದೆ ಗಾಬರಿಯಾಗುವ ಪ್ರಸಂಗಗಳೆಷ್ಟು ? ಈ ಗಾಬರಿಯೇ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹೆಚ್ಚು ಹಣ ಕಸಿಯುವ ಸಾಧನವಾಗಿದೆ. ರೋಗದ ಸ್ವರೂಪ, ಕಾರಣಗಳು ಅರ್ಥವಾಗದೆ ಅದನ್ನು ನಿವಾರಿಸಿಕೊಳ್ಳುವ, ಬರದಂತೆ ತಡೆಗಟ್ಟುವ ಮಾರ್ಗ ತಿಳಿಯದೆ ರೋಗ ಉಲ್ಬಣಿಸುವ, ರೋಗ–ಕ್ಕೆ ತುತ್ತಾಗುವ ಪರಿಸ್ಥಿತಿಯಿಂದ ಇಂದೂ ಕೂಡ ಎಷ್ಟು ನಷ್ಟವಾಗುತ್ತಿದೆ ? ವೈದ್ಯಕೀಯದಂತಹ ವಿಜ್ಞಾನದ ವಿಷಯವನ್ನು ಕನ್ನಡದಲ್ಲಿ ಪಠ್ಯ ಪುಸ್ತಕ ಬರೆಯುವುದು ಕಷ್ಟ ಎನ್ನುವವರಿಗೆ ಉತ್ತರವಾಗಿ ಡಾ. ಡಿ. ಎಸ್. ಶಿವಪ್ಪನವರು ಒಂದು ಪದಕೋಶವೊಂದನ್ನು ತಯಾರಿಸಿದ್ದಾರೆ. ಅದು ಈಗಾಗಲೇ ಮರೆತೇ ಹೋಗಿದೆ. ಅದು ವೈದ್ಯಕೀಯ ವಿಜ್ಞಾನಕ್ಕೆ ಮಾತ್ರವಲ್ಲ ಯಾವುದೇ ವಿಜ್ಞಾನದ ಪಠ್ಯಗಳನ್ನು ತಯಾರಿಸುವುದಕ್ಕೂ ಮಾದರಿಯಾಗಿದೆ. ಅಚ್ಚಗನ್ನಡದ, ಸರಳ ಪದಗಳನ್ನೇ ಉಪಯೋಗಿಸಿ ಭಯ ಹುಟ್ಟಿಸುವ ಉಚ್ಚಾರಣೆಯ ವೈದ್ಯಕೀಯದ ಇಂಗ್ಲಿಷ್ ಹಾಗೂ ಲ್ಯಾಟಿನ್ ಪದಗಳಿಗೆ ಸಮಾನ ಪದಗಳನ್ನು ಸೃಷ್ಟಿಸಿದ್ದಾರೆ. ಇದು ವೈದ್ಯಕೀಯವನ್ನು ಡಿಮಿಸ್ಟಿಫೈ ಮಾಡುತ್ತದೆ.

ಇಂಗ್ಲಿಷ್ ಶಿಕ್ಷಣ, ಇಂಗ್ಲಿಷ್ ಆಡಳಿತ ಭಾಷೆಯಿಂದಾಗಿ ಆದ ಆಗುತ್ತಿರುವ ಕಷ್ಟ–ನಷ್ಟಗಳ ಬಗ್ಗೆ ಕೆಲ ಉದಾಹರಣೆಗಳನ್ನಷ್ಟೇ ಇಲ್ಲಿ ನೀಡಲಾಗಿದೆ. ಇನ್ನೂ ಅನೇಕ ರಂಗಗಳಲ್ಲಿ ಅಪಾರ ಸಂಕಷ್ಟಗಳನ್ನು ಜನತೆ ಅನುಭವಿಸುತ್ತಿದ್ದಾರೆ. ಈ ಕಷ್ಟ ನಷ್ಟಗಳಿಗೆ ತುತ್ತಾದವರಲ್ಲಿ ಹೆಚ್ಚು ಜನ ಹಿಂದುಳಿದ, ದಲಿತ, ಅಲ್ಪ ಸಂಖ್ಯಾತ ಜಾತಿಗಳ ಬಡವರೇ ಆಗಿದ್ದಾ–ರೆ. ಮೇಲ್ಜಾತಿಗಳ ಕೆಲವರೂ ನಷ್ಟ ಪಟ್ಟವರಲ್ಲಿ ಸೇರಿರಬಹುದು. ಲಾಭ ಪಡೆದವರಲ್ಲಿ ಕೆಳಜಾತಿಗಳ ಕೆಲವರೂ ಸೇರಿರಬಹುದು. ಈ ಅಘೋಷಿತ ಮೀಸಲಾತಿಯಿಂದಾದ ಈ ನಷ್ಟಗಳ ಹೊಣೆಯನ್ನು ಇಂಗ್ಲಿಷ್ ಭಾಷೆ ಪ್ರಾಧಾನ್ಯತೆಯನ್ನು ಮುಂದುವರೆಸಲು ತೀರ್ಮಾನ ಮಾಡಿದ ಮೇಲ್ಜಾತಿ, ಮೇಲ್ವರ್ಗದ ಜನರೇ ಹೊರಬೇಕು. ಇದು ಯಾವುದೋ ಬಾದರಾಯಣ ಕಾಲದಲ್ಲಿ ನಡೆದ ಪ್ರಸಂಗಗಳಿಗೆ ಇಂದಿನ ತಲೆಮಾರಿನವರಿಂದ ಪಡೆಯುತ್ತಿರುವ ದಂಡವಲ್ಲ. ಇಂದು, ಈಗ ಸಂಭವಿಸುತ್ತಿರುವ ನಷ್ಟದ ಮಾತು. ಈಗ ಹೇಳಿ ಮೀಸಲಾತಿ ದಕ್ಕಿದ್ದು ಯಾರಿಗೆ ?

ಭಾಷಾ ನೀತಿಗೆ ಸಂಬಂಧಿಸಿದ ಈ ಎಲ್ಲ ವಿಚಾರಗಳೂ ಕೇವಲ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮಾತ್ರ ಸಂಬಂಧಿಸಿದ ವಿಷಯಗಳಲ್ಲ. ಕೇಂದ್ರ ಸರ್ಕಾರದ ನಿರ್ಧಾರದ ಮೇಲೆ ಅವಲಂಭಿಸಿದ ವಿಷಯಗಳು. ಸ್ವಾತಂತ್ರ್ಯಾನಂತರ ಕೇಂದ್ರದಲ್ಲಿ, ರಾಜ್ಯಗಳಲ್ಲಿ ಏಕ ಪ್ರಕಾರವಾಗಿ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷ, ಸ್ವಾತಂತ್ರ್ಯಕ್ಕೆ ಮೊದಲು ದೇಶೀಯ ಭಾಷೆಗಳ ಪ್ರಾಧಾನ್ಯವನ್ನು ಪ್ರತಿಪಾದಿಸಿದ್ದ ಪಕ್ಷ, ಏಕೆ ನಂತರ ಇಂಗ್ಲಿಷ್ ಭಾಷಾ ಪ್ರಾಧಾನ್ಯತೆಯನ್ನು ಮುಂದುವರೆಸುವ ನಿರ್ಧಾರ ಕೈಗೊಂಡಿತು ? ಈಗಂತೂ ಹಳ್ಳಿಗಳಲ್ಲಿಯೂ ಇಂಗ್ಲಿಷ್ ಮಾಧ್ಯಮದ ಕಾನ್ವೆಂಟುಗಳು ತಲೆಯೆತ್ತುತ್ತಿವೆ. ರೈತಾಪಿ ಜನರು, ಇತರ ಕಡಿಮೆ ಆದಾಯದ ದುಡಿಮೆಗಾರರೂ ತಮ್ಮ ಆದಾಯದ ಬಹುಭಾಗವನ್ನು ವ್ಯಯಿಸಿ ತರಾತುರಿಯಿಂದ ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಸೇರಿಸುವ ಒತ್ತಡ ಉಂಟಾಗಿದೆ. ಕನ್ನಡ ಭಾಷೆಯ ಅಳಿವು–ಉಳಿವಿನ ಪ್ರಶ್ನೆಯಾಗಿ ಚರ್ಚಿತವಾಗುತ್ತಿದೆ. ಇಂತಹ ಅನಿವಾರ್ಯತೆಯನ್ನು ಏಕೆ, ಹೇಗೆ ಸೃಷ್ಟಿಸಲಾಯಿತು ? ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆದುಕೊಳ್ಳವುದು ದಲಿತ, ಹಿಂದುಳಿದ ಜಾತಿಗಳ ದೃಷ್ಟಿಯಿಂದ, ಅವರ ಉದ್ಯೋಗ, ಜೀವನಗಳ ದೃಷ್ಟಿಯಿಂದ ಅಗತ್ಯವಾಗಿದೆ.

ಕೃಪೆ : ಅಗ್ನಿ ವಾರಪತ್ರಿಕೆ

JANASHAKTHI KANNADA VARA PATRIKE DEC 08, 2013 Price : Rs. 10/- RNI No. KARKAN /2006/17926 Posted on ever
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. W

'ರಂಗ ಮಾಂತ್ರಿಕ' ಡಾ. ಸ್ಯಾಮ್ ಕುಟ್ಟಿ ನಿರ್ದೇಶನದಲ್ಲಿ: 'ಚದುರಂಗದ ಹಾಸು'ನಿಂದ ಹೊರಗೆ ಕಾಲು ಚಾಚಿದ 'ತುಘಲಕ್'


– ಮೈಸೂರು ವೆಂಕಟೇಶ

'ನಿಜ ಹೇಳಬೇಕೆಂದರೆ, ಸುಲ್ತಾನ ನಮ್ಮ ಮುಸುಡಿಗೆ ಒದ್ದು, ' ಜಿಝಿಯಾ ತೆರಿಗೆ ಕೊಡೋ ಹಿಂದು ನಾಯಿ' ಎಂದರೆ ನಾವು ನಿಶ್ಚಿಂತರು! ಎಲ್ಲ ಹಿಂದಿನ ಹಾಗೆ ಸರಿಯಾಗಿ ನಡೆದಿದೆ ಎನ್ನುವ ಸಮಾಧಾನವಾದರೂ ಇರುತ್ತದೆ. ಅದರೆ ಈ ಸುಲ್ತಾನರ ಹಾಗೆ, ' ನೀನು ಹಿಂದೂ ಧರ್ಮದವನಾಗಿದ್ದರೂ ನೀನೂ ಒಬ್ಬ ಮನುಷ್ಯನೇ' ಎಂದ ಕೂಡಲೇ ತಲೆ ಗರ ಗರ ತಿರುಗುತ್ತದೆ. ಎಲ್ಲೋ ಅಪಾಯ ಎನ್ನಿಸುತ್ತದೆ.'

ಈ ಮೇಲಿನ ಮಾತುಗಳನ್ನು ನಾಟಕವೊಂದರ ಹಿಂದೂ ಪಾತ್ರವೊಂದು ಯಥಾವತ್ತಾಗಿ ಬಾಯಿಪಾಠ ಒಪ್ಪಿಸಿದ್ದು ಮೊನ್ನೆ, ಅಕ್ಟೋಬರ 18ರಂದು ರಂಗ ಶಂಕರದಲ್ಲಿ ಸಮುದಾಯ ತಂಡದ ಕಲಾವಿದರಿಂದ ಪ್ರದರ್ಶನಗೊಂಡ 'ತುಘಲಕ್' ನಾಟಕದಲ್ಲಿ. ಇದರಲ್ಲೇನೂ ವಿಶೇಶವಿಲ್ಲ; ನಿಜ. ಅದರೆ ವಿಶೇಷವಿರುವುದು, ಈಗ ಚಾಲ್ತಿಯಲ್ಲಿರುವ ಇಂತಹ 'ಅನ್ಯಮತ ತುಷ್ಟೀಕರಣ'ದ ಸುಪ್ರಸಿದ್ಧ ಮಾತುಗಳನ್ನು ನಾಟಕಕಾರ ಗಿರೀಶ ಕಾರ್ನಾಡರು ಬರೆದದ್ದು ಸುಮಾರು ಅರೆ ಶತಮಾನದಷ್ಟು [1964] ಹಿಂದೆ ಎಂಬುದರ ದಾಖಲೆಗಳನ್ನು ನಂಬುವಾಗ ಅಚ್ಚರಿಯ ಜೊತೆಗೆ ಭಯವೂ ಆಗುತ್ತದೆ. ಪ್ರದರ್ಶನದ ಆರಂಭದಲ್ಲೇ ಕಿವಿಗಪ್ಪಳಿಸುವ ಈ ಮಾತಿನ, ಹಾಗೂ ಇಂತಹುದೇ ಮಾತುಗಳ ಒಳಗುಟ್ಟುಗಳನ್ನು ಚದುರಂಗದ 64 ಮನೆಗಳ ಮೂಲಕ ಪ್ರದರ್ಶನದುದ್ದಕ್ಕೂ ಧ್ವನಿಸಿದ ನಿರ್ದೇಶಕ ಡಾ. ಸ್ಯಾಮ್ ಕುಟ್ಟಿಯವರ ಮಾಂತ್ರಿಕ ಶಕ್ತಿಗೆ ಮೊದಲ ಅಭಿನಂದನೆ ಸಲ್ಲಬೇಕು.

ದೆಹಲಿಯ ಚಕ್ರವರ್ತಿಯೆಂದು ಚರಿತ್ರಕಾರರು ನಮ್ಮನ್ನೆಲ್ಲ ನಂಬಿಸಿದ್ದ ತುಘಲಕನನ್ನು ಓರ್ವ ಅಪ್ರತಿಮ ಆಡಳಿತಗಾರ ಎಂದು ದಾಖಲಿಸುವ ಜೊತೆಗೇ ಆತನಿಗೆ ಐಲು ದೊರೆ, ಕನಸುಗಾರ, ನಿರ್ದಯಿ, ಕ್ರೂರಿ ಇತ್ಯಾದಿಯಾಗಿ ವಿಶೇಷಣಗಳನ್ನೂ ದಯಪಾಲಿಸಿದ್ದಾರೆ. ಇತಿಹಾಸಕ್ಕಾರರಿಗೆ ಆತ ಯಾವ ಬಗೆಯಲ್ಲಿ ಸವಾಲಾಗಿದ್ದಾನೋ, ಅದೇ ಬಗೆಯಲ್ಲಿ ಶತಮಾನದಷ್ಟು ಹಿಂದೆ ಕಾರ್ನಾಡರು ರಚಿಸಿದ್ದ ತುಘಲಕ್ ನಾಟಕವು ಭಾರತದ ಬಹುತೇಕ ಎಲ್ಲ ನಿರ್ದೇಶಕರುಗಳಿಗೆ, ಕಲಾ ನಿರ್ದೇಶಕರುಗಳಿಗೆ, ನಟ ನಟಿಯರಿಗೆ, ಬೆಳಕು ತಜ್ಞರಿಗೆ, ರಂಗ ವಿನ್ಯಾಸಕಾರರಿಗೆ ಸಾರ್ವಕಾಲಿಕ ಸವಾಲು ಆಗಿಯೇ ಉಳಿದುಕೊಂಡಿದೆ.

ತುಘಲಕ್ ನಾಟಕದ ಮೂಲ 'ಸ್ಕ್ರಿಪ್ಟ್' ನಿರ್ದೇಶಕರುಗಳಿಗೆ ಒದಗಿಸುವ ಅಪಾರ ರಂಗ ಸಾಧ್ಯತೆಗಳು, ರಂಗ ವಿನ್ಯಾಸಕಾರರಿಗೆ ಹೊಳೆಯಿಸುವ ಅನನ್ಯ ದೃಶ್ಯ ವೈಭವಗಳು, ನಟರನ್ನು ಮೈ ಮರೆಸುವ ಸಂಭಾಷಣೆಗಳು ನಾಟಕದ ಮೂಲ ಧಾತುವನ್ನೇ ಮಸಕುಗೊಳಿಸುವಷ್ಟು ಶಕ್ತಿಶಾಲಿ. ಆದ್ದರಿಂದಲೇ ಈ ನಾಟಕದ ಪ್ರದರ್ಶನವು ನಮ್ಮ ಕಾಲದ ಸರ್ವೋತ್ತಮ ಸಮರ್ಥ ನಟ ನಟಿಯರ ಸಂಗಮದಲ್ಲಿದ್ದಾಗಲೂ ಎರಡನೇ ಪ್ರಯೋಗಕ್ಕೂ ಮುಗ್ಗರಿಸಿ ಮಕಾಡೆ ಮಲಗಿದ್ದ ದಾಖಲೆಗಳಿವೆ. ಇವನ್ನೆಲ್ಲ ಗಮನದಲ್ಲಿಟ್ಟುಕೊಂಡೇ ತಾಲೀಮು ನಡೆಸಿದಂತಿದ್ದ ಡಾ. ಶ್ಯಾಮ್ ಕುಟ್ಟಿಯವರ ನಿರ್ದೇಶನದ ಮೊನ್ನೆಯ ಪ್ರಯೋಗವು –ಪ್ರತಿಯೊಂದು ಪ್ರಯೋಗವೂ



ಹೊಸದೊಂದು ನಾಟಕ– ಇದುವರೆಗೆ ಈ ಸ್ಕ್ರಿಪ್ಟ್ ಪ್ರಸ್ತುತಪಡಿಸಿದ ಅತ್ಯುತ್ತಮ ನಾಟಕಗಳಲ್ಲಿ ಒಂದು ಆಗಿರಬಹುದು.

ಪ್ರಸ್ತುತ ಪ್ರಯೋಗದಲ್ಲಿ ರಂಗವಿನ್ಯಾಸವಾಗಿ ಬಳಕೆಯಾಗಿರುವ 'ಚದುರಂಗದ ಹಾಸು' ನೋಡುಗರನ್ನು ಬಹು ಮುಖ್ಯ ಪಾತ್ರವಾಗಿ ಆರಂಭದಲ್ಲೇ ಸೆಳೆದುಬಿಡುತ್ತದೆ. ನಾಟಕದ ಎಲ್ಲ ಕ್ರಿಯೆಗಳೂ, ಚಲನೆಗಳೂ ಚದುರಂಗದ ಚೌಕಗಳಲ್ಲಿಯೇ ಅಡಕವಾಗಿದ್ದು, ಪಾತ್ರಗಳೆಲ್ಲವೂ ಕಾಲ ಕಾಲಕ್ಕೆ ತಮಗೆ ಸರಿ ಕಂಡ ಚದುರಂಗದ ಹೆಜ್ಜೆಗಳನ್ನು ಇಡುತ್ತಲೇ ತಮಗರಿವಿಲ್ಲದಂತೆಯೇ, ಅದೇ ಚಂದುರಂಗದ ಕಾಯಿಗಳಲ್ಲಿ ಬಂದಿಯಾಗಿರುತ್ತಾರೆ. ನಾಟಕದಲ್ಲಿ ಜರುಗುವ ರಾಜಕೀಯ ಮತ್ತು ಧ... ಓಪನ್ ಮತ್ತು ಹಿಡನ್ ಅಜೆಂಡಾಗ... ಸಂಘರ್ಷಗಳಲ್ಲಿ ಸಾಕ್ಷೀಭೂತವಾಗಿರ... ಇದೇ ಚದುರಂಗದ ಹಾಸು.

ಈ ನಾಟಕದಲ್ಲಿ ಒಬ್ಬ ತು... ಡಾಳಾಗಿ ಕಾಣಿಸುವುದಿಲ್ಲ; ಒ... ಕೇಂದ್ರವೂ ಕಾಣಿಸುವುದಿಲ್ಲ. ತುಘಲಕನ ಹಲವು ರೂಪಗಳ... ಮಲತಾಯಿಯಲ್ಲಿ, ಬರನಿ, ಅ... ಇವರೆಲ್ಲರಲ್ಲಿ ಪ್ರಕಟಗೊಳ್ಳುವ ... ಪಾತ್ರಗಳು ಒಮ್ಮೊಮ್ಮೆ ಕೇಂದ್ರವ... ಒಡೆದು ಚಿಮ್ಮುವಂತೆ ಕಾಣಿಸಿದ... ಅವುಗಳೆಲ್ಲದರ ನೋಟವು ಕೇ... ಇರುತ್ತವೆ. ಕಾವ್ಯಾತ್ಮಕವಾಗಿರುವ... ನಾಟಕದ ಕೆಲವು ಮಾತುಗಳು–... ಮಾತುಗಳಲ್ಲಿಯೇ ನಾಟಕದ ... ಧಾತು ಕರಗದಂತೆ ನಿರ್ದೇಶಕರ... ಎಚ್ಚರವಹಿಸಿದ್ದು ನಾಟಕದ್ದುದ್ದಕ... ಕಂಡು ಬರುತ್ತದೆ– ಕೇವಲ ಕಿವಿಗೆ ಕೇ... ಮಾತುಗಳಾಗಿರದೆ, ಮನಸ್ಸಿಗೆ ನಾಟುವ... ಎಚ್ಚರದಂತೆ ಕೇಳಿಸುತ್ತದೆ.

ವಿಭಿನ್ನ ಗ್ರಹಿಕೆಗಳಿಂದ ತುಘಲಕ್ ... ನಿರ್ದೇಶನದ ಹೊಣೆ ಹೊತ್ತಿದ್ದ ಡಾ. ... ಕುಟ್ಟಿ ಮತ್ತು ಡಾ.ಶ್ರೀಪಾದ ಭಟ್ ನಾ... ಮರು ಹುಟ್ಟಿಗೆ, ಮರು ಓದಿಗೆ ಕಾರಣ... ರಾಗುತ್ತಾರೆ. ರಂಗ, ಸಂಗೀತ ವಿನ್ಯಾಸ... ನಾಟಕವನ್ನು ಕಳೆದುಕೊಳ್ಳದೆ ನಾಟಕದ ವಸ್ತುವನ್ನಷ್ಟೇ ಪ್ರದರ್ಶಿಸುವಲ್ಲಿ ನಿರ್ದೇ... ಜಾಣ್ಮೆ ಯಶಸ್ವಿಯಾಗಿದೆ. ಚದುರಂಗದ 64 ಮನೆಗಳು, ಅಗತ್ಯ ಅನ್ನಿಸಿದಾಗಲೆ... ಬಾಗಿಲು, ಕಿಟಿಕಿಗಳಾಗುತ್ತಾ ಪ್ರೇಕ್ಷಕರನ್ನು ಗೆಲ್ಲುತ್ತವೆ. ಹಿತಮಿತವಾದ ಸಂಗೀತ ಹ... ವಸ್ತ್ರವಿನ್ಯಾಸ, ನಡು ನಡುವೆ ಬರುವ ... ಕೋರಸ್‌ಗಳು, ಮಿಂಚಿ ಮರೆಯಾಗುವ... ಸಣ್ಣ ಸಣ್ಣ ಪಾತ್ರಗಳು, ಇಮಾಮ್ ಮ... ತುಘಲಕನ ದೃಶ್ಯದ ಸಂಯೋಜನೆಗಳಲ್ಲಿ ನಿರ್ದೇಶಕರ ಪ್ರತಿಭೆ ವ್ಯಕ್ತವಾಗುತ್ತದೆ.

ನಟನೆಯಲ್ಲಿ ವೆಂಕಟೇಶ್ ಪ್ರಸಾದ್ [ತುಘಲಕ್] ಮತ್ತು ಸಿದ್ಧಾರ್ಥ [ಅಝೀ... ಮಲತಾಯಿ [ಸುಷ್ಮಾ], ನಝೀಬ್ [ಕಿರ... ವಿಜೃಂಬಿಸಿದರೆ, ಪೂರಕವಾಗಿ ಬರುವ ಮಿಕ್ಕುಳಿದ ಸಣ್ಣ ಪುಟ್ಟ ಪಾತ್ರಗಳೂ ತಾ... ಕಡಿಮೆಯಿಲ್ಲ ಎನ್ನುವಂತೆ ಅಭಿನಯಿಸಿದ... ರಂಗ ಶಂಕರ ತನ್ನ ದಶಕದ ಸಾರ್ಥಕ ಸೇವೆಯನ್ನು ಗಿರೀಶ್ ಕಾರ್ನಾಡರ ನಾ... ಮರು ಹುಟ್ಟಿಗೆ ಅರ್ಥಪೂರ್ಣ ವೇದಿಕೆ... ಒದಗಿಸಿದ್ದು ಅಭಿನಂದನಾರ್ಹ. ನಾಟಕ ಮುಗಿಸಿ ಹೊರಬರುವಾಗ 'ಅಗಸ ತೊ... ಕೊಳೆಯನ್ನು ಯಾವ ಧರ್ಮಗುರುಗಳು ತೊಳೆದಿಲ್ಲ' ಎನ್ನುವ ಅಝೀಝುನ ಮಾ... ಗುಂಗು ಕಾಡುತ್ತಲೇ ಇತ್ತು.

ತುಘಲಕ್ ಪ್ರದರ್ಶನದ ಮೂಲಕ ... ಪ್ರತಿಭಾವಂತ ರಂಗ ನಿರ್ದೇಶಕರನ್ನು– ಡಾ.ಸ್ಯಾಮ್ ಕುಟ್ಟಿ ಪಟ್ಟಂಕೆರ ಮತ್ತು ಡಾ.ಶ್ರೀಪಾದ ಭಟ್ ಅವರನ್ನು–ಸಮುದಾ... ನಾಡಿಗೆ ಪರಿಚಯಿಸಿದೆ.



JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout BANGALORE-560086 Editor : NITHYANANDASWAMI